ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 10 ಶನಿವಾರ 2024

₹4

ಸಂಪುಟ: 45 | ಸಂಚಿಕೆ: 116 | ಪುಟಗಳು: 12+VIII

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


ಮಾಜಿ ಸಚಿವರು ಹಾಗೂ
ಕೆ.ಆರ್.ನಗರ ಕ್ಷೇತ್ರದ ಮಾಜಿ ಶಾಸಕರಾದ
ಸಾ.ರಾ.ಮಹೇಶ್
ರವರಿಗೆ
ಹುಟ್ಟುಹಬ್ಬದ
ಶುಭಾಶಯಗಳು
ಮೈಸೂರು ಚಲೋ

ನಕ್ಕರೆ ಅದೇ ಸ್ವರ್ಗ

ಆತ : ಪ್ರತಿದಿನ ಆಫೀಸಿಗೆ ಲೇಟಾಗಿ ಬರುತ್ತಿದ್ದವನು ಈ ದಿನ ಬೇಗ ಬಂದಿದ್ದಿಯಲ್ಲಾ ಯಾಕೆ?

ಈತ : ಹೆಂಡತಿ ಮಕ್ಕಳೆಲ್ಲಾ ಊರಿಗೆ ಹೋಗಿದ್ದಾರೆ. ತಿಂಡಿ ಅಡಿಗೆ ನನಗೊಬ್ಬನಿಗೇ. ಹಾಗಾಗಿ ಕೆಲಸ ಬೇಗ ಮುಗೀತಿದೆ.

ಮೈಸೂರು ಮಿತ್ರ

ಶನಿವಾರ, 10 ಆಗಸ್ಟ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಕೆಲವರಿಗೆ ಪ್ರೀತಿ ಎಂದರೆ ಅನುಮಾನ, ಕೆಲವರಿಗೆ ಅದು ಸಂಬಂಧ, ಇನ್ನು ಕೆಲವರಿಗೆ ಅದು ಸೆಂಟಿಮೆಂಟ್, ಆದರೆ ಅದು ನನಗೆ ಒಂದು ಪುಟ್ಟ ಜಗತ್ತು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಡಿ ಉಂಡವ ಕೆಟ್ಟ, ಜಾಡ ನೇಯದೇ ಕೆಟ್ಟ

ನಿಮ್ಮ ಪತ್ರಗಳು

ಅಪಾಯದ ಪಾದಚಾರಿ ಮಾರ್ಗ



ಮಾನ್ಯರೆ,

ಅಡ್ಡಾದಿಡ್ಡಿ ಪಾರ್ಕಿಂಗ್ ವ್ಯವಸ್ಥೆಯಿಂದ ಪಾದಚಾರಿಗಳ ಪರದಾಟ, ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲೊಂದು ಅಪಾಯದ ಪಾದಚಾರಿ ಮಾರ್ಗ.

ಇದು ಮೈಸೂರು ನಗರದ ಅತಿ ಗಣ್ಯಾತಿ ಗಣ್ಯರು ಸಂಚಾರ ಮಾರ್ಗವೆನಿಸಿರುವ ಚಾಮರಾಜ ಜೋಡಿ ರಸ್ತೆಯ ಸೀತಾವಿಲಾಸ ಛತ್ರದ ಸನಿಹ ಇರುವ ಡಿಸಿಬಿ ಬ್ಯಾಂಕ್ ಮುಂದಿನ ದೃಶ್ಯ. ರಸ್ತೆಯೊಂದಿಗೆ ಫುಟ್‌ಪಾತ್ ಅತಿಕ್ರಮಿಸಿಕೊಂಡು ವಾಹನಗಳನ್ನು ಬೆಳಿಗ್ಗೆಯಿಂದ ಸಂಜೆಯವರೆಗೂ ಪಾರ್ಕಿಂಗ್ ಮಾಡಿ ಸಂಚಾರಕ್ಕೆ ಅಡಚಣೆ ಉಂಟು ಮಾಡಲಾಗುತ್ತಿದೆ. ಹಿರಿಯರು, ಮಕ್ಕಳು, ಮಹಿಳೆಯರು, ಪಾದಚಾರಿಗಳು ನಡೆದಾಡಲು ಸ್ಥಳ ಬಿಡದಷ್ಟು ಬ್ಯಾಂಕಿನ ಸಿಬ್ಬಂದಿ ಆಕ್ರಮಿಸಿಕೊಂಡಿದ್ದಾರೆ. ತುಂಬಾ ಇಕ್ಕಟ್ಟಿನಿಂದ ನಡೆದಾಡಬೇಕಾದ ಸ್ಥಿತಿ ಸಾರ್ವಜನಿಕರದ್ದಾಗಿದೆ. ಅಲ್ಲದೆ ಪಕ್ಕದಲ್ಲೇ ಇಡೀ ಕಟ್ಟಡಕ್ಕೆ ಸಂಬಂಧಪಟ್ಟ ಭಾರೀ ಗಾತ್ರದ ವಿದ್ಯುತ್ ಕಂಬ ಮತ್ತೆ ದೊಡ್ಡ ವಿದ್ಯುತ್ ಬಾಕ್ಸ್ ಕೂಡ ಅಳವಡಿಸಲಾಗಿದೆ. ಇದರಿಂದ ಏನಾದರೂ ಅವಘಡ ಸಂಭವಿಸಿದರೆ ಯಾರು ಹೊಣೆ ಆಗುತ್ತಾರೆ. ಇದರೊಂದಿಗೆ ಬ್ಯಾಂಕಿನ ಮೆಟ್ಟಿಲುಗಳು ರಸ್ತೆಗೆ ಬಂದು ಒತ್ತುವರಿಯಾದಂತಿದೆ. ಸಂಬಂಧಿಸಿದವರು ಯಾರು ಇತ್ತ ಗಮನ ಕೊಡದೆ ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ದಯವಿಟ್ಟು ಮೈಸೂರು ಮಹಾನಗರ ಪಾಲಿಕೆ ಇದರ ಬಗ್ಗೆ ಸೂಕ್ತ ಕ್ರಮವಹಿಸಿ ಪಾದಚಾರಿಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಮನವಿ.

–ಎನ್.ಕುಮಾರಸ್ವಾಮಿ, ಸಾಮಾಜಿಕ ಚಿಂತಕರು, ಮೈಸೂರು.

ಸಾಧಕ ರಾಜಕಾರಣಿ ದಿವಂಗತ ಬಿ.ರಾಚಯ್ಯ

ಮಾನ್ಯರೆ,

ಸಾರ್ಥಕ ಬದುಕಿನ ಸಾಧಕ ರಾಜಕಾರಣಿ ದಿವಂಗತ ಬಿ.ರಾಚಯ್ಯ. ಅವರ ರಾಜಕೀಯ ಜೀವನದ ಉದ್ದಗಲಕ್ಕೂ ಹತ್ತು ಹಲವು ಶಾಶ್ವತ ಯೋಜನೆಯನ್ನು ಜಾರಿಗೆ ತಂದ ಧೀಮಂತ ರಾಜಕಾರಣಿ. ರಾಜ್ಯದ ಸಂಪುಟದಲ್ಲಿ ಅರಣ್ಯ, ಗೃಹ ಸೇರಿದಂತೆ ಹಲವಾರು ಖಾತೆಯನ್ನು ದಕ್ಷ ಹಾಗೂ ಸಮರ್ಪಕವಾಗಿ ನಿರ್ವಹಿಸಿದ ಪ್ರಾಮಾಣಿಕರಿವರು. ಕೇರಳದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ ಕೀರ್ತಿ ಇವರದ್ದು.

ತಮ್ಮ ಅಧಿಕಾರದ ಅವಧಿಯಲ್ಲಿ ರೌಡಿ ಶೀಟರ್‌ಗಳನ್ನು ಮಟ್ಟಹಾಕಿದ್ದ ಕೆಚ್ಚೆದೆಯ ನಾಯಕ. ರೈತರಿಗಾಗಿ ಶಾಶ್ವತ ನೀರಾವರಿ ಯೋಜನೆಯನ್ನು ಜಾರಿಗೆ ತಂದ ಕೀರ್ತಿ ಇವರದು. ಚಾಮರಾಜನಗರ ಜಿಲ್ಲೆಯ ಅವಳಿ ಜಲಾಶಯಗಳಾದ ಸುವರ್ಣಾವತಿ ಮತ್ತು ಚಿಕ್ಕಹೊಳೆ ಜಲಾಶಯಗಳ ನಿರ್ಮಾತೃ ಬಿ.ರಾಚಯ್ಯ. ಬಡವರಿಗಾಗಿ ಕುಂಬೇಶ್ವರ, ಮಹದೇಶ್ವರ, ಕಾಳಿಕಾಂಬ ಕಾಲೋನಿ ಸೇರಿದಂತೆ ವಿವಿಧ ಕಾಲೋನಿ ನಿರ್ಮಿಸಿ ಅಲ್ಲಿ ವಾಸಿಸುವ ಜನರಿಗೆ ಎರಡು ಎಕರೆ ಭೂಮಿ ನೀಡಿ ಬದುಕು ಕಟ್ಟಿಕೊಟ್ಟವರು ಬಿ.ರಾಚಯ್ಯ. ಹಣ, ಆಸ್ತಿ ಗಳಿಸದೆ ನಿಸ್ವಾರ್ಥ ಸೇವೆ ಸಲ್ಲಿಸಿ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ. ಇವರ ಬದುಕು ಇತರರಿಗೂ ಮಾದರಿ.

ರಾಚಯ್ಯನವರಿಗೆ ಆಗಸ್ಟ್ 10ರಂದು 102 ನೇ ಜನ್ಮ ದಿನಾಚರಣೆ. ಇದರ ಅಂಗವಾಗಿ ಅವರ ಸ್ವಗ್ರಾಮವಾದ ಆಲೂರಿನಲ್ಲಿ ಭವ್ಯ ಸ್ಮಾರಕ ನಿರ್ಮಿಸಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಂದ ಲೋಕಾರ್ಪಣೆಗೊಳಿಸಲು ಮಕ್ಕಳಾದ ಶಾಸಕ ಎ.ಆರ್. ಕೃಷ್ಣಮೂರ್ತಿ ಮತ್ತು ಬಾಲರಾಜ್ ಈಗಾಗಲೇ ವೇದಿಕೆ ಸಜ್ಜುಗೊಳಿಸಿದ್ದಾರೆ. ಅವರಿಗೆ ಜನ್ಮದಿನದ ಶುಭಾಶಯಗಳೊಂದಿಗೆ ಅವರ ಬದುಕು ಇತರರಿಗೂ ಪ್ರೇರಣೆಯಾಗಲಿ ಎಂದು ಆಶಿಸುತ್ತೇವೆ

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

ಮೈಸೂರು ತಲುಪಿದ ಬಿಜೆಪಿ–ಜೆಡಿಎಸ್ 'ಮೈಸೂರು ಚಲೋ' ಪಾದಯಾತ್ರೆ

● ದಣಿದ ಉಭಯ ಪಕ್ಷಗಳ ಕಾರ್ಯಕರ್ತರಿಗೆ ವರುಣನ ಸಿಂಚನ ● ಇಂದು ಜೆ.ಕೆ.ಮೈದಾನದಿಂದ ಪಾದಯಾತ್ರೆಯಲ್ಲೇ ಮಹಾರಾಜ ಕಾಲೇಜು ಮೈದಾನ ಪ್ರವೇಶ





ಬಿಜೆಪಿ–ಜೆಡಿಎಸ್‌ನ 'ಮೈಸೂರು ಚಲೋ' ಪಾದಯಾತ್ರೆ ಶುಕ್ರವಾರ ಸಂಜೆ ಮೈಸೂರು ತಲುಪಿತು. ಮಾಜಿ ಸಚಿವರಾದ ಅಶ್ವಥ್‌ನಾರಾಯಣ, ಶ್ರೀರಾಮುಲು, ರೇಣುಕಾಚಾರ್ಯ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಜಿ.ಡಿ.ಹರೀಶ್‌ಗೌಡ, ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಕಾರ್ಪೋರೇಟರ್ ಕೆ.ವಿ.ಶ್ರೀಧರ್ ಹಾಗೂ ಕಾರ್ಯಕರ್ತರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಆ.9(ಎಂಕೆ)– ಮುಡಾ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ–ಜೆಡಿಎಸ್ ಹಮ್ಮಿಕೊಂಡಿರುವ 'ಮೈಸೂರು ಚಲೋ' ಪಾದಯಾತ್ರೆ ಶುಕ್ರವಾರ ಸಂಜೆ ಮಳೆಯ ನಡುವೆ ಮೈಸೂರು ತಲುಪಿತು.

ಬೆಂಗಳೂರಿನ ಕೆಂಗೇರಿಯಿಂದ ಆ.3ರಂದು ಆರಂಭಗೊಂಡ ಪಾದಯಾತ್ರೆಯಲ್ಲಿ ಉಭಯ ಪಕ್ಷದ ನಾಯಕರು ಹಾಗೂ ಸಹಸ್ರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು. ಕಳೆದ 7 ದಿನಗಳಿಂದ ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ, ಶ್ರೀರಂಗ ಪಟ್ಟಣ ಮಾರ್ಗವಾಗಿ ಮೈಸೂರಿಗೆ ಆಗಮಿಸಿತು.

ಪಾದಯಾತ್ರೆಯು ಶುಕ್ರವಾರ ಸಂಜೆ 6 ಗಂಟೆ ಸುಮಾರಿಗೆ ಮೈಸೂರಿನ ಮಣಿಪಾಲ್ ಆಸ್ಪತ್ರೆ ಸಮೀಪ (ದ ಏಟ್ರಿಯಂ) ಆಗಮಿಸುತ್ತಿದ್ದಂತೆ ವರುಣನ ಸಿಂಚನವಾಯಿತು. ನೋಡ ನೋಡುತ್ತಿದ್ದಂತೆ ಕೆಲ ನಿಮಿಷದಲ್ಲೇ ಜೋರಾಯಿತು. ಮಳೆಯ ನಡುವೆಯೂ ಬಿಜೆಪಿ–ಜೆಡಿಎಸ್ ನಾಯಕರು, ಕಾರ್ಯಕರ್ತರು ಅತ್ಯುತ್ಸಾಹದಿಂದ ಹೆಜ್ಜೆಹಾಕಿದರು.

ಮಣಿಪಾಲ್ ಆಸ್ಪತ್ರೆ ವೃತ್ತದಲ್ಲಿ ಉಭಯ ಪಕ್ಷದ ನಾಯಕರನ್ನು ಬೃಹತ್ ಸೇಬು, ಪೈನಾಪಲ್ ಹಾರಹಾಕಿ, ಪಟಾಕಿ ಸಿಡಿಸುವ ಮೂಲಕ ಅದ್ಧೂರಿಯಾಗಿ ಸ್ವಾಗತಿಸಲಾಯಿತು. ನಂತರ ಮಳೆಯಲ್ಲೇ ಮುಂದುವರೆದ ಪಾದಯಾತ್ರೆ ಮೈಸೂರು–ಬೆಂಗಳೂರು ಹೆದ್ದಾರಿ ಮೂಲಕ ಎಲ್‌ಐಸಿ ವೃತ್ತ(ಮಿಲೆನಿಯಂ ಸರ್ಕಲ್) ಮಾರ್ಗವಾಗಿ ನೆಲ್ಸನ್ ಮಂಡೇಲಾ ರಸ್ತೆ, ಬನ್ನಿ ಮಂಟಪ, ಸಯ್ಯಾಜಿರಾವ್ ರಸ್ತೆ ಹಳೇ ಆರ್‌ಎಂಸಿ ವೃತ್ತ, ಶೇಷಾದ್ರಿ ಅಯ್ಯರ್ ರಸ್ತೆ ಮಾರ್ಗವಾಗಿ ಸಂಜೆ 7.30ರ ವೇಳೆಗೆ ಜೆ.ಕೆ.ಮೈದಾನ ತಲುಪಿತು. ಜಡಿ ಮಳೆಯ ನಡುವೆ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗುತ್ತಾ ವಿಪಕ್ಷ ನಾಯಕ ಆರ್. ಅಶೋಕ್, ಮಾಜಿ ಸಚಿವರಾದ ಅಶ್ವಥ್ ನಾರಾಯಣ, ಶ್ರೀರಾಮುಲು, ರೇಣುಕಾ ಚಾರ್ಯ, ಎನ್.ಮಹೇಶ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಸಂಸದ ಪ್ರತಾಪ್ ಸಿಂಹ, ಶಾಸಕರಾದ ಟಿ.ಎಸ್.ಶ್ರೀವತ್ಸ, ಜಿ.ಡಿ. ಹರೀಶ್‌ಗೌಡ, ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಇನ್ನಿತರ ಉಭಯ ಪಕ್ಷದ ನಾಯಕರು ಹಾಗೂ ಸಾವಿರಾರು ಸಂಖ್ಯೆಯ ಕಾರ್ಯಕರ್ತರು ಕಲಾ ತಂಡಗಳು ಹಾಗೂ ಧ್ವನಿವರ್ಧಕದ ಹಾಡಿಗೆ ಹೆಜ್ಜೆಹಾಕಿದರು.

> ❝ ಮೈಸೂರಿನ ತಾಯಿ ಚಾಮುಂಡೇಶ್ವರಿಯಲ್ಲಿ ಪೂಜೆ ಸಲ್ಲಿಸಿ, ಬೆಂಗಳೂರಿನಲ್ಲಿ ಕೆಂಪಮ್ಮ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಪಾದಯಾತ್ರೆ ಶುರುವಾದಾಗ ವರುಣ ದೇವರು ಆಶೀರ್ವಾದ ಮಾಡಿ ಅಲ್ಲಿಂದ ಬೀಳ್ಕೊಡುಗೆ ನೀಡಲಾಗಿತ್ತು. ಇಂದು ಸಹ ಮೈಸೂರಿಗೆ ಪಾದಾರ್ಪಣೆ ಮಾಡಿದಾಗ ಶುಭ ಸೂಚನೆಯಂತೆ ವರುಣ ದೇವ ಆಶೀರ್ವಾದ ಮಾಡಿದ್ದಾರೆ. ರಾಜ್ಯದಲ್ಲಿ ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ನಡೆದ ಪಾದಯಾತ್ರೆ ನಾಳೆ(ಆ.10) ತಾರ್ಕಿಕ ಅಂತ್ಯ ಕಾಣಲಿದ್ದು, ಪಕ್ಷದ ಎಲ್ಲಾ ಮುಖಂಡರು, ಕಾರ್ಯಕರ್ತರು ಭಾಗವಹಿಸಬೇಕು.
>
> –ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಬೃಹತ್ ಪ್ರತಿಭಟನಾ ಸಮಾವೇಶ...

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಾಳೆ(ಆ.10) ಬೆಳಗ್ಗೆ 10.30ಕ್ಕೆ ಆರಂಭವಾಗುವ ಬೃಹತ್ ಪ್ರತಿಭಟನಾ ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿ–ಜೆಡಿಎಸ್ ಕಾರ್ಯಕರ್ತರು ಭಾಗವಹಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕರೆ ನೀಡಿದರು. 'ಮೈಸೂರು ಚಲೋ' ಪಾದಯಾತ್ರೆ ಮೈಸೂರಿನ ಜೆ.ಕೆ.ಮೈದಾನ ತಲುಪಿದ ವೇಳೆ ಕಾರ್ಯಕರ್ತರನುದ್ದೇಶಿಸಿ ಮಾತನಾಡಿದ ಅವರು, ನಾಳೆ(ಆ.10) ಇಲ್ಲಿಂದಲೇ (ಜೆ.ಕೆ.ಮೈದಾನ) ಮಹಾರಾಜ ಕಾಲೇಜು ಮೈದಾನದವರೆಗೆ ಕಾರ್ಯಕ್ರಮಗಳು ನಡೆಯಲಿವೆ. ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಹೆಚ್.ಡಿ.ಕುಮಾರಸ್ವಾಮಿಯವರು ಇರಲಿದ್ದಾರೆ. ಕೇಂದ್ರದ ಸಚಿವರು, ಬಿಜೆಪಿ–ಜೆಡಿಎಸ್‌ನ ಎಲ್ಲಾ ಶಾಸಕರು, ಮಾಜಿ ಶಾಸಕರು, ಮುಖಂಡರು ಭಾಗವಹಿಸಲಿದ್ದಾರೆ. ಒಂದು ಲಕ್ಷಕ್ಕೂ ಹೆಚ್ಚು ಸಂಖ್ಯೆಯಲ್ಲಿ ರಾಜ್ಯದ ಮೂಲೆ ಮೂಲೆಯಿಂದ ಕಾರ್ಯಕರ್ತರು ಆಗಮಿಸಲಿದ್ದಾರೆ. ತಾವೆಲ್ಲರೂ ಸಮಾವೇಶದಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರಲ್ಲದೆ ಪಾದಯಾತ್ರೆಯಲ್ಲಿ ಭಾಗವಹಿಸಿದವರಿಗೆ ಕೃತಜ್ಞತೆ ಸಲ್ಲಿಸಿದರು.

ಇಡುಗಾಯಿ ಒಡೆದ ನಿಖಿಲ್: 'ಮೈಸೂರು ಚಲೋ' ಪಾದಯಾತ್ರೆ ಶ್ರೀರಂಗಪಟ್ಟಣದಿಂದ ಮೈಸೂರು ಕಡೆಗೆ ಬೈಪಾಸ್ ರಸ್ತೆ ತಲುಪಿದ ವೇಳೆ ಇಡುಗಾಯಿ ಒಡೆದ ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ರಸ್ತೆಗೆ ತಲೆ ಬಾಗಿ ನಮಿಸಿದರು. ಈ ವೇಳೆ ಜೆಡಿಎಸ್ ಕಾರ್ಯಕರ್ತರು ಜೈಕಾರ ಕೂಗಿದರು. ನಂತರ ಪಾದಯಾತ್ರೆ ಮುಂದೆ ಸಾಗಿದಂತೆ ರಿದಂ ಹಾಡಿಗೆ ಹೆಜ್ಜೆ ಹಾಕಿದ ನಿಖಿಲ್ ಕುಮಾರಸ್ವಾಮಿ, ಕಾರ್ಯಕರ್ತರಲ್ಲಿ ಉತ್ಸಾಹ ಹೆಚ್ಚಿಸಿದರು.



ಶ್ರೀರಂಗಪಟ್ಟಣದಿಂದ ಮೈಸೂರು ರೋಡ್ ತಲುಪಿದ ವೇಳೆ ಇಡುಗಾಯಿ ಹೊಡೆದ ಯುವ ಜನತಾದಳದ ರಾಜ್ಯಾಧ್ಯಕ್ಷ ನಿಖಿಲ್.

ಪೊಲೀಸರ ವಿರುದ್ಧ ಆಕ್ರೋಶ: ಮೈಸೂರು ಪ್ರವೇಶಕ್ಕಿನ್ನು 2 ಕಿಲೋ ಮೀಟರ್ ದೂರ ಇದ್ದಂತೆ ಪಾದಯಾತ್ರೆಯನ್ನು ತಡೆದ ಪೊಲೀಸರ ವಿರುದ್ಧ ಬಿಜೆಪಿ–ಜೆಡಿಎಸ್ ಕಾರ್ಯಕರ್ತರು, ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು. ಕಾಂಗ್ರೆಸ್ ಸಮಾವೇಶ ಮುಗಿಯಲಿ. ನಗರದಲ್ಲಿ ಜನಸಂದಣಿ ಹೆಚ್ಚಾಗಿರುವುದರಿಂದ ಸ್ವಲ್ಪ ಹೊತ್ತು ಪಾದಯಾತ್ರೆ ನಡೆದಿದ್ದು, ಕೆಲ ನಿಮಿಷಗಳ ನಂತರ ಅವಕಾಶ ಮಾಡಿಕೊಡುತ್ತೇವೆ ಎಂದರೂ ಈ ರೀತಿ ಪಾದಯಾತ್ರೆ ನಡೆಯುವುದು ಸರಿಯಲ್ಲ ಎಂದು ಆಕ್ರೋಶ ಹೊರಹಾಕಿದರು. ಇದರಿಂದ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ನಾಳೆ ಉತ್ತರ ನೀಡುತ್ತಾರೆ: ಈ ಬಗ್ಗೆ ಮಾತನಾಡಿದ ನಿಖಿಲ್ ಕುಮಾರಸ್ವಾಮಿ, ರಾಜ್ಯ ಕಾಂಗ್ರೆಸ್ ಸರ್ಕಾರ ಜನತೆಯ ದಿಕ್ಕು ತಪ್ಪಿಸುತ್ತಿದೆ. ನಿಮ್ಮೆಲ್ಲರ ಆಶೀರ್ವಾದಿಂದ ಕೇಂದ್ರ ಸಚಿವರಾಗಿರುವ ಕುಮಾರಸ್ವಾಮಿಯವರು ಕಾಂಗ್ರೆಸ್ ಹಗರಣ ಸೇರಿದಂತೆ ಎಲ್ಲದಕ್ಕೂ ಉತ್ತರ ಕೊಡುತ್ತಾರೆ ಎಂದು ಹೇಳಿದರಲ್ಲದೆ, ಪಾದ ಯಾತ್ರೆಯಲ್ಲಿ ಹೆಜ್ಜೆ ಹಾಕಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ಊಟದ ವ್ಯವಸ್ಥೆ: ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಬಿಜೆಪಿ–ಜೆಡಿಎಸ್ ಕಾರ್ಯಕರ್ತರಿಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಪುಟ್ಟಮ್ಮ ರಾಮಯ್ಯ ಚೌಟ್ರಿಯಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು.

ಬಗ್ಗೋನು ಅಲ್ಲ... ಜಗ್ಗೋನು ಅಲ್ಲ...





ಸಮಾವೇಶದಲ್ಲಿ ನೆರೆದಿದ್ದ ಜನಸ್ತೋಮ

ಐದನೇ ಪುಟದಿಂದ

15 ಬಾರಿ ಬಜೆಟ್ ಮಂಡನೆ ಮಾಡಿ ದಾಖಲೆ ಬರೆದಿರುವ ನನ್ನ ಮೇಲೆ ಒಂದು ಸಣ್ಣ ಕಪ್ಪು ಚುಕ್ಕೆ ಸಹ ಇಲ್ಲ. ನನ್ನ ರಾಜಕೀಯ ಜೀವನ ತೆರೆದ ಪುಸ್ತಕ. ಜಮೀನು ಖರೀದಿಸುವ, ಬಿಲ್ಡಿಂಗ್‌ಗಳನ್ನು ಕಟ್ಟುವ, ಆಸ್ತಿಗಳನ್ನು ಮಾಡುವ ವ್ಯಾಮೋಹ ನನಗೆ ಯಾವತ್ತೂ ಬಂದಿಲ್ಲ.

ನನ್ನ ಧರ್ಮಪತ್ನಿ ಪಾರ್ವತಿ ಎಂದೂ ಸಾರ್ವಜನಿಕ ಸಮಾರಂಭದಲ್ಲಿ ಭಾಗಿಯಾಗಿಲ್ಲ. ಇಲ್ಲಿ ತನಕ ನಾನು ಪ್ರಮಾಣ ವಚನ ಸ್ವೀಕರಿಸುವ ಸಮಾರಂಭದಲ್ಲೂ ಪಾಲ್ಗೊಂಡಿಲ್ಲ. ಇಲ್ಲಿರುವ ಎಷ್ಟೊ ಮಂತ್ರಿಗಳು, ಶಾಸಕರು ನನ್ನ ಪತ್ನಿ ಮುಖವನ್ನೆ ನೋಡಿಲ್ಲ. ಹೀಗಿರುವಾಗ ನಾನಾಗಲೀ, ನನ್ನ ಪತ್ನಿಯಾಗಲೀ ತಪ್ಪು ಮಾಡಲು ಸಾಧ್ಯವೆ? ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಈ ತನಕ ನಾವು ಯಾರಿಗೂ ದ್ರೋಹ ಮಾಡಿಲ್ಲ, ಮುಂದೆ ಮಾಡುವುದೂ ಇಲ್ಲ ಎಂದು ಹೇಳಿದರು. ನನ್ನ ರಾಜಕೀಯ ಜೀವನ ಶೂನ್ಯದಿಂದ ಆರಂಭವಾಯಿತು. ಮೊದಲ ಬಾರಿಗೆ ಚುನಾವಣೆಗೆ ನಿಂತಾಗ ಡಿಪಾಸಿಟ್ ಕಟ್ಟಲು ಹಣ ಇರಲಿಲ್ಲ. ಆದರೆ ಜನರೇ ಹಣ ಸಂಗ್ರಹಿಸಿ ನನ್ನ ಗೆಲ್ಲಿಸಿದರು. ಆ ದಿನಕ್ಕೆ 63 ಸಾವಿರ ರೂಪಾಯಿ ಖರ್ಚಾಗಿತ್ತು ಎಂದು ತಮ್ಮ ರಾಜಕೀಯ ಜೀವನವನ್ನು ಮೆಲುಕು ಹಾಕಿದ ಸಿದ್ದರಾಮಯ್ಯ, ನಾನು ಸ್ಪರ್ಧೆ ಮಾಡಿದ 9 ಚುನಾವಣೆಯಲ್ಲಿ ಮನೆಯಿಂದ ಒಂದು ನಯಾ ಪೈಸೆಯನ್ನು ತಂದಿಲ್ಲ. ಜನರೆ ನನ್ನ ಗೆಲ್ಲಿಸಿದ್ದಾರೆ ಎಂದರು.

ಇಷ್ಟೊಂದು ಜನ ಬೆಂಬಲ ಇರುವ ನನ್ನ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ಎಷ್ಟೇ ಪಾದಯಾತ್ರೆ ಮಾಡಿದರೂ ನಾನು ಬಗ್ಗುವವನಲ್ಲ ಎಂದು ವಿಪಕ್ಷಗಳಿಗೆ ತಿರುಗೇಟು ನೀಡಿದರು. ಸಹಸ್ರಾರು ಸಂಖ್ಯೆಯಲ್ಲಿ ಸೇರಿರುವ ನಿಮ್ಮ ಬೆಂಬಲ ನನಗಿರುವಾಗ ನನ್ನ ಸರ್ಕಾರವನ್ನು ಅಲ್ಲಾಡಿಸಲು ಅವರಿಗೆ ಸಾಧ್ಯವಾಗುವುದಿಲ್ಲ ಎಂದು ಎಚ್ಚರಿಸಿದರು.

ವಾಲ್ಮೀಕಿ ನಿಗಮದಲ್ಲಿ ಭ್ರಷ್ಟಾಚಾರ ನಡೆದಿರುವುದು ನಿಜ. ಆ ಹಗರಣಕ್ಕೂ ನನಗೂ ಯಾವುದೇ ಸಂಬಂಧವಿಲ್ಲ. ಆದರೆ ನನ್ನ ರಾಜಕೀಯವಾಗಿ ಸಿಲುಕಿಸಿ, ತುಳಿಯಲು ಕುಟಿಲ ತಂತ್ರಗಳನ್ನು ಎಣೆಯುತ್ತಿದ್ದಾರೆ. ಯಾವುದೇ ರೀತಿಯ ಸಾಕ್ಷಿ ಇಲ್ಲದಿದ್ದರೂ ಇಡಿಯವರು ಸ್ವಯಂ ಪ್ರೇರಣೆಯ ದೂರು ದಾಖಲಿಸಿಕೊಂಡಿದ್ದಾರೆ ಎಂದು ಸಿದ್ದರಾಮಯ್ಯ ಆರೋಪಿಸಿದರು. ಆದರೆ ವಾಲ್ಮೀಕಿ ಹಗರಣದಲ್ಲಿ ನನ್ನ ಪಾತ್ರ ಇಲ್ಲ ಎಂದು ಇಡಿಯವರಿಗೆ ಮನದಟ್ಟಾಗಿದೆ. ಆದ ಕಾರಣ ಈಗ ಮುಡಾ ಹಗರಣವೆಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಆದರೆ ಮುಡಾ ಹಗರಣವೇ ಅಲ್ಲ. ನನ್ನ ಪತ್ನಿ ಪಾರ್ವತಿಗೆ ಬದಲಿ ನಿವೇಶನ ನೀಡುವ ಪ್ರಕ್ರಿಯೆಯಲ್ಲಿ ನನ್ನ ಯಾವುದೇ ಆದೇಶವಾಗಲಿ, ಹೇಳಿಕೆಯಾಗಲೀ ಇಲ್ಲ. ಆದರೆ ಮುಡಾ ಹಗರಣವೆಂದು ಆರೋಪ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನನ್ನ ಪತ್ನಿ ಪಾರ್ವತಿಗೆ ಸೇರಿದ 3.16 ಎಕರೆ ಜಮೀನನ್ನು ಮುಡಾ ಸ್ವಾಧೀನಕ್ಕೆ ಪಡೆದು ಬಡಾವಣೆ ಕೂಡ ನಿರ್ಮಾಣ ಮಾಡಿದೆ. ಈ ಹಿನ್ನೆಲೆಯಲ್ಲಿ 1.48 ಲಕ್ಷ ಚದರಡಿಗೆ ಬದಲಾಗಿ ಅಭಿವೃದ್ಧಿಪಡಿಸಿದ ಬಡಾವಣೆಯಲ್ಲಿ 38,184 ಚದರಡಿ ಭೂಮಿ ನೀಡಿದ್ದಾರೆ. ಆದರೆ ಇಂತಹುದೆ ಜಾಗದಲ್ಲಿ ಭೂಮಿ ನೀಡುವಂತೆ ನಾನುಕೇಳ ಲಿಲ್ಲ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ನಿವೇಶನಗಳ ನೀಡಿದ್ದು, ನಾನು ಮುಡಾದ ಯಾವ ಸದಸ್ಯನಿಗೂ ಫೋನ್ ಮಾಡಿ ಭೂಮಿ ಪಡೆಯಲು ಪ್ರಭಾವ ಬೀರಿಲ್ಲ ಎಂದು ಸ್ಪಷ್ಟನೆ ನೀಡಿದರು.

ಭೂ ಸ್ವಾಧೀನ ಮಾಡಿಕೊಂಡ ಸುಂದರಮ್ಮ ಕೇಸ್‌ನಲ್ಲಿ ಅಷ್ಟೇ ಪ್ರಮಾಣದ ಭೂಮಿ ನೀಡುವಂತೆ ಹೈಕೋರ್ಟ್ ಆದೇಶ ನೀಡಿತ್ತು. ಈಗಾಗಲೇ ಭೂ ಸ್ವಾಧೀನ ಮಾಡಿಕೊಂಡ ನನ್ನ ಪತ್ನಿ ಭೂಮಿಯಲ್ಲಿ ಬಡಾವಣೆ ನಿರ್ಮಿಸಿದ ಕಾರಣ ಕಾನೂನಾತ್ಮಕವಾಗಿ ಮೂರು ಪಟ್ಟು ಪರಿಹಾರ ನೀಡಬೇಕಾಗುತ್ತದೆ. ಅದರಂತೆ ನಮಗೂ 62 ಕೋಟಿ ಪರಿಹಾರ ನೀಡಬೇಕಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ. ಆದರೆ ನಾನೇ 62 ಕೋಟಿ ಕೇಳಿದೆ ಎಂದು ಬಿಜೆಪಿ, ಜೆಡಿಎಸ್ ಬೊಬ್ಬೆ ಹಾಕಿದವು ಎಂದು ಸಿದ್ದರಾಮಯ್ಯ ಕಿಡಿಕಾರಿದರು.

ನನ್ನ ಪತ್ನಿ ಪಾರ್ವತಿಗೆ ನಿವೇಶನ ನೀಡಿರುವುದನ್ನು ಹಗರಣವೆಂದು ಬಿಂಬಿಸಲಾಗಿದ್ದು, ರಾಜಭವನವನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ಯಡಿಯೂರಪ್ಪ, ವಿಜಯೇಂದ್ರ, ಕುಮಾರಸ್ವಾಮಿ, ಅಶೋಕ್ ಹಾಗೂ ಕೇಂದ್ರ ಸರ್ಕಾರ ಸೇರಿಕೊಂಡು ನಮ್ಮ ಸರ್ಕಾರ ಅಸ್ಥಿರ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.


ಹೆಚ್.ಡಿ.ಕುಮಾರಸ್ವಾಮಿ, ಶಶಿಕಲಾ ಜೊಲ್ಲೆ, ಮುರುಗೇಶ್ ನಿರಾಣಿ ವಿರುದ್ಧ ದೂರು ನೀಡಿದ್ದರೂ ಈ ತನಕ ನೋಟಿಸ್ ಜಾರಿ ಮಾಡದ ರಾಜ್ಯಪಾಲರು ನನ್ನ ವಿರುದ್ಧ ದೂರು ಕೊಟ್ಟ ದಿನವೇ ತರಾತುರಿಯಲ್ಲಿ ಶೋಕಾಸ್ ನೋಟಿಸ್ ಜಾರಿ ಮಾಡಿದ್ದಾರೆ. ಈ ಮೂಲಕ ಸಂವಿಧಾನ ಹಾಗೂ ಕಾನೂನಿನ ನಿಯಮಗಳನ್ನು ಗಾಳಿಗೆ ತೂರಿದ್ದಾರೆ ಎಂದು ಆಪಾದಿಸಿದರು. ನನ್ನ ವಿರುದ್ಧ ದೂರು ನೀಡಿರುವ ಟಿ.ಜೆ.ಅಬ್ರಾಹಾಂ ವಿರುದ್ಧ ಡಾ.ಶುಭಾ ಎಂಬಾಕೆ ಬ್ಲ್ಯಾಕ್ ಮೇಲ್ ಕೇಸ್ ದಾಖಲಿಸಿದ್ದಾರೆ. ಯಾವುದೇ ಅರ್ಹತೆ ಇಲ್ಲದ ಇಂತಹ ವ್ಯಕ್ತಿಯ ದೂರು ಸ್ವೀಕರಿಸಿ ರಾಜ್ಯಪಾಲರು ನನಗೆ ನೋಟಿಸ್ ಜಾರಿ ಮಾಡಿದ್ದಾರೆ ಎಂದು ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಕೋಮುವಾದಿ, ಜಾತಿವಾದಿ, ಪಾಳೆಗಾರರನ್ನು ಓಡಿಸಬೇಕು

ಕೋಮುವಾದಿ, ಜಾತಿವಾದಿ ಹಾಗೂ ಪಾಳೆಗಾರ ಪ್ರವೃತ್ತಿ ಇರುವವರನ್ನು ಮೊದಲು ಓಡಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು. ಇಲ್ಲಿ ನೆರೆದಿರುವ ನೀವೆಲ್ಲಾ ಯುದ್ಧಕ್ಕೆ ಸನ್ನದ್ಧರಾಗಿರುವ ಸೈನಿಕರು. ಪ್ರಜಾಪ್ರಭುತ್ವ ಅಪಾಯಕ್ಕೆ ಸಿಲುಕಿದಾಗ ಹೋರಾಟ ಮಾಡುವ ಯೋಧರು. ನೀವೆಲ್ಲಾ ಸೇರಿ ಕೋಮುವಾದಿ, ಜಾತಿವಾದಿ ಹಾಗೂ ಪಾಳೆಗಾರರನ್ನು ಓಡಿಸಬೇಕು ಎಂದು ಸಲಹೆ ನೀಡಿದರು. 2006 ರಲ್ಲಿ ಬಿಜೆಪಿ ಜೊತೆ ಹೆಚ್.ಡಿ.ಕುಮಾರಸ್ವಾಮಿ ಸರ್ಕಾರ ರಚನೆ ಮಾಡಿದರೆ ನನ್ನ ಹೆಣದ ಮೇಲೆ ಸರ್ಕಾರ ಮಾಡಿ ಎನ್ನುತ್ತಿದ್ದ ಹೆಚ್.ಡಿ. ದೇವೇಗೌಡರು, ನಂತರ ನರೇಂದ್ರ ಮೋದಿ ಪ್ರಧಾನಿಯಾದರೆ ದೇಶ ಬಿಟ್ಟು ಹೋಗುತ್ತೇನೆ ಎನ್ನುತ್ತಿದ್ದರು. ಆದರೆ ಈಗ ಕೋಮುವಾದಿ ಜೊತೆ ಸೇರಿದ್ದಾರೆ. ಇಬ್ಬರು ಸೇರಿ ನಮ್ಮ ಸರ್ಕಾರ ಅಸ್ಥಿರಗೊಳಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಆದರೆ ಕರ್ನಾಟಕದ 7 ಕೋಟಿ ಜನರ ಆಶೀರ್ವಾದ ನನ್ನ ಮೇಲಿದೆ. ಇದರಿಂದ ನನ್ನ ಯಾರೂ ಅಲ್ಲಾಡಿಸಲು ಸಾಧ್ಯವಾಗುವುದಿಲ್ಲ. ಕ್ವಿಟ್ ಇಂಡಿಯಾ ಚಳವಳಿಗೆ ಗಾಂಧೀಜಿ ಕರೆ ನೀಡಿದ ಈ ದಿನವೇ ಮೈಸೂರಿನಲ್ಲಿ ಈ ಜನಾಂದೋಲನ ಸಮಾವೇಶ ನಡೆಸಬೇಕಾದ ಅನಿವಾರ್ಯತೆ ಇತ್ತು ಎಂದು ಸಿದ್ದರಾಮಯ್ಯ ಹೇಳಿದರು.

ಪ್ಯಾರೀಸ್ ಒಲಿಂಪಿಕ್ಸ್ 2024

ಕುಸ್ತಿ: ಅಮಾನ್ ಸೆಹ್ರಾವತ್‌ಗೆ ಕಂಚು



ಪ್ಯಾರಿಸ್, ಆ.9– ವಿನೇಶ್ ಫೋಗಾಟ್ ಮೂಲಕ ಚಿನ್ನದ ಪದಕ ಗೆಲ್ಲುವ ಕನಸು ಭಗ್ನವಾದ ಒಂದು ದಿನದ ಬಳಿಕ ಕುಸ್ತಿಯಲ್ಲಿ ಭಾರತಕ್ಕೆ ಮೊಟ್ಟ ಮೊದಲ ಪದಕ ಬಂದಿದೆ.

ಭಾರತದ ಅಮಾನ್ ಸೆಹ್ರಾವತ್ ಅವರು ಭರ್ಜರಿ ಪ್ರದರ್ಶನ ತೋರುವ ಮೂಲಕ ತಮ್ಮ ಚೊಚ್ಚಲ ಒಲಿಂಪಿಕ್ಸ್ ಕಂಚಿನ ಪದಕದ ಸಾಧನೆ ಮಾಡಿದ್ದಾರೆ. ಶುಕ್ರವಾರ ನಡೆದಿದ್ದ ಕಂಚಿನ ಪದಕದ ಪಂದ್ಯದಲ್ಲಿ ಪೋರ್ಟೊರಿಕೊದ ಡ್ಯಾರಿಯನ್ ಕ್ರೂಜ್ ವಿರುದ್ಧ 13–5 ಅಂತರದಲ್ಲಿ ಅಮಾನ್ ಸೆಹ್ರಾವತ್ ಭರ್ಜರಿ ಗೆಲುವು ಪಡೆದರು. ಆ ಮೂಲಕ ಪ್ರಸಕ್ತ ಆವೃತ್ತಿಯಲ್ಲಿ ಭಾರತಕ್ಕೆ ಮೊದಲ ಪದಕ ತಂದುಕೊಟ್ಟರು.

ಗುರುವಾರ ಸೆಮಿಫೈನಲ್ ಹಣಾಹಣಿಯಲ್ಲಿ ಸೋಲು ಅನುಭವಿಸಿ ನಿರಾಸೆ ಅನುಭವಿಸಿದ್ದ ಭಾರತದ 21ರ ಪ್ರಾಯದ ಕುಸ್ತಿಪಟು, ಫೈನಲ್‌ಗೆ ಅರ್ಹತೆ ಪಡೆಯುವಲ್ಲಿ ವಿಫಲರಾಗಿದ್ದರು. ಆ ಮೂಲಕ ಕಂಚಿನ ಪದಕ ಪಂದ್ಯಕ್ಕೆ ಹಿಂಬಡ್ತಿ ಪಡೆದಿದ್ದರು. ಅದರಂತೆ ಶುಕ್ರವಾರ ರಾತ್ರಿ ನಡೆದಿದ್ದ 57 ಕೆಜಿ ಫ್ರೀ ಸ್ಟೈಲ್ ವಿಭಾಗದಲ್ಲಿ ಅಮಾನ್ ಸೆಹ್ರಾವತ್ ಅದ್ಭುತ ಪ್ರದರ್ಶನ ತೋರಿದರು. ಆರು ನಿಮಿಷಗಳ ಕಾಲ ನಡೆದಿದ್ದ ಕಂಚಿನ ಪದಕದ ಪಂದ್ಯದಲ್ಲಿ ಆರಂಭದಿಂದಲೂ ಎದುರಾಳಿ ಡ್ಯಾರಿಯನ್ ಕ್ರೂಜ್ ವಿರುದ್ಧ ಅಮಾನ್ ಸೆಹ್ರಾವತ್ ಪ್ರಾಬಲ್ಯ ಮೆರೆದರು. ಅಂತಿಮವಾಗಿ 13–5 ಅಂತರದಲ್ಲಿ ಗೆದ್ದು ಕಂಚಿನ ಪದಕವನ್ನು ತನ್ನದಾಗಿಸಿಕೊಂಡರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಆಗಸ್ಟ್ 10 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 116 | ಪುಟಗಳು: 12+VIII
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನೀವೇನೇ ಮಾಡಿ ಬಗ್ಗೋನು ಅಲ್ಲ... ಜಗ್ಗೋನು ಅಲ್ಲ...

ತಮ್ಮ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ, ಜೆಡಿಎಸ್ 'ಮೈಸೂರು ಚಲೋ' ಪಾದಯಾತ್ರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಡೋಂಟ್ ಕೇರ್!

ಮೈಸೂರಲ್ಲಿ ಜನಾಂದೋಲನ ಸಮಾವೇಶದ ಮೂಲಕ ಕಾಂಗ್ರೆಸ್ ಶಕ್ತಿ ಪ್ರದರ್ಶನ

- ನಾನು ಹೆದರಿ ಮನೆಯಲ್ಲಿ ಕೂರಲ್ಲ
- ನನಗೆ ಹಣ, ಆಸ್ತಿ ವ್ಯಾಮೋಹವಿಲ್ಲ

ಮೈಸೂರು, ಆ.9(ಬಿಎಲ್‌ಯು)– ನೀವೇನೇ ಮಾಡಿದರೂ ನಾನು ಬಗ್ಗೋನು ಅಲ್ಲ; ಜಗ್ಗೋನೂ ಅಲ್ಲ ಎಂದು ಆರ್ಭಟಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಡಾ ಹಾಗೂ ವಾಲ್ಮೀಕಿ ಹಗರಣದ ವಿರುದ್ಧ ಬಿಜೆಪಿ–ಜೆಡಿಎಸ್ ನಡೆಸಿದ 'ಮೈಸೂರು ಚಲೋ' ಪಾದಯಾತ್ರೆಗೆ ಡೋಂಟ್ ಕೇರ್ ಎಂದಿದ್ದಾರೆ.

ಮೈತ್ರಿ ಪಾದಯಾತ್ರೆ ಮೈಸೂರು ತಲುಪುವ ಮುನ್ನ ಜನಾಂದೋಲನ ಸಮಾವೇಶ ನಡೆಸುವ ಮೂಲಕ ದೋಸ್ತಿ ಪಕ್ಷಗಳ ವಿರುದ್ಧ ಕಾಂಗ್ರೆಸ್ ಸಮರ ಸಾರಿದೆ. ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಜನಾಂದೋಲನ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ನಾಯಕರು, ಬಿಜೆಪಿ ಹಾಗೂ ಜೆಡಿಎಸ್ ವಿರುದ್ಧ ರಣಕಹಳೆ ಮೊಳಗಿಸಿದರು.

ಜನಾಂದೋಲನ ಸಮಾವೇಶ ಉದ್ಘಾಟಿಸಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ತವರು ನೆಲದಲ್ಲಿ ನಿಂತು ದೋಸ್ತಿ ಪಕ್ಷಗಳ ವಿರುದ್ಧ ಗುಡುಗಿದರು. ಸುಮಾರು 45 ನಿಮಿಷಗಳ ಸುದೀರ್ಘ ಭಾಷಣದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಹಗರಣಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು. ಎರಡೂ ಪಕ್ಷಗಳು ಎಷ್ಟೆ ಪಾದಯಾತ್ರೆ ಮಾಡಿದರೂ ನಾನು ಬಗ್ಗೋನು ಅಲ್ಲ... ಜಗ್ಗೋನೂ ಅಲ್ಲ..., ಹೆದರಿ ಮನೆಯಲ್ಲಿ ಕೂರುವುದೂ ಇಲ್ಲ ಎಂದು ಘರ್ಜಿಸಿದರು.

ನಾಲ್ಕು ದಶಕಗಳ ರಾಜಕಾರಣದಲ್ಲಿ ಮಂತ್ರಿಯಾಗಿ, ಎರಡು ಬಾರಿ ಉಪ ಮುಖ್ಯಮಂತ್ರಿಯಾಗಿ, ಎರಡನೇ ಬಾರಿ ಮುಖ್ಯಮಂತ್ರಿ ಆಗಿರುವ ■ 4ನೇ ಪುಟಕ್ಕೆ



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕರ್ನಾಟಕದ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಸೇರಿದಂತೆ ಇತರೆ ನಾಯಕರು ಕಹಳೆ ಮೊಳಗಿಸುವ ಮೂಲಕ ಕಾಂಗ್ರೆಸ್ ಜನಾಂದೋಲನ ಸಮಾವೇಶಕ್ಕೆ ಚಾಲನೆ ನೀಡಿದರು.

ಎರಡು ಮನೆ ಮಾರಾಟ ಮಾಡಿ ಸಾಲ ತೀರಿಸಿದೆ!

ನಾನು ಹಣ ಮಾಡಿದ್ದರೆ ಸಾಲಕ್ಕಾಗಿ ಎರಡು ಮನೆ ಮಾರಾಟ ಮಾಡುತ್ತಿರಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಮರ್ಚೆಂಟ್ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ 30 ಲಕ್ಷ ಸಾಲ ಮಾಡಿದ್ದೆ. ಆ ಸಾಲ ತೀರಿಸಲಾಗದೆ ಮನೆ ಮಾರಿದೆ. ಸಾಲದ ಕಾರಣ ಒಂದು ದಿನವೂ ಆ ಮನೆಯಲ್ಲಿ ವಾಸ ಮಾಡಲಾಗಲಿಲ್ಲ ಎಂದರು. ಈ ತನಕ ಮೈಸೂರಿನಲ್ಲಿ ನನಗೆ ಮನೆ ಅಥವಾ ನಿವೇಶನ ಇರಲಿಲ್ಲ. ಈಗ ಮೈಸೂರಿನಲ್ಲಿ ಮನೆಯೊಂದನ್ನು ನಿರ್ಮಾಣ ಮಾಡುತ್ತಿದ್ದೇನೆ. ಮಂತ್ರಿ, ಉಪ ಮುಖ್ಯಮಂತ್ರಿ, ಮುಖ್ಯಮಂತ್ರಿ ಆಗಿರುವ ನನಗೆ ಆಸ್ತಿ ವ್ಯಾಮೋಹ ಇದ್ದಿದ್ದರೆ ಕೋಟಿ ಕೋಟಿ ಹಣ ಸಂಪಾದಿಸಬಹುದಿತ್ತು. ಆದರೆ ನನಗೆ ಹಣದ ವ್ಯಾಮೋಹ ಇಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

ನಾನು ದ್ವೇಷ ರಾಜಕಾರಣ ಮಾಡಿದ್ರೆ ಇವತ್ತು ಈ ಪರಿಸ್ಥಿತಿ ಬರುತ್ತಿರಲಿಲ್ಲ

ನಾನು ದ್ವೇಷ ರಾಜಕಾರಣ ಮಾಡಿದ್ದರೆ, ಇವರೆಲ್ಲಾ ಇವತ್ತು ಜೈಲಿಗೆ ಹೋಗುತ್ತಿದ್ದರು. ಈಗ ಇಂತಹ ಪರಿಸ್ಥಿತಿ ನನಗೆ ಬರುತ್ತಿರಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಸರದಿಂದ ನುಡಿದರು.

ಬಿಜೆಪಿ ಹಾಗೂ ಜೆಡಿಎಸ್ ಸರ್ಕಾರದ ಅವಧಿಯಲ್ಲಿ ನಡೆದಿರುವ ಹಗರಣಗಳ ಬಗ್ಗೆ ಜನರಿಗೆ ಸಮಗ್ರ ಮಾಹಿತಿ ನೀಡುವ ವೇಳೆ ಈ ವಿಚಾರ ಪ್ರಸ್ತಾಪಿಸಿದರು. ಯಡಿಯೂರಪ್ಪ, ಕುಮಾರಸ್ವಾಮಿ, ವಿಜಯೇಂದ್ರ, ಅಶೋಕ್ ನನ್ನ ರಾಜೀನಾಮೆ ಕೇಳುತ್ತಿದ್ದಾರೆ. ನನ್ನ ರಾಜೀನಾಮೆ ಕೇಳಲು ಇವರಿಗೆ ನೈತಿಕ ಹಕ್ಕಿದೆ ಎಂದು ಪ್ರಶ್ನಿಸಿದರು. ಲೈಂಗಿಕ ಕಿರುಕುಳ ಪ್ರಕರಣದಲ್ಲಿ ಯಡಿಯೂರಪ್ಪ ವಿರುದ್ಧ ಪೊಲೀಸರು ಚಾರ್ಜ್‌ಶೀಟ್ ಕೂಡ ಸಲ್ಲಿಸಿದ್ದಾರೆ. 82 ವರ್ಷ ವಯಸ್ಸಿನ ಯಡಿಯೂರಪ್ಪಗೆ ಮಾನ–ಮರ್ಯಾದೆ ಇದ್ದರೆ ರಾಜಕೀಯ ಜೀವನದಿಂದ ನಿವೃತ್ತಿ ಹೊಂದಬೇಕು ಎಂದು ಆಗ್ರಹಿಸಿದರು.


ಭಾರತೀಯ ಜನತಾ ಪಾರ್ಟಿ
ಮೈಸೂರು ಚಲೋ
ಭ್ರಷ್ಟ ಕಾಂಗ್ರೆಸ್ ಸರ್ಕಾರದ
ಹಗರಣಗಳ ವಿರುದ್ಧ ಪಾದಯಾತ್ರೆ
ಸಮಾರೋಪ ಸಮಾರಂಭಕ್ಕೆ
ಆಗಮಿಸುತ್ತಿರುವ ಸರ್ವರಿಗೂ
ಹೃತ್ಪೂರ್ವಕ ಸುಸ್ವಾಗತ
ಎನ್. ಅರುಣ್‌ಕುಮಾರ್‌ಗೌಡ MBA
ಮಾಜಿ ಅಧ್ಯಕ್ಷರು ಹಾಗೂ ಮುಖಂಡರು
ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ
ಮಾಜಿ ಜಿಲ್ಲಾಧ್ಯಕ್ಷರು, ಯುವ ಮೋರ್ಚಾ, ಮೈಸೂರು
ಗೋಪಾಲ್‌ಗೌಡ
ಭದ್ರೇಗೌಡನ ಕೊಪ್ಪಲು
ದಿನಾಂಕ : 10-08-2024ರ
ಬೆಳಿಗ್ಗೆ 11.00ಕ್ಕೆ
ಶಂಭುಪಟೇಲ್
ಹಿನಕಲ್
ಸ್ಥಳ : ಮಹಾರಾಜ ಕಾಲೇಜು
ಮೈದಾನ, ಮೈಸೂರು
93437 06416
"ಮುಡಾ ಹಗರಣದ ವಿರುದ್ಧದ-ಹೋರಾಟದಲ್ಲಿ ಭಾಗವಹಿಸಿ"



ಗೂಡ್ಸ್ ಆಟೋ, ತಳ್ಳುಗಾಡಿಗಳ ರಸ್ತೆ ವ್ಯಾಪಾರಕ್ಕೆ ಅಮಾಯಕ ಬಲಿ!



ಮೈಸೂರಿನ ಹೆಬ್ಬಾಳು ಎಸ್‌ಬಿಐ ರಸ್ತೆಯಲ್ಲಿ ತಳ್ಳುಗಾಡಿಗಳ ಹಾವಳಿ

ಮೈಸೂರು, ಆ.9(ಎಸ್‌ಬಿಡಿ)– ಇಲ್ಲಿಯವರೆಗೆ ಫುಟ್‌ಪಾತ್‌ಗಳಲ್ಲಿ ನಿಲ್ಲುತ್ತಿದ್ದ ಗೂಡ್ಸ್ ಆಟೋ ಮತ್ತು ತಳ್ಳುಗಾಡಿಗಳು ಈಗ ರಸ್ತೆಗಿಳಿದು ಜನರ ಬಲಿ ಪಡೆಯುತ್ತಿವೆ. ಇದಕ್ಕೆ ತಾಜಾ ನಿದರ್ಶನವೆಂಬಂತೆ ಮೈಸೂರಿನ ಹೆಬ್ಬಾಳದಲ್ಲಿ ಶುಕ್ರವಾರ ವ್ಯಕ್ತಿಯೊಬ್ಬರು ಬಲಿಯಾಗಿದ್ದಾರೆ.

ಎಲ್ಲೆಡೆ ಈಗ ರಸ್ತೆಯಲ್ಲೇ ವ್ಯಾಪಾರ ವಹಿವಾಟು ನಡೆಯುತ್ತಿದ್ದು, ವಾಹನ ಸಂಚಾರ ದುಸ್ಸಾಹಸವಾಗಿದೆ. ಸಂಚಾರ ಪೊಲೀಸರು ಮೂಕ ಪ್ರೇಕ್ಷಕರಾಗಿದ್ದಾರೆ.

ಹೆಬ್ಬಾಳು ಸೂರ್ಯಬೇಕರಿ ಬಳಿ ಮಾರುತಿ ವ್ಯಾನ್ ಹಾಗೂ ಎರಡು ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿ, ಬಸವೇಶ್ವರ ಬಡಾವಣೆ ನಿವಾಸಿಯೊಬ್ಬರು ಮೃತಪಟ್ಟಿದ್ದಾರೆ. ಘಟನೆಯಲ್ಲಿ ಮತ್ತಿಬ್ಬರು ಗಾಯಗೊಂಡಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ವ್ಯವಸ್ಥೆ ನಿರ್ಲಕ್ಷ್ಯಕ್ಕೆ ಅಮಾಯಕರು ಬಲಿ: ಫುಟ್‌ಪಾತ್ ಸಮಸ್ಯೆಯಿರಲಿ, ರಸ್ತೆ ಅತಿಕ್ರಮಣವೇ ಈಗ ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ. ಹೆಬ್ಬಾಳು ಸೂರ್ಯಬೇಕರಿ ಸರ್ಕಲ್‌ನಿಂದ ವಿಶ್ವಮಾನವ ಕುವೆಂಪು ವೃತ್ತದವರೆಗಿನ ರಸ್ತೆ ಮಾರುಕಟ್ಟೆಯಾಗಿ ಪರಿವರ್ತನೆಯಾಗಿದೆ. ರಸ್ತೆಯ ಇಕ್ಕೆಲಗಳಲ್ಲಿ ವಾಹನ ಪಾರ್ಕಿಂಗ್, ಅದರ ಪಕ್ಕದಲ್ಲಿ ವ್ಯಾಪಾರ ವಹಿವಾಟು ನಡೆಯುತ್ತಿದೆ. ನೂರಾರು ತಳ್ಳುಗಾಡಿಗಳು, ಅಲ್ಲಲ್ಲಿ ಗೂಡ್ಸ್ ಆಟೋಗಳನ್ನು ನಿಲ್ಲಿಸಿಕೊಂಡು ವ್ಯಾಪಾರ ಮಾಡಲಾಗುತ್ತಿದೆ. ವಾಹನ ಸಂಚಾರಕ್ಕೆ ಉಳಿಯುವುದು ಕಿರಿದಾದ ಜಾಗ ಮಾತ್ರ. ಈ ಅವಾಂತರದ ನಡುವೆ ವಾಹನಗಳಲ್ಲೇ ಕುಳಿತು ತಳ್ಳುಗಾಡಿ ಹಾಗೂ ಗೂಡ್ಸ್ ಆಟೋಗಳಲ್ಲಿ ಮಾರಾಟ ಮಾಡುತ್ತಿರುವ ತರಕಾರಿ, ಹಣ್ಣು–ಹಂಪಲು ಇನ್ನಿತರ ಪದಾರ್ಥ ಖರೀದಿ ಮಾಡುವುದರಿಂದ ಸಮಸ್ಯೆ ಮತ್ತಷ್ಟು ಗಂಭೀರವಾಗಿದೆ. ವಾಹನ ಸಂಚಾರಕ್ಕೆ ಅಡ್ಡಿಯಾಗುವುದರ ಜೊತೆಗೆ ಆಗಾಗ್ಗೆ ಅಪಘಾತಗಳು ಸಂಭವಿಸುತ್ತಿವೆ. ವಾಹನದಲ್ಲೇ ಕುಳಿತು ಖರೀದಿ ಮಾಡಿದ ನಂತರ ಏಕಾಏಕಿ ತಿರುವು ಪಡೆಯುವ ವೇಳೆ ಹಿಂದಿನಿಂದ ಬರುವ ವಾಹನಗಳು ಡಿಕ್ಕಿ ಹೊಡೆಯುತ್ತವೆ. ಈ ದುಸ್ಸಾಹಸದಿಂದಾಗಿಯೇ ಇದುವರೆಗೆ ಸಂಭವಿಸಿದ ಅಪಘಾತಗಳಲ್ಲಿ ಮೂರ್‍ನಾಲ್ಕು ಮಂದಿ ಇಲ್ಲಿ ಬಲಿಯಾಗಿದ್ದು, ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೊದಲೆಲ್ಲಾ ಫುಟ್‌ಪಾತ್ ತೆರವಿಗೆ ಆಗ್ರಹಿಸುತ್ತಿದ್ದೆವು; ಈಗ ರಸ್ತೆಗಳೇ ಅತಿಕ್ರಮವಾಗಿವೆ




ಮೊದಲೆಲ್ಲಾ ಫುಟ್‌ಪಾತ್ ಅತಿಕ್ರಮಣ ತೆರವು ಮಾಡುವಂತೆ ಮನವಿ ಮಾಡುತ್ತಿದ್ದೆವು. ಈಗ ರಸ್ತೆ ಅತಿಕ್ರಮಣ ತೆರವು ಮಾಡುವಂತೆ ಪಾಲಿಕೆ ಅಧಿಕಾರಿಗಳು, ಪೊಲೀಸರನ್ನು ಬೇಡುವ ಸ್ಥಿತಿ ಬಂದೊದಗಿದೆ. ಸೂರ್ಯಬೇಕರಿ ಜಂಕ್ಷನ್‌ನಿಂದ ವಿಶ್ವಮಾನವ ಕುವೆಂಪು ವೃತ್ತದವರೆಗಿನ ಈ ಸಮಸ್ಯೆ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುತ್ತಿಲ್ಲ. ಪಾರ್ಕಿಂಗ್ ಪಕ್ಕದಲ್ಲಿ ಇಕ್ಕೆಲಗಳಲ್ಲೂ ತಳ್ಳುಗಾಡಿ ಹಾಗೂ ಗೂಡ್ಸ್ ಆಟೋ ನಿಲ್ಲಿಸಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಎರಡು ವರ್ಷಗಳಿಂದ 300ಕ್ಕೂ ಹೆಚ್ಚು ಗಾಡಿಗಳಾಗಿವೆ. ಈ ಬಗ್ಗೆ ನಗರ ಪಾಲಿಕೆ ಹಾಗೂ ಪೊಲೀಸ್ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ನೀಡಿದ್ದಾಗಿದೆ. ಮೂರ್‍ನಾಲ್ಕು ಮಂದಿ ಆಯುಕ್ತರು ಬದಲಾದರೂ ಈವರೆಗೂ ಯಾರೂ ಕ್ರಮ ಕೈಗೊಂಡಿಲ್ಲ. ದಿವ್ಯ ನಿರ್ಲಕ್ಷ್ಯ ವಹಿಸುವ ಮೂಲಕ ಜನರ ಜೀವದ ಜೊತೆ ಚೆಲ್ಲಾಟ ಆಡುತ್ತಿದ್ದಾರೆ ಎಂದು ಮಾಜಿ ಕಾರ್ಪೊರೇಟರ್ ಹಾಗೂ ಜನಪರ ಹೋರಾಟಗಾರ ಕೆ.ವಿ.ಶ್ರೀಧರ್ ಅತೀವ ಬೇಸರ ವ್ಯಕ್ತಪಡಿಸಿದ್ದಾರೆ.

ಮಾರ್ಕೆಟ್ ಮಾಡಿಬಿಡಿ: ಈ ಹಿಂದೆ 50 ಅಡಿ ಇದ್ದ ರಸ್ತೆಯನ್ನು ನಾನು ಕಾರ್ಪೊರೇಟರ್ ಆಗಿದ್ದಾಗ 70 ಅಡಿಗೆ ವಿಸ್ತರಣೆ ಮಾಡಲಾಯಿತು. ಆದರೆ ಸುಗಮ ಸಂಚಾರ ದೃಷ್ಟಿಯಿಂದ ಮಾಡಿದ ಕೆಲಸ ಈಗ ವ್ಯರ್ಥವಾದಂತಾಗಿದೆ. ಇಕ್ಕೆಲಗಳಲ್ಲೂ ವ್ಯಾಪಾರ ವಹಿವಾಟು ನಡೆಸುತ್ತಿರುವುದರಿಂದ ವಾಹನ ಸಂಚಾರಕ್ಕೆ ಉಳಿಯುವುದು 20 ಅಡಿ ಮಾತ್ರ. ಇದರಿಂದ ಅಮಾಯಕರು ಬಲಿಯಾಗುತ್ತಿದ್ದಾರೆ. ಸೂರ್ಯ ಬೇಕರಿ ವೃತ್ತದಲ್ಲಿ ಅಳವಡಿಸಿದ್ದ ನೋ ಪಾರ್ಕಿಂಗ್ ಬೋರ್ಡ್‌ಗಳನ್ನು ಕಿತ್ತು ಹಾಕಿದ್ದಾರೆ. ನಾಲ್ಕೂ ಕಡೆ ವಾಹನಗಳ ನಿಲುಗಡೆ ಮಾಡುತ್ತಿರುವುದರಿಂದ ಭಾರಿ ವಾಹನ ದಟ್ಟಣೆ ಉಂಟಾಗುತ್ತಿದೆ. ಯಾರದೋ ಪ್ರಭಾವದಿಂದ ರಸ್ತೆಯುದ್ದಕ್ಕೂ ತಳ್ಳುಗಾಡಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೇ ಇದೆ. ಇದೇ ರಸ್ತೆಯಲ್ಲಿ ಹೆಬ್ಬಾಳು ಪೊಲೀಸ್ ಠಾಣೆಯಿದೆ. ಪೊಲೀಸ್ ವಾಹನಗಳೂ ಇಲ್ಲೇ ಓಡಾಡುತ್ತವೆ. ಆದರೆ ಈ ಸಮಸ್ಯೆ ಬಗ್ಗೆ ಮೂಕಪ್ರೇಕ್ಷಕರಾಗಿದ್ದಾರೆ. ವಿವಿ ಪುರಂ ಸಂಚಾರ ಠಾಣೆ ಪೊಲೀಸರಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಟ್ರಾಫಿಕ್ ಸಮಸ್ಯೆ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುತ್ತಿಲ್ಲ. ಪಾಲಿಕೆ ಅಧಿಕಾರಿಗಳಂತೂ ಇತ್ತ ತಿರುಗಿ ನೋಡಿಲ್ಲ. ಹೀಗೆ ಆದರೆ ಅಪಘಾತಗಳಿಂದ ಅದೆಷ್ಟೋ ಜೀವಗಳು ಬಲಿಯಾಗುತ್ತವೆ. ಸಮಸ್ಯೆ ನಿವಾರಣೆ ಸಾಧ್ಯವಾಗದಿದ್ದರೆ ಬೆಂಗಳೂರು ಕಲಾಸಿಪಾಳ್ಯ ಮಾದರಿಯಲ್ಲಿ ವಾಹನ ಸಂಚಾರ ನಿರ್ಬಂಧಿಸಿ, ಇಡೀ ರಸ್ತೆಯನ್ನು ಮಾರ್ಕೆಟ್ ಮಾಡಿಬಿಡಿ. ಆಗಲಾದರೂ ಅಮಾಯಕರ ಜೀವ ಉಳಿಯುತ್ತದೆ ಎಂದು ಶ್ರೀಧರ್ ನೊಂದು ನುಡಿದಿದ್ದಾರೆ.














ಮೈಸೂರು ಚಲೋ ಪಾದಯಾತ್ರೆ ಸಮಾರೋಪ ಯಶಸ್ಸಿಗೆ ಮನವಿ

ಮೈಸೂರು, ಆ.9– ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಖಂಡಿಸಿ ಬಿಜೆಪಿ–ಜೆಡಿಎಸ್ ಹಮ್ಮಿಕೊಂಡಿದ್ದ 'ಮೈಸೂರು ಚಲೋ' ಪಾದಯಾತ್ರೆ ಸಮಾರೋಪ ಸಮಾರಂಭಕ್ಕೆ ಕಾರ್ಯಕರ್ತರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಬಿಜೆಪಿ ಹಿರಿಯ ಮುಖಂಡ ಹದಿನಾರು ಗುರುಪಾದಸ್ವಾಮಿ ಮನವಿ ಮಾಡಿದ್ದಾರೆ.



ಮುಡಾ ಹಗರಣ, ವಾಲ್ಮೀಕಿ ನಿಗಮದ 187 ಕೋಟಿ ಹಣದ ದುರುಪಯೋಗ ಸೇರಿದಂತೆ ಹಲವು ಭ್ರಷ್ಟಾಚಾರದ ಮೂಲಕ ರಾಜ್ಯದ ಜನತೆಯ ತೆರಿಗೆ ಹಣ ಲೂಟಿ ಮಾಡಿದ್ದಾರೆ. ಕಾಂಗ್ರೆಸ್ ದುರಾಡಳಿತವನ್ನು ಜನತೆ ಮುಂದಿಡುವ ಉದ್ದೇಶದಿಂದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರ ಆಶೀರ್ವಾದದೊಂದಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಆ.3ರಂದು ಬೆಂಗಳೂರಿನಲ್ಲಿ ಆರಂಭಗೊಂಡ ಪಾದಯಾತ್ರೆ ಯಶಸ್ವಿಯಾಗಿ ಮೈಸೂರು ತಲುಪಿದೆ ಶನಿವಾರ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿರುವ ಸಮಾವೇಶದಲ್ಲಿ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಅಪಾರ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಹೋರಾಟಕ್ಕೆ ಶಕ್ತಿ ತುಂಬಬೇಕಿದೆ ಎಂದು ಹೇಳಿದ್ದಾರೆ.

ಮೈಸೂರು ಚಲೋ ನಾಯಕರಿಗೆ ಪೈನಾಪಲ್ ಹಾರದ ಸ್ವಾಗತ



ಬಿಜೆಪಿ–ಜೆಡಿಎಸ್‌ನ ಮೈಸೂರು ಚಲೋ ಪಾದಯಾತ್ರೆ 7ನೇ ದಿನವಾದ ಶನಿವಾರ ರಾತ್ರಿ ಮೈಸೂರು ಪ್ರವೇಶಿಸಿದಾಗ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಸಚಿವ ಡಾ. ಅಶ್ವತ್ಥ್‌ನಾರಾಯಣ್ ಅವರಿಗೆ ಪಕ್ಷದ ಮೈಸೂರು ಜಿಲ್ಲಾಧ್ಯಕ್ಷ ಎನ್.ಆರ್.ಮಹದೇವಸ್ವಾಮಿ, ನಗರಾಧ್ಯಕ್ಷ ಎಲ್.ನಾಗೇಂದ್ರ ಬೃಹದಾಕಾರದ ಪೈನಾಪಲ್ ಹಾರ ಹಾಕುವ ಮೂಲಕ ಸ್ವಾಗತಿಸಿದರು. ನಗರ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಇನ್ನಿತರರು ಈ ಸಂದರ್ಭದಲ್ಲಿ ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ವಿಕ್ಕಿ ಸ್ಪೋರ್ಟ್ಸ್‌ವೇರ್ಸ್
K.G ಕೊಪ್ಪಲ್, ಮೈಸೂರು
ಟೈಲರ್‌ಗಳು ಬೇಕಾಗಿದ್ದಾರೆ
ಪುರುಷರು ಮತ್ತು ಮಹಿಳೆಯರು
Mob: 8088812221

airtel WANTED
Sales promoter
Salary 18000/-
Incentive up to 5000/-
91085 81166

LAND CARE SOLUTIONS
SITES FOR SALE
Prime Location | Palace 5.5 Kms | Ring Road 500 Mts, MUDA Approved
Ready to Register & Construct
20'x30', 20'x40' & 30'x40'
Call: 9845414842 | 0821-3137855

NEW HOUSE FOR SALE
40x60 HOUSE at 1st Main, 1st Stage, Vijayanagar, East Facing 4 Bed Rooms (All attached) Duplex '60ft Road, Price: 3.48 Cr (Slightly Negotiable)
7411210991

LAND CARE SOLUTIONS
SITES FOR SALE
Prime Location
Adhya Enclave (Nanjangud)
MUDA Approved Ready to Register & Construct
30'x40' & 30'x0dd
Call: 9845414842 | 0821-3137855

TO-LET
Agrahara, Thyagaraja Road, Mysore
(Only for Vegetarians)
- 2 BHK - Ground Floor
- 4 BHK - 1st Floor Duplex
- Office Space 12X12 ft

Contact
99808 21777 / 99005 69400

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

FOR RENT
1000 sq.ft. for office use / tuition, 1st Floor, Near Orchids School, Ramakrishnanagar 'I' Block.
Mob: 9844775166

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಪ್ರಕಟಣೆ
2024–25ನೇ ಸಾಲಿನಲ್ಲಿ ಮೈಸೂರು ನಗರದಲ್ಲಿ ಪಿಯುಸಿ, ಡಿಪ್ಲೋಮಾ, ಟಿ.ಸಿ.ಹೆಚ್, ಬಿ.ಎಡ್, ಪದವಿ, ಸ್ನಾತಕೋತ್ತರ, ಪ್ಯಾರಮೆಡಿಕಲ್, ಬಿ.ಇ., ಎಂ.ಸಿ.ಎ ಮತ್ತು ನರ್ಸಿಂಗ್ ತರಗತಿಗಳಲ್ಲಿ ಓದುತ್ತಿರುವ ವೀರಶೈವ ವಿದ್ಯಾರ್ಥಿಗಳಿಗೆ ಅತ್ಯಂತ ಕಡಿಮೆ ವೆಚ್ಚದಲ್ಲಿ ತಿಂಡಿ, ಊಟ ಮತ್ತು ವಸತಿ ಸೌಲಭ್ಯ ಕಲ್ಪಿಸಲಾಗುವುದು. ಆಸಕ್ತ ವಿದ್ಯಾರ್ಥಿಗಳು ಪ್ರವೇಶ ಅರ್ಜಿಗಳನ್ನು ನಿಲಯ ಪಾಲಕರು, ಶ್ರೀ ಮುದ್ದಾನೇಶ್ವರ ವಿದ್ಯಾರ್ಥಿ ನಿಲಯ, ಧೂನಿರಾಣಿಲಕ್ಷೀಬಾಯಿ ರಸ್ತೆ, (ಮೆಟ್ರೋಪೋಲ್ ಹೋಟೆಲ್ ಹತ್ತಿರ) ದೇವರಾಜ ಮೊಹಲ್ಲಾ, ಮೈಸೂರು–570005. ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯದರ್ಶಿ

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. GNM/BSC ನರ್ಸಿಂಗ್ ಆದವರಿಗೆ ಕೆಲಸವಿದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.
ಸೆಂಟ್ ಮೇರಿಸ್ ಆಸ್ಪತ್ರೆ
ಸಿಲ್ಕ್ ಫ್ಯಾಕ್ಟರಿ ಸರ್ಕಲ್
NIE ಕಾಲೇಜ್ ಪಕ್ಕ, ಮೈಸೂರು
9916908454

ITI ಗೆ ಪ್ರವೇಶಾವಕಾಶ
ITI (Fitter - NSQF) ವೃತ್ತಿಗೆ & SSLC / PUC pass or fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. NCVT ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
Benaka ITI College, Near Cauvery Circle, Dr. Rajkumar Road, Raghavendra Nagar, Mysore.
9342123467, 9141756695

ಬೋಳು ತಲೆಯ ಸಮಸ್ಯೆಯೇ?



SMART HAIR FIXING
574, 9th Cross, Aniketana Road, kuvempunagar, Mysuru
MYSURU 9611028523 MANGALORE 9343142258

HOUSE FOR SALE & SITE
30x40 Residential House, Ground Floor -2 BHK, 1st Floor - 1 Attach Room, 1500 Sqft Construction area, 9 and 11A Property, & 40x30 Site Also Sale, Bank loan available, Near Yelawala City Bus stand, Yelawala, Mysore.
Further details contact
95354 80519

ಜಮೀನು ಮಾರಾಟಕ್ಕಿದೆ
ತೆಂಗಿನ ತೋಟ 2 ಬೋರ್ ವೆಲ್ ಕೊಟ್ಟಿಗೆ ವಾಸದ ಮನೆ ಪೆರಿಫೆರಲ್ ರಿಂಗ್ ರೋಡ್‌ಗೆ ಹೊಂದಿಕೊಂಡಿರುವ 8.5 ಎಕರೆ ಮೈಸೂರಿನ RT ನಗರ Layout ನಿಂದ ಕೇವಲ 2km ದೂರದಲ್ಲಿದೆ (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
ಸಂಪರ್ಕಿಸಿ: ಡಾ. ಪ್ರಸಾದ್
9036284426

ಮುಡಾ ಅಪ್ರೂವ್ಡ್ ಸೈಟ್ ಮಾರಾಟಕ್ಕಿದೆ
ಬ್ರಾಹ್ಮಿನ್ ಲೇಔಟ್ A ಬ್ಲಾಕ್ 60 ಅಡಿ ರಸ್ತೆಗೆ ಒಂದೇ ಸೈಟ್‌ನಲ್ಲಿ 30x40, 30x24 ಹಾಗೂ 10x10 - 5 ಅಂಗಡಿ ಮಳಿಗೆಗಳು ಸ್ಥಳಾವಕಾಶವುಳ್ಳ ಸೈಟ್ ಮಾರಾಟಕ್ಕಿದೆ. ಒಟ್ಟು ವಿಸ್ತೀರ್ಣ 2900 ಸ್ಕ್ವೇರ್ ಫೀಟ್ ಚ.ಅ.ಗೆ 1850
8618644886
9880280299

ಬೇಕಾಗಿದ್ದಾರೆ
ಸುಸಜ್ಜಿತವಾದ ವ್ಯವಸ್ಥೆಯುಳ್ಳ ವೃದ್ಧಾಶ್ರಮ, Day ಕೇರ್ ಮತ್ತು ಹೋಂ ನರ್ಸಿಂಗ್ ಸೇವೆಗಾಗಿ ನಮ್ಮನ್ನು ಈಗಲೇ ಸಂಪರ್ಕಿಸಿ (ಹೋಂ ನರ್ಸ್ ಕೆಲಸಕ್ಕೆ ಯುವತಿಯರು ಬೇಕಾಗಿದ್ದಾರೆ.)
9916905188
0821-4524105

DISHA APARTMENT
2 BHK 12 FLATS FOR SALE
1086X6,500 RS, 1190X6,300RS
1238X6,300 RS, 1283X6,100RS
Fully Furnished,
24x7 Security Parking Elevators
Venue: Suyog Hospital Road, Near RubyBakery, Ramakrishna Nagar, Mysore-570001
9900322799
9845693181

Sump & Tank Solar & Cleaning, Water Level Controller Service
Mob: 8861612486

SITE FOR SALE
MUDA Auction site
50x60 (3163 Sq.Ft)
NORTH EAST CORNER
Ramakrishna Nagar Mysore
96206 14970

ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9108566022

ಉದ್ಯೋಗ ಅವಕಾಶ
ಒಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ಸೌಲಭ್ಯ ಊಟ, ವಸತಿಯಿರುತ್ತದೆ ಸಂಬಳ – ರೂ. 15200 – 86,100
7411565140, 7892046990

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ನಾಯಕ/SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ:
(II Marriage Also)
9343175000

ಬೇಕಾಗಿದ್ದಾರೆ
ಸರಸ್ವತಿಪುರಂನಲ್ಲಿ ಜ್ಯೂಸ್ ಅಂಗಡಿಗೆ ಜ್ಯೂಸ್ ಮಾಡಲು ಅನುಭವ ಇರುವ ಹುಡುಗಿಯರು ಬೇಕಾಗಿದ್ದಾರೆ.
8123078847
9448222225

Change of Name
I, Laxmi Raj, residing at No. 295, D. Subbaiah Road, Chamaraja Mohalla, Mysore-570 004, have changed my name as Lakshmi Raj on my own free will in front of Notary Geetha R. on 9-8-2024. I declare that I shall at all times hereafter in all records, deeds and writings and in all proceedings, dealings and transactions, private as well as upon all occasions whatsoever, use and sign the name of Lakshmi Raj.
Sd/- Lakshmi Raj

RADHA & MADHAVA EVENT MANAGEMENT
1) ಮದುವೆ
2) ಉಪನಯನ
3) ನಾಮಕರಣ
4) ಗೃಹ ಪ್ರವೇಶ, ಇತ್ಯಾದಿಗಳಿಗೆ

Veg. only

Mob: 9483082982

30x40 ಹೊಸ ಮನೆ ಮಾರಾಟಕ್ಕಿದೆ
ಹೊಸದಾಗಿ ಕಟ್ಟಿರುವ ಡ್ಯೂಪ್ಲೆಕ್ಸ್ 21 ಸ್ಕ್ವೇರ್ ಕಟ್ಟಡ ಪೂರ್ವ ದಿಕ್ಕಿನ ಮನೆ ನಂ.23 ಶ್ರೀನಗರ, ವಿ.ಬಿ.ಸಿಟಿ ನಂತರ ಕೆ.ಬಿ.ಎಲ್ ಸಿಲಿಕಾನ್ ವ್ಯಾಲಿ ಹತ್ತಿರ ಕೆ.ಆರ್.ಎಸ್ ರಸ್ತೆ, ಮೈಸೂರು
9538072720

ಬೇಕಾಗಿದ್ದಾರೆ
ಅಕೌಂಟ್ ಮ್ಯಾನೇಜರ್
ಟ್ಯಾಲಿ & ಜಿಎಸ್‌ಟಿ ಕಲಿತಿರಬೇಕು
ಅಶೋಕ ರೋಡ್, ಮೈಸೂರು
Call: 0821-4267800
97418 25653

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ತಕ್ಷಣ ಬೇಕಾಗಿದ್ದಾರೆ
1) ಹೌಸ್ ಕೀಪರ್ (ಮಹಿಳೆಯರು)
ಸ್ಥಳ: ಕುವೆಂಪುನಗರ ಸುತ್ತಮುತ್ತ
2) ಸೆಕ್ಯೂರಿಟಿ ಗಾರ್ಡುಗಳು
ಮೈಸೂರು ಸುತ್ತಮುತ್ತ
9686422400
9242406261

50x80 E/F DTCP
'A' ಖಾತೆ ಸೊಸೈಟಿ ಸೈಟು ಮಾರಾಟಕ್ಕಿದೆ 58 ಲಕ್ಷಗಳು ನಂಜುಂಡೇಶ್ವರ ನಗರ
28x40 S/W ಕಾರ್ನರ್ ಸೈಟು ಮಾರಾಟಕ್ಕಿದೆ.
17 ಲಕ್ಷಗಳು TVS ಫ್ಯಾಕ್ಟರಿ ಹತ್ತಿರ ಮೈಸೂರು
9742198093

30X50 HOUSE FOR SALE
2BHK Big Hall, Dining, Big Kitchen with Interiors 12 Squares Gated Community Layout Near AIRPORT Dadadahalli
7899214181

ಓಂ ಶ್ರೀ ಮಲೆಮಾದೇಶ್ವರ ಸ್ವಾಮಿ ಜ್ಯೋತಿಷ್ಯ ಕೇಂದ್ರ
ಕೇರಳ ಮತ್ತು ಕೊಳ್ಳೇಗಾಲದ ನಂಬರ್ ಒನ್ ಗುರೂಜಿ ಶ್ರೀ ಡಿ.ಎಸ್.ರಾವ್ ನಿಮ್ಮ ಸಮಸ್ಯೆ ಪ್ರೀತಿಯಲ್ಲಿ ನಂಬಿ ಮೋಸ, ಅತ್ತೆ ಸೊಸೆ ನಾದಿನಿ ಅಣ್ಣ ತಮ್ಮಂದಿರಲ್ಲಿ ಕಲಹ, ವ್ಯಾಪಾರದಲ್ಲಿ ಲಾಭ ನಷ್ಟ, ಇನ್ನು ನಿಮ್ಮ ಜೀವನದ ಯಾವುದೇ ಸಮಸ್ಯೆಗಳಿದ್ದರೂ ಕೆಲವೇ ದಿನಗಳಲ್ಲಿ ಪರಿಹಾರ ಶತಸಿದ್ಧ ವಿಶೇಷ ಸೂಚನೆ ನಾವು ಮಾಡಿಕೊಟ್ಟಂತೆ ಪರಿಹಾರ ನಮಗಿಂತ ಮೊದಲು ಬೇರೆ ಯಾರೇ ಮಾಡಿಕೊಟ್ಟಲ್ಲಿ ಅವರಿಗೆ ಸೂಕ್ತ ಬಹುಮಾನ ಕೊಡಲಾಗುವುದು ದೂರದ ಊರಿನವರಿಗೆ ಫೋನಿನ ಮೂಲಕ ಪರಿಹಾರ ತಿಳಿಸುತ್ತಾರೆ. ಬರುವ ಮುನ್ನ ಕರೆ ಮಾಡಿ ಬನ್ನಿ, ವಿಳಾಸ ಬಸವನಗುಡಿ ಸರ್ಕಲ್ ಹೆಬ್ಬಾಳ್ ಮೇನ್ ರೋಡ್, ಮೈಸೂರು
9945182823

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್
ದಟ್ಟಗಳ್ಳಿ, ಮೈಸೂರು
ಬೇಕಾಗಿದ್ದಾರೆ
ಶಾಲೆಯಲ್ಲಿ ಕೆಲಸ ಮಾಡಲು ಮಹಿಳಾ ಆಯಾಗಳು ಮತ್ತು ಶಾಲಾ ವಾಹನ ಚಲಾಯಿಸಲು ಹೆವಿ ವೆಹಿಕಲ್ ಲೈಸನ್ಸ್ ಹೊಂದಿರುವ ಡ್ರೈವರ್ಸ್ ಬೇಕಾಗಿದ್ದಾರೆ.
9110851597

SITE FOR SALE
BUL PREMIO ESTATE PHASE-2 EAST FACE 30X50
SAPTHA MATHRUKA PHASE-4 30X40 EAST FACE
8105117403

ನಿವೇಶನ ಮಾರಾಟಕ್ಕಿದೆ
ವಿಜಯನಗರ 3ನೇ ಹಂತ ಗರುಡಾಚಾರ್ ಬಡಾವಣೆಯ 30x40 ಅಡಿ ಅಳತೆಯ S/F ನಿವೇಶನ ಮಾರಾಟಕ್ಕಿದೆ
9448413573
8105590187

40x60 Rs.1200 sqft
ತಳೂರು ಸರ್ಕಲ್ ಪಕ್ಕ, ಉದ್ದೇಶಿತ ಫೆರಿಫರಲ್ ರಿಂಗ್ ರಸ್ತೆಯ ಬಳಿ ಸೈಟುಗಳು ಮಾರಾಟಕ್ಕಿವೆ.
8197850616

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 35 ವರ್ಷ. ವಿದ್ಯಾರ್ಹತೆ: 7 ರಿಂದ PUC ಮತ್ತು ITI ರಿಯಾಯಿತಿ ದರದಲ್ಲಿ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ
9480404036

FOR SALE
1 Acre Sale at Kochnalli
9606791121
9901966240

ಡ್ರೈವರ್ ಬೇಕಾಗಿದ್ದಾರೆ
ಟಾಟಾ ಏಸ್ ಗಾಡಿ ಓಡಿಸಲು (ಡಿಎಲ್ ಹೊಂದಿರಬೇಕು) ಹೆಲ್ಪರ್ಸ್ ಬೇಕಾಗಿದ್ದಾರೆ. (ತರಕಾರಿ ಮಾರಾಟಕ್ಕೆ) ಆಕರ್ಷಕ ಸಂಬಳ ಮೈಸೂರು ಸಿಟಿಯಲ್ಲಿ ಕರೆ ಮಾಡಿ
8095498033
7090255415

WANTED
Electrical Engineer
Qualification: Diploma / BE in Electrical Engineering (Female only)
(2 years+ experience in handling ESCOM GK,WS and Linkline works)
Call between: 10AM to 5PM
Mail your C.V to: acpltd123@gmail.com
6366366388

ಬೇಕಾಗಿದ್ದಾರೆ
ಹೋಂ ನರ್ಸಿಂಗ್ ಸೇವೆ ಮನೆ, ಎಸ್ಟೇಟ್‌ಗಳಲ್ಲಿ ವಯಸ್ಸಾದವರನ್ನು ರೋಗಿಗಳನ್ನು 24 ಗಂಟೆ ಸೇವೆ ಮಾಡಲು ಅನುಭವ ಇರುವ ಹೋಂ ನರ್ಸ್‌ಗಳನ್ನು ಕಳುಹಿಸಿಕೊಡಲಾಗುತ್ತದೆ.
9035113222

ಪ್ರಿಯೂನಿವರ್ಸಿಟಿ ಲೇಔಟ್
ದನಗಹಳ್ಳಿ ಶಾಂತಿನಿಕೇತನ HD ಕೋಟೆ ರಸ್ತೆ KHB ಕೆಂಚಲಗೂಡು ಪಕ್ಕದ ಲೇಔಟ್ ಸೈಟ್ ನಂ.100, 30x40 ಪೂರ್ವ ಮುಖ ಮೂಡಾ ಖಾತೆ 25 ಲಕ್ಷಗಳು
7259135555

ವಾಸ್ತುಪ್ರಕಾರ
ವಾಸ್ತುಪ್ರಕಾರ ಹೊಸಮನೆ & ಹಳೆಯ ಮನೆ ಆಲ್ಟ್ರೇಷನ್ ಮಾಡಿಕೊಡಲಾಗುವುದು ಸ್ವಾಮಿ ಎಂ. (ಸಿವಿಲ್ ಕಂಟ್ರಾಕ್ಟರ್) ಚದರ ಒಂದಕ್ಕೆ 160000 (ಷರತ್ತು ಅನ್ವಯ)
9945442361
9380885787

ಕರ್ನಾಟಕದಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ
ಕಂಪನಿ ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (ಸಂಬಳ: 18000rs ಇಂದ 30000rs + ಇನ್ಸೆಂಟಿವ್) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ:
9632831680,7411273440

HOUSE FOR RENT
2BHK Independent E/F House for Rent/Lease in Hootagalli KHB
9901085342

40X60 SITE FOR SALE
SITE No. 12365
South Facing opp. Park
Near Ring Road
Vijayanagar 4th Stage
Price : 1.75 Crores
For Full Value Registration
8884133677

ಸಾಲ/LOANS
- House / Site Purchase
- Construction Loan
- Mortgage Loan

(Loans for MUDA, CORPORATION Revenue, 11A & 11B Property)
77605-98705

ಹೊಸ ಮನೆ ಮಾರಾಟಕ್ಕಿದೆ
ವಿಜಯನಗರ 4ನೇ ಹಂತ 2ನೇ ಫೇಸ್ 20x30 ಪೂರ್ವ ದಿಕ್ಕುಳ್ಳ Duplex ಹೊಸ ಮನೆ ಮಾರಾಟಕ್ಕಿದೆ.
ಬೆಲೆ 86 ಲಕ್ಷ
ಆಸಕ್ತರು ಸಂಪರ್ಕಿಸಿ
8867567754

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಕ್ಲೀನಿಂಗ್, ವಾಷಿಂಗ್
ಸ್ಥಳ: ದೇವೇಗೌಡ ಸರ್ಕಲ್ ಬನ್ನೂರು ರಿಂಗ್ ರಸ್ತೆ, ಮೈಸೂರು
ಉತ್ತಮ ಸಂಬಳ ದೊರೆಯುತ್ತದೆ
7483333089

HOUSE FOR LEASE
2BHK / 3BHK
East Facing 7th Cross, Anikethana Road Kuvempunagar Near Gnanaganaga School
9052674614

ಅಂಗಡಿ ಮಳಿಗೆ & ಮನೆ ಬಾಡಿಗೆಗೆ
ಮೈಸೂರು ಕುವೆಂಪುನಗರ ಅಪೋಲೋ ಹಾಸ್ಪಿಟಲ್ ಮುಖ್ಯ ರಸ್ತೆಯಲ್ಲಿ ಪೂರ್ವಾಭಿಮುಖವಾದ ಅಂಗಡಿ ಮಳಿಗೆ ಹಿಂಭಾಗದಲ್ಲಿ 9 ಚದುರದ ಮನೆ ಹಾಗೂ ಎಲ್ಲಾ ಪೀಠೋಪಕರಣ ಹಾಗೂ ಸೋಲಾರ್ ಸಮೇತ 9 ರೂಂಗಳ ಪಿಜಿ ಬಾಡಿಗೆಗೆ ಇದೆ.
Mob: 8197609290

Brilliance Nursery & Primary School, English Medium
B.M. Shree Nagar, Mysuru
ಶಿಕ್ಷಕರು ಬೇಕಾಗಿದ್ದಾರೆ
1. PUC D.Ed or B.A/B.Sc. B.Ed- 1 Post ಆಸಕ್ತರು ಕೂಡಲೇ ತಮ್ಮ ಮೂಲ ದಾಖಲಾತಿಗಳೊಂದಿಗೆ ಕಛೇರಿಗೆ ಭೇಟಿ ನೀಡತಕ್ಕದ್ದು.
9916195956

SITE FOR SALE
33X40 E/S Corner DTCP Approved Opposite Park Nagappa Layout Jayapura, Opposite Govt. Hospital
9343531999

ಬೇಕಾಗಿದ್ದಾರೆ
ಕ್ಯಾಂಟೀನ್ ಅಲ್ಲಿ ಸರ್ವಿಸ್ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. Age: 18-30 Years
ಸಂಬಳ: 12,000+ಆಕರ್ಷಕ ಬೋನಸ್. 8 am to 7 pm
ಸ್ಥಳ: ಮೈಸೂರು
9964242430

ರಾಧಾ–ಮಾಧವ ಮ್ಯಾರೇಜ್ ಮೇಕರ್ಸ್ ವಿವಾಹ ವೇದಿಕೆ
ಎಲ್ಲಾ ವರ್ಗದವರಿಗೆ ಎಲ್ಲಾ ವಯಸ್ಸಿನವರಿಗೂ ಸಂಪರ್ಕಿಸಿ:
7406095058

ಬಾಡಿಗೆ /ಭೋಗ್ಯಕ್ಕೆ
ಕಮರ್ಷಿಯಲ್ ಬಿಲ್ಡಿಂಗ್ 2nd Floor 450 ಅಳತೆಯುಳ್ಳ ಹಾಲ್
3rd Floor Rooms For Rent
ವಿಳಾಸ: ಅಮ್ಮ ಕಾಂಪ್ಲೆಕ್ಸ್ ಮರಿಮಲ್ಲಪ್ಪ ಕಾಲೇಜು ಎದುರು ಸೀತಾ ವಿಲಾಸ ರೋಡ್
9845406826
9342241452

SITES FOR SALE
30x40 and 30x50
BMICAPA Approved Next to Kesare KHB Layout, Off to Ring Road RTO-55.
8660352905, 7975246389

ಮನೆ ಮಾರಾಟಕ್ಕಿದೆ
30x40 ಹಳೆ ಮನೆ ವಿವೇಕಾನಂದ ಸರ್ಕಲ್ ಹತ್ತಿರ. 30x40 ಡ್ಯೂಪ್ಲೆಕ್ಸ್ ಹೊಸ ಮನೆ ಶ್ರೀರಾಂಪುರ. 20x30 ಹಳೇ ಮನೆ ದಟ್ಟಗಳ್ಳಿ, 30x40 ಬೋಗಾದಿ ಎಸ್.ಬಿ.ಎಂ. ಲೇಔಟ್. ಹಳೇ ಮನೆ, ಹೊಸ ಮನೆ ಸೈಟ್ ಮಾರುವವರು, ಕೊಳ್ಳುವವರು ಸಂಪರ್ಕಿಸಿ.
Mob: 9945042875

ಹೋಂ ನರ್ಸಿಂಗ್‌ನಲ್ಲಿ ಉದ್ಯೋಗಾವಕಾಶ
ವಯೋವೃದ್ಧರನ್ನು ಆರೈಕೆ ಮಾಡಲು Full Time, Day/Night Shift ಕೆಲಸಕ್ಕೆ ಯುವತಿಯರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ವೇತನ : 10,000 ರಿಂದ 18,000. ಅನುಭವದ ಅಗತ್ಯವಿಲ್ಲ, ಉಚಿತ ತರಬೇತಿ ವಸತಿಯೊಂದಿಗೆ ಕೆಲಸ ನೀಡಲಾಗುವುದು.
9606714441
7349278501, 0821-4242351

ಮೈಸೂರು ಮ್ಯಾರೇಜಸ್
ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ. ಪ್ರತಿ ದಿನ ವಧುವರರ ನೇರ ಸಂದರ್ಶನ ಇರುತ್ತದೆ. ಡಾ.ಗುರೂಜಿ
9448229184
7899625268

HOUSE FOR RENT
30x40 ft 2BHK East facing door with solar is for Rent in Bogadi 2nd Stage, North Mysore
8867779326

MODULAR KITCHEN @ ₹99,000/-*
Home Space Mart
*T&C Apply
91089 23123

ಸೈಟುಗಳು ಮಾರಾಟಕ್ಕಿವೆ
30x40 S/W ಕಾರ್ನರ್
30x40 ಸಾತಗಳ್ಳಿ
11 ಗುಂಟೆ ಕನ್‌ವೇರ್ಷನ್ ಖಾಲಿ ಜಾಗ N/F 8 ಚದರಡಿ ಮನೆ ಮಾರಾಟಕ್ಕಿದೆ.
VT ಕಾಲೇಜು ಹತ್ತಿರದಲ್ಲಿ
9844985868

SITES FOR SALE
40x60 at Vijayanagar 4th Stage, Dattagalli, Kuvempunagar, Roopa Nagar & Ramakrishnanagar.
40x60 house sale at Ramakrishnanagar.
9663136318, 9844915554

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ MNC ಕಂಪನಿಗಳಿಗೆ ಆಫೀಸ್‌ಗಳಿಗೆ ಶೋರೂಂಗಳಿಗೆ 7th, 10th, puc, Degree, ITI, Diploma, Pass & Fail ಆದ ಯುವಕ/ ಯುವತಿಯರು Packing, Helper, Front Office, Telecalling, Data Entry, Billing, Cashier, HR Admin Driving ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಷರತ್ತು ಅನ್ವಯ ಸಂಬಳ: 18000/- 39000/- (ESI+PF OT)
6364103418,9740468212

Accounts ತಿಳಿದಿರುವವರು ಬೇಕಾಗಿದ್ದಾರೆ (ಬಿ.ಕಾಂ. ಆಗಿರಬೇಕು)
ಅಂಗಡಿ ಕೆಲಸಕ್ಕೆ ಬೇಕಾಗಿದ್ದಾರೆ
(ಡ್ರೈವಿಂಗ್ ಲೈಸನ್ಸ್ ಇರುವವರು ಕೆಲಸಕ್ಕೆ ಅರ್ಹರು)
ಸಂಪರ್ಕಿಸಿ: 9902902530
ಶ್ರೀನಿವಾಸ ಇಮೇಜ್ ಪ್ರಾಡಕ್ಟ್ಸ್, ಕೊತ್ವಾಲ್ ರಾಮಯ್ಯ ಬೀದಿ, ಶಿವರಾಂಪೇಟೆ, ಮೈಸೂರು
ಸಂದರ್ಶನ ವೇಳೆ: 3.30 ರಿಂದ 6 ಗಂಟೆ

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರತಿಷ್ಠಿತ ಕಂಪನಿ, ಆಫೀಸ್, ಶೋರೂಂಗಳಿಗೆ ಕೆಲಸ ಮಾಡಲು 7th, 10th, Puc, ITI, Any Degree, (Pass / Fail) ಆದ ಯುವಕ/ ಯುವತಿಯರಿಗೆ Cashier, Billing, Data Entry, Telephone Attender, Receptionist, Quality, Packing Helper ಮುಂತಾದ ಉದ್ದೇಶಗಳಿಗೆ ಬೇಕಾಗಿದ್ದಾರೆ. ಸಂಬಳ: 14000/- 39000/- (ESI+PF OT) ಸೇರಿ T&C Apply
9513829246,6366141586

ಶ್ರೀ ಗುರುರಾಘವೇಂದ್ರ ಹಾಲಿಡೇಸ್ ಪ್ಯಾಕೇಜ್ ಟೂರ್
ಕಾಶಿಯಾತ್ರ ಪ್ರವಾಸ 11 ದಿನಗಳು ರೈಲಿನಲ್ಲಿ 1 ಸೀಟಿಗೆ 16000/– ಸಾವಿರ
1) ದೇಹಲಿ 2) ಮಥುರಾ 3) ಬೃಂದಾವನ 4) ಆಗ್ರಾ 5) ಅಯೋಧ್ಯ 6) ಕಾಶಿ 7) ಗಯ 8) ಬುದ್ಧಗಯ
ರೈಲು ಮತ್ತು ಬಸ್ಸಿನಲ್ಲಿ ಪ್ರಯಾಣ ಕಾಫೀ, ತಿಂಡಿ, ಊಟ ವಸತಿ ಸೇರಿರುತ್ತದೆ. ಕೇವಲ 20 ಜನಕ್ಕೆ ಮಾತ್ರ (ದಸರಾ ಆದನಂತರ ಟ್ರಿಪ್)
ಟೂರ್ ಆರ್ಗನೈಜರ್ ಜಗದೀಶ್ ಎಸ್.ಎನ್.
9482847724, 7019528922

ಸೋಫಾ ರಿಪೇರ್ಸ್ ಅಂಡ್ ವರ್ಕ್ಸ್
9591012944

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


ಭಾರತೀಯ ಜನತಾ ಪಾರ್ಟಿ
ಮೈಸೂರು ಚಲೋ
ದಿನಾಂಕ : 10-08-2024ರ ಬೆಳಿಗ್ಗೆ 11.00ಕ್ಕೆ
ಸ್ಥಳ : ಮಹಾರಾಜ ಕಾಲೇಜು ಮೈದಾನ, ಮೈಸೂರು
ಭ್ರಷ್ಟ ಕಾಂಗ್ರೆಸ್ ಸರ್ಕಾರದ
ಹಗರಣಗಳ ವಿರುದ್ಧ ಪಾದಯಾತ್ರೆ
ಸಮಾರೋಪ ಸಮಾರಂಭಕ್ಕೆ
ಆಗಮಿಸುತ್ತಿರುವ ಸರ್ವರಿಗೂ
ಹೃತ್ಪೂರ್ವಕ ಸುಸ್ವಾಗತ
ಎಲ್.ಆರ್.ಮಹದೇವಸ್ವಾಮಿ ಎಂ.ಬಿ.ಎ.
ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ,
ಮೈಸೂರು ಜಿಲ್ಲೆ
ಮಾಜಿ ಅಧ್ಯಕ್ಷರು, ಕರ್ನಾಟಕ ಮೃಗಾಲಯ ಪ್ರಾಧಿಕಾರ
"ಮುಡಾ ಹಗರಣದ ವಿರುದ್ಧದ ಹೋರಾಟದಲ್ಲಿ ಭಾಗವಹಿಸಿ"


ಮೈಸೂರು ಚಲೋ
ಪಾದಯಾತ್ರೆ ಮೂಲಕ
ಮೈಸೂರಿಗೆ ಆಗಮಿಸುತ್ತಿರುವ ರಾಜ್ಯದ
ನಾಯಕರಿಗೆ ಕಾರ್ಯಕರ್ತರಿಗೆ ಹಾಗೂ
ಅಭಿಮಾನಿಗಳಿಗೆ ತುಂಬು ಹೃದಯದ
ಸುಸ್ವಾಗತ
ಎಲ್ಲರೂ ಬನ್ನಿ ಸಮಾರೋಪ
ಸಮಾವೇಶವನ್ನು ಯಶಸ್ವಿಗೊಳಿಸೋಣ
ದಿನಾಂಕ: 10.08.2024ರ ಬೆಳಗ್ಗೆ 11.00 ಗಂಟೆ
ಸ್ಥಳ: ಮಹಾರಾಜ ಕಾಲೇಜು ಮೈದಾನ, ಮೈಸೂರು
BJP

ಏಕಾಪ್ರಾ ಇನ್ನಿಂಗ್ಸ್

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಆಗಸ್ಟ್ 10
ಶನಿವಾರ 2024

ಪುಟಗಳು: 8

ಇನ್ನು 10 ವರ್ಷವಾದರೂ ಕಾಂಗ್ರೆಸ್ ಸರ್ಕಾರ ಮುಟ್ಟಲಾಗಲ್ಲ

ಬಿಜೆಪಿ, ಜೆಡಿಎಸ್‌ಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಎಚ್ಚರಿಕೆ

● ಅಧರ್ಮಿಯರ ವಿರುದ್ಧ ನ್ಯಾಯ ಹೋರಾಟ
* ಕಾಂಗ್ರೆಸ್ ನಿರ್ನಾಮ ಸಾಧ್ಯವಿಲ್ಲ ● ನಿಮ್ಮ ತಂತ್ರ, ಕುತಂತ್ರ ಫಲಿಸದು ● ಏಕ ವಚನದಲ್ಲಿ ಡಿ.ಕೆ. ತರಾಟೆ



ಮೈಸೂರು, ಆ.9(ಬಿಎಲ್‌ಯು)– ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಇನ್ನು 10 ವರ್ಷವಾದರೂ ಮುಟ್ಟಲು ಸಾಧ್ಯವಿಲ್ಲ, ಬಿಜೆಪಿ, ಜೆಡಿಎಸ್ ಏನೇ ಹುನ್ನಾರ ಮಾಡಿದರೂ ನಮ್ಮ ಸರ್ಕಾರ ಅಸ್ಥಿರಗೊಳಿಸಲು ಸಾಧ್ಯವಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಪಕ್ಷಗಳಿಗೆ ಎಚ್ಚರಿಕೆ ನೀಡಿದ್ದಾರೆ.

ತಮ್ಮ ಭಾಷಣದುದ್ದಕ್ಕೂ ಹೆಚ್.ಡಿ. ಕುಮಾರಸ್ವಾಮಿ, ಬಿ.ವೈ.ವಿಜಯೇಂದ್ರ ಅವರನ್ನು ಏಕ ವಚನದಲ್ಲಿ ತೀವ್ರ ತರಾಟೆಗೆ ತೆಗೆದುಕೊಂಡ ಡಿ.ಕೆ.ಶಿವಕುಮಾರ್, ಏನೇ ತಂತ್ರ, ಕುತಂತ್ರ ಮಾಡಿದರೂ ಕಾಂಗ್ರೆಸ್ ಸರ್ಕಾರ ಅಲ್ಲಾಡಿಸಲು ನಿಮಗೆ ಸಾಧ್ಯವಿಲ್ಲ ಎಂದು ಎಚ್ಚರಿಕೆ ನೀಡಿದರು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಕೇವಲ 10 ತಿಂಗಳಲ್ಲೇ ಪತನಗೊಳಿಸುವ ತಂತ್ರ ರೂಪಿಸಿದ್ದಾರೆ. ಈ ಹಿನ್ನೆಲೆ ದೇಶದ ಸಂವಿಧಾನ ಹಾಗೂ ಕಾನೂನು ರಕ್ಷಿಸಲು ಈ ಜನಾಂದೋಲನ ಸಮಾವೇಶ ನಡೆಸಲಾಗುತ್ತಿದೆ. ಈ ಮೂಲಕ ಅಧರ್ಮಿಯರ ವಿರುದ್ಧ ನಮ್ಮ ನ್ಯಾಯ ಯುದ್ಧ ಆರಂಭವಾಗಿದೆ ಎಂದು ಘೋಷಿಸಿದರು.

ಬ್ರಿಟಿಷರೆ ಕಾಂಗ್ರೆಸ್ ತೆಗೆಯಲು ಸಾಧ್ಯವಾಗಲಿಲ್ಲ. ಇನ್ನು 19 ಸ್ಥಾನ ಪಡೆದಿರುವ ನಿಮಗೆ ಕಾಂಗ್ರೆಸ್ ನಿರ್ನಾಮ ಮಾಡಲು ಸಾಧ್ಯವೆ ಎಂದು ಪ್ರಶ್ನಿಸಿದ ಡಿ.ಕೆ.ಶಿವಕುಮಾರ್, ಇನ್ನು ಎರಡು ಜನ್ಮ ಕಳೆದರೂ ನಿಮಗೆ ಕಾಂಗ್ರೆಸ್ ತೆಗೆಯಲು ಸಾಧ್ಯವಿಲ್ಲ ಎಂದು ಕುಮಾರಸ್ವಾಮಿ ವಿರುದ್ಧ ಗುಡುಗಿದರು.

ವಿಜಯೇಂದ್ರ, ನಿಮ್ಮ ತಂದೆ ಎರಡು ಬಾರಿ ರಾಜೀನಾಮೆ ಕೊಟ್ಟಿದ್ದೇಕೆ? ನಾಳೆ ನೀನು ಮೈಸೂರಿಗೆ ಬಂದು ಸಭೆ ಮಾಡುವಾಗ ಲೆಕ್ಕ ಕೊಡು. ಲಕ್ಷ್ಮಿ ವಿಲಾಸ ಬ್ಯಾಂಕಿನಿಂದ ವಿದೇಶಕ್ಕೆ ಆರ್‌ಟಿಜಿಎಸ್ ಮಾಡಿದ್ದೀಯಲ್ಲಾ, ಅದು ಯಾಕೆ. ನಿಮ್ಮ ತಂದೆ ಕಣ್ಣೀರು ಹಾಕಿದ್ಯಾಕೆ ಎಂದು ವಿವರಿಸು. ಇಲ್ಲಿ ಯಾರೂ ರಾಜೀನಾಮೆ ಕೊಡಬೇಕು ಎಂದು ಕಾಲ ತೀರ್ಮಾನ ಮಾಡುತ್ತದೆ ಎಂದರು.

ಈ ಸರ್ಕಾರ ಉರುಳಿಸಿ ಅಧಿಕಾರಕ್ಕೆ ಬರುತ್ತೇವೆ ಎಂದು ಭ್ರಮೆಯಲ್ಲಿದ್ದೀರಾ. ಆದರೆ ನಿಮ್ಮ ಆಸೆ ಕೈಗೂಡದು ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ನಾನೇ ಆಗಿದ್ದರೆ ನನ್ನ ಹೋರಾಟ ಬೇರೆ ತರನೆ ಇರುತ್ತಿತ್ತು

ತವರು ಮನೆಯಿಂದ ದಾನವಾಗಿ ಬಂದ ಭೂಮಿಯನ್ನು ಸ್ವಾಧೀನ ಮಾಡಿಕೊಂಡಿರುವುದಕ್ಕೆ ಸಿದ್ದರಾಮಯ್ಯ ಪತ್ನಿ ಪಾರ್ವತಿ ಬದಲಿ ನಿವೇಶನ ಪಡೆದಿದ್ದಾರೆ. ಇದರಲ್ಲಿ ತಪ್ಪೇನಿದೆ ಎಂದು ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು. ಪತ್ನಿಗೆ ನಿವೇಶನ ಕೊಡಿಸಲು ಸಿದ್ದರಾಮಯ್ಯ ಯಾವುದೇ ಆದೇಶ ಮಾಡಿಲ್ಲ, ಪ್ರಭಾವ ಬೀರಿಲ್ಲ. ಆದರೂ ನಿರಾಧಾರ ಆರೋಪ ಮಾಡುತ್ತಿದ್ದಾರೆ ಎಂದರು. 20 ವರ್ಷದ ಹಳೆ ಪ್ರಕರಣ ಕೆದಕಿದ್ದಾರೆ. ಪಾರ್ವತಿ ಅಕ್ಕ ಇಷ್ಟು ವರ್ಷ ಕಾದು ನಿವೇಶನ ಪಡೆದಿದ್ದಾರೆ. ಈ ಮೂಲಕ ಪಾರ್ವತಿ ಅವರು ತಾಳ್ಮೆಯಿಂದ ಕಾದಿದ್ದಾರೆ. ಪಾರ್ವತಿ ಬದಲು ನಾನೇ ಆಗಿದ್ದರೆ ನನ್ನ ಹೋರಾಟವೇ ಬೇರೆ ಇರುತ್ತಿತ್ತು ಎಂದು ಹೇಳಿದರು.

ಈ ಬಂಡೆ ಸಿದ್ದರಾಮಯ್ಯ ಜೊತೆಗಿದೆ

ಮಿಸ್ಟರ್, ಕುಮಾರಸ್ವಾಮಿ, ವಿಜಯೇಂದ್ರ ನಿಮಗೆ ಸಿದ್ದರಾಮಯ್ಯ ರಾಜೀನಾಮೆ ಬೇಕಾ. ಅದು ಎಂದಿಗೂ ಸಾಧ್ಯವಿಲ್ಲ. ಏಕೆಂದರೆ ಈ ಬಂಡೆ ಸಿದ್ದರಾಮಯ್ಯ ಜೊತೆಗಿದೆ ಎಂದು ಡಿ.ಕೆ.ಶಿವಕುಮಾರ್ ಎಚ್ಚರಿಸಿದರು. ಬಂಡೆ ಪ್ರಕೃತಿ, ಕಡಿದರೆ ಆಕೃತಿ, ಕೆತ್ತಿದರೆ ಸಂಸ್ಕೃತಿ ಎಂದು ಪ್ರಾಸಬದ್ಧ ಮಾತುಗಳ ಮೂಲಕ ಈ ಬಂಡೆ ಸಿದ್ದರಾಮಯ್ಯ ಜೊತೆಯಲ್ಲಿರುವಾಗ ನೀವೆಲ್ಲಾ ಒಟ್ಟಿಗೆ ಸೇರಿದರೂ ಯಾರಿಗೂ ಏನು ಮಾಡಲು ಸಾಧ್ಯವಿಲ್ಲ ಎಂದು ಸವಾಲು ಹಾಕಿದರು. ಸಿದ್ದರಾಮಯ್ಯಗೆ 136 ಶಾಸಕರ ಬೆಂಬಲವಿದೆ. 1.86 ಕೋಟಿ ಜನರ ಆಶೀರ್ವಾದವಿದೆ. ಇಷ್ಟೊಂದು ಜನ ಬೆಂಬಲ ಇರುವಾಗ ನಿಮ್ಮ ಕೈಲಿ ಏನು ಮಾಡಲು ಸಾಧ್ಯವಿಲ್ಲ ಎಂದು ತಿರಗೇಟು ನೀಡಿದರು.

ಕರ್ನಾಟಕದ ಸಂಪತ್ತು ಉಳಿಸಲು ಕಾಂಗ್ರೆಸ್ ಬಳ್ಳಾರಿ ತನಕ ಪಾದಯಾತ್ರೆ ಮಾಡಿತು. ಕಾವೇರಿಗಾಗಿ ಎಸ್.ಎಂ.ಕೃಷ್ಣ ಪಾದಯಾತ್ರೆ ನಡೆಸಿದರು, ಮೇಕೆದಾಟುಗಾಗಿ ನಾನು ಬೆಂಗಳೂರು ತನಕ ಪಾದಯಾತ್ರೆ ಮಾಡಿದೆ. ಆದರೆ ನಿಮ್ಮ ಪಾದಯಾತ್ರೆ ಏತಕ್ಕಾಗಿ ಮಾಡಿದ್ದೀರಾ ಎಂದು ಪ್ರಶ್ನಿಸಿದ ಡಿ.ಕೆ.ಶಿವಕುಮಾರ್, ನೀವು ನಡೆಸಿದ ಪಾದಯಾತ್ರೆ ಪಾಪದ ಪ್ರಾಯಶ್ಚಿತ ಯಾತ್ರೆ ಎಂದು ಗೇಲಿ ಮಾಡಿದರು.

ನೀವು ಕ್ಲೀನ್ ಸ್ವಾಮಿನಾ...

ನೀವು ಕ್ಲೀನ್ ಸ್ವಾಮಿನಾ ಎಂದು ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಪ್ರಶ್ನೆ ಮಾಡಿದ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ಆಗಿದ್ದಾಗ 50 ಕ್ಕೂ ಹೆಚ್ಚು ಡಿ ನೋಟಿಫಿಕೇಷನ್ ಮಾಡಿದ್ದೀರಾ. ಇರಿ....ಇರಿ... ಎಲ್ಲವನ್ನು ಒಂದೊಂದಾಗಿ ಬಯಲಿಗೆ ತರುತ್ತೇನೆ ಎಂದು ಎಚ್ಚರಿಸಿದರು. ಇದೇ ಕುಮಾರಸ್ವಾಮಿ ಬಿಜೆಪಿ ಹಾಗೂ ಯಡಿಯೂರಪ್ಪ ಬೆನ್ನಿಗೆ ಚೂರಿ ಹಾಕಿದರು. ಮಕ್ಕಳಿಗೆ ದಾರಿ ಮಾಡಿಕೊಡಲು ಮಹಾನ್ ನಾಯಕರನ್ನು ಓಡಿಸಿದರು. ತನ್ನ ಮಗನನ್ನು ಬೆಳೆಸಲು ಮತ್ತೊಬ್ಬ ಮಗನನ್ನು ಮುಗಿಸಿದರು. ಹೀಗಿರುವಾಗ ನನ್ನ ಹಾಗೂ ಸಿದ್ದರಾಮಯ್ಯನನ್ನು ಇವರು ಬಿಡುತ್ತಾರೆಯೇ ಎಂದು ಪ್ರಶ್ನಿಸಿದರು. ಪ್ರಜ್ವಲ್ ರೇವಣ್ಣ ವಿಚಾರದಲ್ಲಿ ಮೊದಲು ನನ್ನ ವಿರುದ್ಧ ಮಾತನಾಡಿದರು. ಆ ಮೇಲೆ ಪ್ರೀತಂಗೌಡ ವಿರುದ್ಧ ಆಪಾದನೆ ಮಾಡಿದರು. ನಿಮ್ಮ ಕುಟುಂಬದ ಅನುಕೂಲಕ್ಕೆ ಯಾರ ಮೇಲೆ ಏನನ್ನಾದರೂ ಹೇಳುತ್ತೀರಲ್ಲಾ ಎಂದು ಟೀಕಿಸಿದರು. ಇರಲಿ, ಏನೆಲ್ಲಾ ತಂತ್ರ, ಕುತಂತ್ರ ಮಾಡುತ್ತೀರೊ ಮಾಡಿ. ನಿಮಗೆ ಕೊನೆಗಾಲ ಬಂದಿದೆ ಎಂದು ಎಚ್ಚರಿಕೆ ನೀಡಿದರು. ಈ ಸರ್ಕಾರ ಉರುಳಿಸಲು ನಿಮಗೆ ಸಾಧ್ಯವಿಲ್ಲ. ಏಕೆಂದರೆ ಸಿದ್ದರಾಮಯ್ಯ ಬೆನ್ನ ಹಿಂದೆ ನಾನಿದ್ದೇನೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಇದ್ದಾರೆ. ನೀವು ಸಿದ್ದರಾಮಯ್ಯ ಅವರನ್ನು ಏನು ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದರು.



ಕರ್ನಾಟಕ ರಾಜ್ಯ ಮಿನಿ ಒಲಿಂಪಿಕ್ಸ್‌ಗೆ ಆಯ್ಕೆ

ರಾಜ್ಯ ಮಟ್ಟದ ಸಬ್ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಿದ್ದ ಮೈಸೂರಿನ ಕೆಬಿಸಿ ತಂಡದ ಉದಯೋನ್ಮುಖ ಆಟಗಾರ ರೆನಿಷ್ ಮ್ಯಾಥ್ಯೂ ಆ. 24ರಿಂದ ನಡೆಯುವ ಕರ್ನಾಟಕ ರಾಜ್ಯ ಮಿನಿ ಒಲಿಂಪಿಕ್ಸ್‌ಗೆ ಆಯ್ಕೆಯಾಗಿದ್ದಾರೆ. ಈತ ಸಂತ ರೊಸೆಲ್ಲೊ ಸೆಂಟ್ರಲ್ ಶಾಲೆಯ ವಿದ್ಯಾರ್ಥಿ.

ಸ್ವೀಡನ್‌ಗೆ ಹೊರಟ ಅಂತಾರಾಷ್ಟ್ರೀಯ ಅಥ್ಲೆಟ್ ಎಂ.ಯೋಗೇಂದ್ರಗೆ ಬೀಳ್ಕೊಡುಗೆ



25ನೇ ವಿಶ್ವ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಲು ಸ್ವೀಡನ್‌ಗೆ ಹೊರಟ ಅಂತಾರಾಷ್ಟ್ರೀಯ ಅಥ್ಲೆಟ್ ಯೋಗೇಂದ್ರ ಅವರಿಗೆ ಬೀಳ್ಕೊಡಲಾಯಿತು.

ಮೈಸೂರು,ಆ.9–ಆ.13ರಿಂದ 15ರವರೆಗೆ ನಡೆಯಲಿರುವ 25ನೇ ವಿಶ್ವ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಲು ಸ್ವೀಡನ್‌ಗೆ ಹೊರಟ ಅಂತಾರಾಷ್ಟ್ರೀಯ ಅಥ್ಲೆಟ್ ಎಂ.ಯೋಗೇಂದ್ರ ಅವರಿಗೆ ಬೀಳ್ಕೊಡುಗೆ ನೀಡಲಾಯಿತು.

ಮೈಸೂರು ಅಥ್ಲೆಟಿಕ್ಸ್ ಕ್ಲಬ್ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿಯೂ ಆಗಿರುವ ಎಂ.ಯೋಗೇಂದ್ರ ಅವರನ್ನು ಸನ್ಮಾನಿಸಲಾಯಿತು. ಯೋಗೇಂದ್ರ ಅವರು 60 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ 2000 ಮೀಟರ್ ಸ್ಟೀಪಲ್ ಚೇಸ್‌ನಲ್ಲಿ ಭಾಗವಹಿಸುವರು. ಈ ಸಂದರ್ಭದಲ್ಲಿ ಕ್ಲಬ್ ಉಪಾಧ್ಯಕ್ಷ ಡಾ.ಸಿ.ಕೃಷ್ಣ, ಹಿರಿಯ ಪತ್ರಕರ್ತರಾದ ರವೀಂದ್ರ ಭಟ್ಟ, ಅಂಶಿ ಪ್ರಸನ್ನ ಕುಮಾರ್, ಟಿ.ಆರ್.ಸತೀಶ್‌ಕುಮಾರ್, ಪ್ರಾತಿಪರ ಹೋರಾಟಗಾರ ಲಕ್ಷ್ಮಣ್ ಹೊಸಕೋಟೆ, ಕ್ಲಬ್‌ನ ಸಂಘಟನಾ ಕಾರ್ಯದರ್ಶಿ ಹಾಗೂ ತರಬೇತುದಾರ ಜಿ.ಆರ್. ಪ್ರಭಾಕರ್, ಜಂಟಿ ಕಾರ್ಯದರ್ಶಿಗಳಾದ ಡಾ.ಚೈನ್ ಸಿಂಗ್ ರಾಜಪುರೋಹಿತ್, ಎಚ್.ಆರ್.ರಾಮಸ್ವಾಮಿ, ಮಹದೇವಯ್ಯ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿ ವಿತರಣೆ



ಮೈಸೂರು, ಆ.9–ಹೆಲ್ಪಿಂಗ್ ಹ್ಯಾಂಡ್ಸ್ ತನ್ನ "ಶಿಕ್ಷಾ ಯೋಜನೆ" ಅಡಿಯಲ್ಲಿ ಮೈಸೂರಿನ ಕ್ಯಾತಮಾರನಹಳ್ಳಿಯ ಚಿಕ್ಕಗರಡಿ ರಾಮಮಂದಿರದಲ್ಲಿರುವ ಕೋಚಿಂಗ್ ಸೆಂಟರ್‌ನ ಬಡ ವಿದ್ಯಾರ್ಥಿಗಳಿಗೆ ಪುಸ್ತಕಗಳು, ಬ್ಯಾಗ್‌ಗಳು, ಸ್ಟೇಷನರಿ ಮತ್ತು ಕ್ರೀಡಾ ವಸ್ತುಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಹೆಲ್ಪಿಂಗ್ ಹ್ಯಾಂಡ್ಸ್ ಕಾರ್ಯದರ್ಶಿ ಆನಂದ್ ಪಟ್ವಾ ಮಾತನಾಡಿ, ಬಡ ವಿದ್ಯಾರ್ಥಿಗಳಿಗೆ ಕಲಿಯುವ ಸಾಮಗ್ರಿಗಳನ್ನು ಉಚಿತವಾಗಿ ಕಲ್ಪಿಸುತ್ತಿರುವ ವಕೀಲ ಹರೀಶ್ ಅವರ ಸೇವೆ ಶ್ಲಾಘನೀಯ ಎಂದರು. ಉದಯಗಿರಿ ಪೊಲೀಸ್ ಠಾಣೆಯ ಉಪನಿರೀಕ್ಷಕ ರೂಪೇಶ್, ಮಹಾವೀರ ಖಾಬಿಯಾ, ಖಜಾಂಚಿ ರಾಜನ್ ಬಾಗ್‌ಮಾರ್, ಪ್ರಕಾಶ್ ಗಾಂಧಿ, ಮನೋಹರ್ ಸಂಕಲಾ, ಸಂಪತ್ ಬಾಗ್‌ಮಾರ್, ಗೌತಮ್ ಗಾಂಧಿ, ವಿಕ್ರಮ್ ಕವಾಡ, ಜಂಬು ಲೋಧಾ, ಗೌತಮ್ ಪಟ್ವಾ, ಪ್ರಮೋದ್ ಚೋಪ್ರಾ ಹರ್ಷ ಬೋಹ್ರಾ, ಮಹಿಳಾ ವಿಭಾಗದ ಸದಸ್ಯೆ ಸೀಮಾ ಬೋಹ್ರಾ, ಇಂದ್ರಾಬಾಯಿ ಖಾಬಿಯಾ, ಬಿಂಧು ಬಾಗ್‌ಮಾರ್, ಆಶಾ ಬಾಗ್ಮಾರ್, ಸೋನಾಲ್ ಚೋಪ್ರಾ, ಮಮತಾ ಲೋಧಾ, ದರ್ಶನ ಲೋಧಾ ಡೋಲಿ ಗಾಂಧಿ, ಶಿಕ್ಷಕರಾದ ಹರೀಶ್, ಗಿರೀಶ್, ಅರುಣ್, ವಿನೋದ್, ಸೌಭಾಗ್ಯ, ಪಾಲಕರು, ಗ್ರಾಮಸ್ಥರು ಮತ್ತಿತರರು ಉಪಸ್ಥಿತರಿದ್ದರು.

ಒಳ ಮೀಸಲಾತಿ; ಸುಪ್ರೀಂಕೋರ್ಟ್ ನೀಡಿರುವ ತೀರ್ಪಿಗೆ ಸ್ವಾಗತ

ಮೈಸೂರು, ಆ.9(ಜಿಎ)–ಒಳ ಮೀಸಲಾತಿ ಕುರಿತಂತೆ ಅದನ್ನು ಜಾರಿ ಮಾಡುವ ಅಧಿಕಾರ ಆಯಾಯ ರಾಜ್ಯಗಳಿಗೆ ಇದೆ ಎಂಬ ಸುಪ್ರೀಂಕೋರ್ಟ್ ತೀರ್ಪನ್ನು ರಾಜ್ಯ ಮಾದಿಗರ ಜನಾಂದೋಲನ ವೇದಿಕೆ ಸ್ವಾಗತಿಸಿದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತೀರ್ಪಿನಲ್ಲಿ ಕೆನೆಪದರ ವಿಷಯವನ್ನು ಜಾರಿ ಸಂದರ್ಭದಲ್ಲಿ ಪರಿಗಣಿಸುವಂತೆ ತಿಳಿಸಿರುವುದಕ್ಕೆ ತಮ್ಮ ಸಮ್ಮತಿಯಿಲ್ಲ. ಅಸ್ಪೃಶ್ಯರಿಗೆ ಕೆನೆಪದರ ಅನ್ವಯಿಸುವುದಿಲ್ಲ. ಒಂದು ವೇಳೆ ಉತ್ತಮ ಉದ್ಯೋಗ ಸಿಕ್ಕಿದರೂ ಇವರನ್ನು ಸವರ್ಣೀಯರೆಂದು ಪರಿಗಣಿಸುವ ಸಾಧ್ಯತೆ ಇದೆಯೇ ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಅಧಿಕಾರದಲ್ಲಿರುವ ಸರ್ಕಾರ ಒಳ ಮೀಸಲಾತಿ ಕೂಡಲೇ ಜಾರಿಗೊಳಿಸಬೇಕು. ಬ್ಯಾಕ್‌ಲಾಗ್ ಹುದ್ದೆಗಳು ಹಾಗೂ ಇನ್ನಿತರ ಹುದ್ದೆಗಳಿಗೆ ಭರ್ತಿ ಮಾಡಬೇಕು. ಈ ಸಂದರ್ಭದಲ್ಲಿ ಒಳ ಮೀಸಲಾತಿ ಮಾನದಂಡ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಉಪಮೇಯರ್ ಕೃಷ್ಣ, ನಾಗರಾಜು ಎಂ.ಸಿ.ಹುಂಡಿ, ಹಡಜನಸ್ವಾಮಿ, ಶಂಕರ ಹಲಗಯ್ಯನಹುಂಡಿ ಮತ್ತಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯರಿಗೆ ನೀಡಿರುವ ಶೋಕಾಸ್ ನೋಟಿಸ್ ಹಿಂಪಡೆಯಲು ಆಗ್ರಹ

ಮೈಸೂರು, ಆ.9(ಜಿಎ)–ಸಾಂವಿಧಾನಿಕ ಹುದ್ದೆಯಲ್ಲಿರುವ ರಾಜ್ಯಪಾಲರು ಖಾಸಗಿ ವ್ಯಕ್ತಿ ಟಿ.ಜೆ. ಅಬ್ರಹಾಂ ನೀಡಿರುವ ದೂರು ಆಧರಿಸಿ ಸಿಎಂ ಸಿದ್ದರಾಮಯ್ಯ ಅವರಿಗೆ ನೀಡಿರುವ ಶೋಕಾಸ್ ನೋಟಿಸ್ ವಾಪಸು ಪಡೆಯಬೇಕು ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಭುಗತಗಹಳ್ಳಿ ಮಣಿಯಯ್ಯ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅವರು ಕಳೆದ 45 ವರ್ಷಗಳಿಂದ ಸಾಮಾಜಿಕ ನ್ಯಾಯ ಗುರಿಯಾಗಿರಿಸಿಕೊಂಡು ನಿರಂತರವಾಗಿ ಅಹಿಂದ ವರ್ಗಗಳ ಏಳಿಗೆಗೆ ದುಡಿಯುತ್ತಿದ್ದಾರೆ. ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು, ರೈತರು, ಕೂಲಿ ಕಾರ್ಮಿಕರು ಹಾಗೂ ಎಲ್ಲಾ ಜಾತಿ ವರ್ಗಗಳಿಗಾಗಿ ಸಾಮಾಜಿಕ ನ್ಯಾಯ, ಸಮಾನತೆ ಒದಗಿಸಿದ್ದಾರೆ. ಎಲ್ಲ ವರ್ಗಗಳವರಿಗೂ ಸವಲತ್ತು ನೀಡಿದ್ದಾರೆ. ಇದನ್ನು ಸಹಿಸದೇ ಬಿಜೆಪಿ ಹಾಗೂ ಜೆಡಿಎಸ್‌ನವರು ಮುಡಾ ಹಗರಣದ ನೆಪದಲ್ಲಿ ಇವರನ್ನು ಅಧಿಕಾರದಿಂದ ಕೆಳಗಿಳಿಸಲು ಯತ್ನಿಸುತ್ತಿದ್ದಾರೆ. ಹೀಗಾಗಿ ಇದನ್ನು ಖಂಡಿಸುವುದಾಗಿ ತಿಳಿಸಿದರು.

ತಾಲೂಕಿನ ಕಸಬಾ ಹೋಬಳಿ ಕೆಸರೆ ಗ್ರಾಮದ ಒಂದು ಸರ್ವೆ ನಂಬರ್‌ನಲ್ಲಿ ಸಿಎಂ ಪತ್ನಿ ಪಾರ್ವತಿ ಅವರ ಹೆಸರಿಗೆ ಇದ್ದ 3.16 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡ ಬಳಿಕ ಮುಡಾ ಪಾರ್ವತಿ ಅವರ ಹೆಸರಿಗೆ ನಿವೇಶನ ನೀಡಿರುವುದರಲ್ಲಿ ಏನು ಅಕ್ರಮವಿದೆ ಎಂದು ಪ್ರಶ್ನಿಸಿ, ಮುಡಾ ಹಗರಣಕ್ಕೂ ಸಿದ್ದರಾಮಯ್ಯ ಅವರಿಗೂ ಸಂಬಂಧವಿಲ್ಲ. ಹೀಗಿದ್ದರೂ ಇಲ್ಲಸಲ್ಲದ ಸುಳ್ಳು ಹೇಳಿಕೊಂಡು ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಯತ್ನ ಮುಂದುವರಿಸಿದರೆ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಚಾ.ನಂಜುಂಡ ಮೂರ್ತಿ, ಆಲಗೂಡು ಎಂ.ಶಿವಣ್ಣ, ಬೊಕ್ಕಳ್ಳಿ ಲಿಂಗಯ್ಯ, ರತ್ನಮ್ಮ, ಸಣ್ಣಸ್ವಾಮಿ ಸರಗೂರು ಉಪಸ್ಥಿತರಿದ್ದರು.

ನಾಚನಹಳ್ಳಿ ಬಡಾವಣೆಯಲ್ಲಿ ಮುಡಾದ 14.22 ಎಕರೆ ಭೂ ಹಗರಣ ಬಯಲು

ರಾಜ್ಯ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದ ಮೈಸೂರಿನ ಎನ್‌ಜಿಒ ಪಬ್ಲಿಕ್ ಕಾಸ್



ಮೈಸೂರು, ಆ.1 (ಆರ್‌ಕೆ)–ಮೈಸೂರಿನ ನಾಚನಹಳ್ಳಿ ಬಡಾವಣೆಯ ಸರ್ವೆ ನಂ.93ರ ಜಾಗ ರಕ್ಷಿಸಿಕೊಳ್ಳುವಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ವು ವಿಫಲವಾಗಿದೆ ಎಂದು ಸಾಮಾನ್ಯ ಜನರ ಹಿತಾಸಕ್ತಿ ಕಾಪಾಡುತ್ತಿರುವ ಮೈಸೂರಿನ ಸರ್ಕಾರೇತರ ಸ್ವಯಂ ಸಂಘ ಸಂಸ್ಥೆ ಪಬ್ಲಿಕ್ ಕಾಸ್ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ದೂರು ನೀಡಿದೆ.

ಈ ಸಂಬಂಧ ಪಬ್ಲಿಕ್ ಕಾಸ್ ಸಂಸ್ಥೆಯ ಕಾರ್ಯದರ್ಶಿ ಎಸ್.ತುಳಸೀಧರನ್ ಅವರು ಪತ್ರ ಬರೆದಿದ್ದು, ನಾಚನಹಳ್ಳಿ ಪಾಳ್ಯದ ಸ.ನಂ.93ರಲ್ಲಿ ವಸತಿ ಬಡಾವಣೆ ರಚಿಸಲಾಗಿದ್ದು, ಅಂದಿನ ನಗರ ಅಭಿವೃದ್ಧಿ ವಿಶ್ವಸ್ಥ ಮಂಡಳಿ(ಸಿಐಟಿಬಿ–ಈಗ ಮುಡಾ)ಯಿಂದ 1984ರ ಅನುಮೋದನೆ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ. 40 ವರ್ಷಗಳಿಂದಲೂ ಈ ಜಾಗದ ಸಂಬಂಧ ಕಾನೂನು ಹೋರಾಟ ನಡೆಯುತ್ತಿದ್ದರೂ ಮುಡಾ ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸಿಲ್ಲ. ಆಸ್ತಿಯನ್ನು ರಕ್ಷಿಸಿಕೊಳ್ಳಲು ಪ್ರಯತ್ನ ಮಾಡದೇ ಆಸ್ತಿಯು ಸುಗಮವಾಗಿ ಖಾಸಗಿ ವ್ಯಕ್ತಿಗಳ ಕೈಗೆ ನ್ಯಾಯಾಂಗ ಪ್ರಕ್ರಿಯೆ ಮೂಲಕ ತಲುಪಲು ಪರೋಕ್ಷವಾಗಿ ಸಹಕರಿಸಿದೆ ಎಂದು ಅವರು ತಮ್ಮ ಪತ್ರದಲ್ಲಿ ದೂರಿದ್ದಾರೆ.

1993ರಲ್ಲಿ ಮುಡಾ ಅಧಿಕಾರಿಗಳು ಈ ಆಸ್ತಿಗೆ ಕೆಲವು ಖಾಸಗಿ ವ್ಯಕ್ತಿಗಳನ್ನು ಹಕ್ಕುದಾರರನ್ನಾಗಿ ಮಾಡಿದ್ದರು ಹಾಗೂ ಮೈಸೂರಿನ ಸ್ಮಾಲ್ ಕಾಸಸ್ ಮತ್ತು ಸಿವಿಲ್ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರ ಮುಂದೆ ಒಎಸ್ ಸಂಖ್ಯೆ 87/1993 ರಂತೆ ಮೊಕದ್ದಮೆ ದಾಖಲಿಸಿ ಅದರಲ್ಲಿ ಮುಡಾವನ್ನು ಜಾಣತನದಿಂದ 4ನೇ ಪ್ರತಿವಾದಿಯಾಗಿ ಮಾಡಲಾಗಿದೆ ಎಂದು ತುಳಸೀಧರನ್ ಅವರು 2024 ಆಗಸ್ಟ್ 5ರಂದು ಮುಖ್ಯಕಾರ್ಯದರ್ಶಿಗಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಈ ಪ್ರಕರಣವು 1993ರ ಮಾರ್ಚ್ 10ರಿಂದ 2015ರ ಏಪ್ರಿಲ್ 29ರ ವರೆಗೆ ಸತತ 22 ವರ್ಷ, 1 ತಿಂಗಳು 20 ದಿನಗಳ ಕಾಲ ನಡೆದರೂ ಈವರೆಗೆ ಮುಡಾ ಒಂದೇ ಒಂದು ಆಕ್ಷೇಪಣೆಯನ್ನು ಸಲ್ಲಿಸಿಲ್ಲ. ಖಾಸಗಿ ವ್ಯಕ್ತಿಗಳು ಮುಡಾ ಆಸ್ತಿಯನ್ನು ಕಬಳಿಸಲು ಅಧಿಕಾರಿಗಳು ಜಾಣತನದಿಂದ ಹೇಗೆ ಸಹಕರಿಸುತ್ತಾರೆ ಎಂಬುದಕ್ಕೆ ಈ ಪ್ರಕರಣವೇ ನಿದರ್ಶನ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಅಲ್ಲದೆ ಮುಡಾ ಅಧಿಕಾರಿಗಳು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರೆಗ್ಯುಲರ್ ಫಸ್ಟ್ ಅಪೀಲು (ಆರ್‌ಎಫ್‌ಎ) ನಲ್ಲೂ ನಿರ್ಲಕ್ಷ್ಯ ವಹಿಸಿದ್ದಾರೆ. ಈ ಪ್ರಕರಣವು ಬೆಂಗಳೂರಿನ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಮುಂದೆಯೂ ವಿಚಾರಣೆಗೆ ಬಂದಿತ್ತು. (ಆರ್‌ಎಫ್‌ಎ ನಂ 1165/20215). ಆ ವೇಳೆಯೂ ಸಮರ್ಥವಾಗಿ ವಾದ ಮಂಡಿಸಿ ನಾಚನಹಳ್ಳಿಪಾಳ್ಯ ಸ.ನಂ. 93ರ ಆಸ್ತಿ ಉಳಿಸಿಕೊಳ್ಳಲು ಮುಡಾ ಕ್ರಮವಹಿಸಲಿಲ್ಲ. 2021ರಲ್ಲಿ ಯಾವುದೋ ಒಂದು ಸಂದರ್ಭದಲ್ಲಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಕೆಲ ಸಮಾಲೋಚಕರನ್ನು ತೊಡಗಿಸಿಕೊಂಡರೆ ಹೊರತು, ಅಧಿಕಾರಿಗಳು ಇದುವರೆಗೂ ಈ ಮೇಲ್ಮನವಿಗೆ ಆಕ್ಷೇಪಣಾ ಹೇಳಿಕೆಗಳು, ಲಿಖಿತ ಹೇಳಿಕೆಯನ್ನಾಗಲೀ ಸಲ್ಲಿಸಿಲ್ಲ ಎಂದು ತುಳಸೀಧರನ್ ಅವರು ತಮ್ಮ ಪತ್ರದಲ್ಲಿ ಆರೋಪಿಸಿದ್ದಾರೆ. ಹೈಕೋರ್ಟ್‌ನಲ್ಲಿ ಬಾಕಿ ಇರುವ ರಿಟ್ ಪಿಟಿಷನ್ ಸಂಖ್ಯೆ 10746, 2017(ಎಲ್‌ಎ–ಯುಡಿಎ)ಗೆ ಸಂಬಂಧಿಸಿದಂತೆಯೂ ಮುಡಾ ಸಮರ್ಥಿಸಿಕೊಂಡಿಲ್ಲ. ಮುಡಾ ಮತ್ತು ಅದರ ವಿಶೇಷ ಭೂಸ್ವಾಧೀನಾಧಿಕಾರಿಗಳು ಈ ಪ್ರಕರಣದಲ್ಲಿ ಪ್ರತಿವಾದಿಗಳಾಗಿದ್ದಾರೆ. ನಾಚನಹಳ್ಳಿ ಪಾಳ್ಯ ಸ.ನಂ.93ರ ಆಸ್ತಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯವು 2017ರ ಫೆಬ್ರವರಿ 1ರಂದು ನೀಡಿದ್ದ ಮಧ್ಯಂತರ ಆದೇಶವನ್ನು ತೆರವುಗೊಳಿಸಲು ಪ್ರತಿವಾದಿಗಳ ಅರ್ಜಿಯನ್ನು 2020ರ ಡಿಸೆಂಬರ್ 8ರಂದು ವಜಾಗೊಳಿಸಿದೆ. ಇದಕ್ಕೂ ಮುಡಾ ಅಧಿಕಾರಿಗಳು ಸಮರ್ಥನೆ ಮಾಡಿಕೊಳ್ಳದಿರುವುದೇ ಕಾರಣ ಎಂದು ಅವರು ಮುಖ್ಯ ಕಾರ್ಯದರ್ಶಿಗಳಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ನಾಚನಹಳ್ಳಿ ಪಾಳ್ಯ ಸ.ನಂ.93ರ ಆಸ್ತಿ ಮೇಲಿನ ಹಕ್ಕು ಪ್ರತಿಪಾದಿಸುವ ಸಂಬಂಧ ಸಮರ್ಥವಾಗಿ ವಾದ ಮಂಡಿಸಲು ವಕೀಲರ ತಂಡ ರಚಿಸುವಂತೆಯೂ ಅವರು ಮುಖ್ಯ ಕಾರ್ಯದರ್ಶಿಯವರಿಗೆ ಮನವಿ ಮಾಡಿ ಆಸ್ತಿ ರಕ್ಷಿಸುವ ಸಂಬಂಧ, ಟಾಸ್ಕ್‌ಫೋರ್ಸ್ ರಚಿಸಿ ಅಗತ್ಯ ಸಿಬ್ಬಂದಿ, ಸಲಕರಣೆಗಳನ್ನು ಒದಗಿಸುವಂತೆ ಮುಡಾ ಕಮಿಷ್ನರ್‌ಗೆ ನಿರ್ದೇಶನ ನೀಡುವಂತೆಯೂ ಕೋರಿಕೊಂಡಿದ್ದಾರೆ.

ಒಂದು ವೇಳೆ ಅನಧಿಕೃತವಾಗಿ ಒತ್ತುವರಿ ಮಾಡಿ ನಿರ್ಮಿಸಿದ ಕಟ್ಟಡ ತೆರವುಗೊಳಿಸಿ ಮುಡಾ ಆಸ್ತಿ ರಕ್ಷಿಸಲು ಟಾಸ್ಕ್‌ಫೋರ್ಸ್‌ಗೆ ಮೂಲ ಸೌಲಭ್ಯ ಒದಗಿಸಬೇಕು, 121 ವರ್ಷಗಳಿಂದ ಅಸ್ತಿತ್ವದಲ್ಲಿರುವ ಹಿಂದಿನ ಸಿಐಟಿಬಿ ಹಾಗೂ ಈಗಿನ ಮುಡಾ ತನ್ನ ಆಸ್ತಿ ದಾಖಲೆಗಳನ್ನು ಸಂರಕ್ಷಿಸುವ ವ್ಯವಸ್ಥೆ ಮಾಡಿಕೊಂಡಿಲ್ಲ. 6 ತಿಂಗಳೊಳಗೆ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ಆಯುಕ್ತರು ನಿರ್ದೇಶನ ನೀಡಬೇಕು. ಈ ದಾಖಲೆಗಳನ್ನು ನಗರಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕು ಎಂದು ತುಳಸೀಧರನ್ ಅವರು ತಮ್ಮ ಪತ್ರದಲ್ಲಿ ಮನವಿ ಮಾಡಿದ್ದಾರೆ.

> ಮೈಸೂರು ವಿಜಯನಗರ ಬಡಾವಣೆಯಲ್ಲಿ ಅತಿಕ್ರಮ, ನಕಲಿ ದಾಖಲೆ ಸೃಷ್ಟಿಸಿ ಕಬಳಿಸಿದವರಿಂದ ತನ್ನ ಆಸ್ತಿಯನ್ನು ವಶಪಡಿಸಿಕೊಳ್ಳುವ ವಿಷಯದಲ್ಲಿ ಮುಡಾ ಅಧಿಕಾರಿ ವರ್ಗದ ಬೇಜವಾಬ್ದಾರಿಯಿಂದಾಗಿ ಈಗ ಇಲ್ಲಿನ ಹಲವು ಆಸ್ತಿಗಳು ಕಂಡ ಕಂಡವರ ಪಾಲಾಗಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಜನಾಂದೋಲನ ಸಮಾವೇಶದಲ್ಲಿ ನಾವು ಅಧಿಕಾರ ದುರುಪಯೋಗ ಪಡಿಸಿಕೊಂಡಿಲ್ಲ, ಭ್ರಷ್ಟಾಚಾರ ಮಾಡಿಲ್ಲ, ಹಗರಣದಲ್ಲಿ ತೊಡಗಿಲ್ಲ ಎಂದು ಅಬ್ಬರಿಸಿದರೆ ಹೊರತು, ಮುಡಾದಲ್ಲಿ ನಡೆದಿರುವ ಹಗರಣಗಳ ಬಗ್ಗೆ ಕ್ರಮಕೈಗೊಂಡು, ಮುಡಾ ಆಸ್ತಿ ಉಳಿಸುತ್ತೇನೆ ಎಂದು ಒಂದೇ ಒಂದು ಮಾತು ಹೇಳಲಿಲ್ಲ. ಆ ದೇವರೆ ಮುಡಾ ಆಸ್ತಿ ಕಾಪಾಡಬೇಕಷ್ಟೆ!

ಮುಡಾ ಹಗರಣಗಳಲ್ಲಿ ಇದು ಒಂದು....

1984ರಲ್ಲಿ ಮುಡಾದಿಂದ ರಚನೆಯಾದ ಬಡಾವಣೆಯು ಕಾನೂನು ಹೋರಾಟದಲ್ಲಿ ಸಿಲುಕಿದ್ದು, ನಮಗೆ ತಿಳಿದಿರುವಂತೆ ಮುಡಾಗೆ ಇದು ಸಾಮಾನ್ಯವಾಗಿ ಬಿಟ್ಟಿದೆ. ಆದರೆ ಈ ಪ್ರಕರಣದಲ್ಲಿ ನ್ಯಾಯಾಂಗ ವ್ಯವಸ್ಥೆ ಮೂಲಕ ಕಾನೂನು ಬದ್ಧವಾಗಿ ಖಾಸಗಿ ವ್ಯಕ್ತಿಗಳ ಕೈಗೆ ಪ್ರಾಧಿಕಾರದ ಆಸ್ತಿ ಸರಾಗವಾಗಿ ಹೋಗುವಂತೆ ಮಾಡಲು ಹಾಗೂ ತನ್ನ ವಿರುದ್ಧ ಪ್ರಕರಣ ದಾಖಲಿಸಿದವರಿಗೆ ಸಹಾಯ ಮಾಡುವ ಸಲುವಾಗಿ ಮುಡಾ ಅಧಿಕಾರಿಗಳು ಆಕ್ಷೇಪಣೆಗಳನ್ನು ಸಲ್ಲಿಸಲಿಲ್ಲ.

ಮುಡಾ ಸದಸ್ಯರಾಗಿರುವ ಜನಪ್ರತಿನಿಧಿಗಳು, ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಇತರರು ಮೌನ ವಹಿಸಿರುವುದು ವಿಪರ್ಯಾಸ. ಆದರೆ ಎನ್‌ಜಿಒ ಸಂಸ್ಥೆ ಬಹಿರಂಗಪಡಿಸಿದೆ. ಮುಡಾ ಹಲವು ಹಗರಣಗಳಲ್ಲಿ ಮುಳುಗಿದೆ. ಇದು ಹಗರಣಗಳ ಹೂರಣ ಎಂದು ದೂರುದಾರರಾದ ಪಬ್ಲಿಕ್ ಕಸ್ ಸಂಸ್ಥೆ ಹೇಳಿದೆ

–ಸಂ.

ಬರೀ ಸುಳ್ಳುಗಳನ್ನು ನಿಜವೆಂದು ಬಿಂಬಿಸಲು ಹೊರಟಿರುವ ಬಿಜೆಪಿ–ಜೆಡಿಎಸ್ ಪಾದಯಾತ್ರೆಗೆ ನೈತಿಕತೆ ಇಲ್ಲ

ಮೈಸೂರು, ಆ.9(ಜಿಎ)–ವಾಲ್ಮೀಕಿ, ಮುಡಾ ಹಗರಣ ಕುರಿತಂತೆ ಬಿಜೆಪಿ–ಜೆಡಿಎಸ್‌ನವರು ನಗರಕ್ಕೆ ಪಾದಯಾತ್ರೆ ಮೂಲಕ ಬಂದಿದ್ದು, ವಾಸ್ತವವಾಗಿ ಇವರೇ ಹಲವಾರು ಹಗರಣಗಳ ರೂವಾರಿಯಾಗಿದ್ದು, ಇವರಿಗೆ ಈ ಪಾದಯಾತ್ರೆ ಕೈಗೊಳ್ಳಲು ಯಾವ ನೈತಿಕತೆ ಇದೆ ಎಂದು ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪಾ ಅಮರ್‌ನಾಥ್ ಪ್ರಶ್ನಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಡೀ ದೇಶದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಶೋಷಿತ ವರ್ಗದ ಧ್ವನಿಯಾಗಿದ್ದಾರೆ. ಗ್ಯಾರಂಟಿ ಯೋಜನೆ ಜಾರಿಗೊಳಿಸಿ, ಚುನಾವಣಾ ಪ್ರಣಾಳಿಕೆ ವೇಳೆ ನೀಡಿದ್ದ ಬಹುತೇಕ ಭರವಸೆ ಈಡೇರಿಸಿದ್ದಾರೆ. ಹೀಗಾಗಿ ಇದು ಬಿಜೆಪಿ–ಜೆಡಿಎಸ್‌ನವರ ನಿದ್ದೆಗೆಡಿಸಿದೆ. ಈ ಕಾರಣದಿಂದಾಗಿ ಹತಾಶರಾಗಿ ಅವರ ವಿರುದ್ಧ ಒಂದು ಸುಳ್ಳನ್ನೇ ನೂರು ಬಾರಿ ಹೇಳಿದರೆ ಸತ್ಯ ಆಗುತ್ತದೆ ಎಂಬ ನಂಬಿಕೆಯಿಂದ ಮುಡಾ ಹಗರಣದಲ್ಲಿ ಅವರ ಪಾತ್ರ ಇಲ್ಲದಿದ್ದರೂ ಪಾದಯಾತ್ರೆ ಕೈಗೊಂಡಿದ್ದಾರೆ ಎಂದರು.



ಡಾ.ಪುಷ್ಪ

ಬಿಜೆಪಿಯವರು ಕೋವಿಡ್ ವೇಳೆ ಶವಗಳ ಮೇಲೆ ರಾಜಕಾರಣ ಮಾಡಿ ಹಣ ಲೂಟಿ ಮಾಡಿದವರಾಗಿದ್ದಾರೆ. ಬಿಎಸ್‌ವೈ, ಬಸವರಾಜ ಬೊಮ್ಮಾಯಿ ಅವರ ಸರ್ಕಾರದ ವೇಳೆ ಎಪಿಎಂಸಿ ಹಗರಣ, ದೇವರಾಜ ಅರಸ್ ಟ್ರಕ್ ಟರ್ಮಿನಲ್ ಹಗರಣ, ಗಂಗಾ ಕಲ್ಯಾಣ ಹಗರಣ, ಕೋವಿಡ್ ಹೆಸರಿನಲ್ಲಿ ಹಣ ಲೂಟಿ, ಪಿಎಸ್‌ಐ ನೇಮಕಾತಿ ಹಗರಣ, ಬಿಟ್ ಕಾಯಿನ್ ಹಗರಣ ಮೊದಲಾದವು ನಡೆದವು. ಜೊತೆಗೆ ಚೆಕ್ ಮೂಲಕ ಲಂಚ ಸ್ವೀಕರಿಸಿದ ಕೀರ್ತಿ ಹೊಂದಿರುವ ವಿಜಯೇಂದ್ರ ಅವರೂ ಈ ಪಾದಯಾತ್ರೆಯಲ್ಲಿ ಬಂದಿದ್ದಾರೆ. ವಾಸ್ತವವಾಗಿ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಅನ್ಯಾಯ ಮಾಡಿದ ಬಗ್ಗೆ ಇವರು ದೆಹಲಿಗೆ ಪಾದಯಾತ್ರೆ ಕೈಗೊಳ್ಳಬೇಕಾಗಿತ್ತೆಂದು ಲೇವಡಿ ಮಾಡಿದರು.

ಪ್ರೀತಂಗೌಡ ಪೆನ್‌ಡ್ರೈವ್ ಮೂಲಕ ತಮ್ಮ ಕುಟುಂಬದ ಮಾನ ಬೀದಿಗೆ ತಂದಿದ್ದಾರೆ. ಹೀಗಾಗಿ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವುದಿಲ್ಲ ಎಂದಿದ್ದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಈಗ ಅದನ್ನು ಮರೆತು ಪಾದಯಾತ್ರೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಆ ಪೆನ್‌ಡ್ರೈವ್ ಹಗರಣ ಮೂಲಕ ಸುಮಾರು 400 ಮಹಿಳೆಯರ ಮಾನ ಇವರ ಕುಟುಂಬದವರಿಂದ ಬೀದಿಗೆ ಬಂದಿರುವುದರ ಅರಿವು ಇವರಿಗೆ ಇಲ್ಲವೇ ಎಂದು ಪ್ರಶ್ನಿಸಿದರು. ಸುದ್ದಿಗೋಷ್ಠಿ ಯಲ್ಲಿ ಲತಾ ಚಿಕ್ಕಸಿದ್ದಶೆಟ್ಟಿ, ಪುಷ್ಪವಲ್ಲಿ, ಸುಶೀಲಾ ನಂಜಪ್ಪ, ಪುಷ್ಪಲತಾ ಚಿಕ್ಕಣ್ಣ ಮತ್ತಿತರರು ಉಪಸ್ಥಿತರಿದ್ದರು.

ಟಿ.ಜೆ.ಅಬ್ರಹಾಂ ಸುಳ್ಳು ದೂರಿಗೆ ಶೋಕಾಸ್ ನೋಟಿಸ್ ನೀಡಿರುವುದು ಸರಿಯಲ್ಲ

ಡಾ.ಬಿ.ಆರ್.ಅಂಬೇಡ್ಕರ್ ದಲಿತ ಸಂಘಟನೆಗಳ ಒಕ್ಕೂಟದ ಆಕ್ಷೇಪ

ಮೈಸೂರು, ಆ.9(ಜಿಎ)–ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಾಂ ನೀಡಿರುವ ದೂರಿನಲ್ಲಿ ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ಮಾಡಿರುವ ಆರೋಪ ಸುಳ್ಳಾಗಿದ್ದರೂ, ರಾಜ್ಯಪಾಲರು ಸಿಎಂಗೆ ಶೋಕಾಸ್ ನೋಟಿಸ್ ನೀಡಿರುವುದು ಸರಿಯಲ್ಲ ಎಂದು ಡಾ.ಬಿ.ಆರ್. ಅಂಬೇಡ್ಕರ್ ದಲಿತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಶ್ರೀಧರ ಕಲಿವೀರ ಬೇಸರ ವ್ಯಕ್ತಪಡಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಪತ್ನಿಗೆ ಬಂದಿರುವ ಜಮೀನನ್ನು ಪರಿಶಿಷ್ಟ ಜಾತಿಗೆ ಸೇರಿದವರು ಖರೀದಿ ಮಾಡಿದ್ದರು. ಆದ್ದರಿಂದ ಅದು ಪಿಟಿಸಿಎಲ್ ಕಾಯ್ದೆ ವ್ಯಾಪ್ತಿಗೆ ಬರುವುದಿಲ್ಲ. ಜೊತೆಗೆ ಮುಡಾ ಸಹಾ ಕಾನೂನು ಬಾಹಿರವಾಗಿ ಅದನ್ನು ಸ್ವಾಧೀನಪಡಿಸಿಕೊಂಡು ಪರಿಹಾರವಾಗಿ ನಿವೇಶನ ನೀಡಿರುವಾಗ ವಿವಾದ ಎಲ್ಲಿದೆ ಎಂದು ಪ್ರಶ್ನಿಸಿದರು.

ಪೋಕ್ಸೋ ಕಾಯ್ದೆ ಅಡಿಯಲ್ಲಿ ಚಾರ್ಜ್ ಶೀಟ್ ಸಲ್ಲಿಕೆ ಆಗಿರುವ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರಿಗೆ ಸಿದ್ದರಾಮಯ್ಯ ಅವರ ವಿರುದ್ಧ ಮಾತನಾಡುವ ನೈತಿಕ ಹಕ್ಕಿಲ್ಲ. ಹಾಗೇ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಅವರಿಗೂ ಕೇತಗಾನಹಳ್ಳಿಯಲ್ಲಿ ಕಾನೂನು ಬಾಹಿರವಾಗಿ ಭೂಮಿ ಮಂಜೂರಾಗಿದೆ. ಹೀಗಿದ್ದರೂ ಇವರು ಹೇಗೆ ತಾನೇ ಸಿದ್ದರಾಮಯ್ಯ ವಿರುದ್ಧ ಮಾತನಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು. ಪರಿಶಿಷ್ಟರ ಒಳ ಮೀಸಲಾತಿ ಜಾರಿಗೊಳಿಸುವ ಅಧಿಕಾರ ರಾಜ್ಯ ಸರ್ಕಾರಗಳಿಗಿದೆ ಎಂದು ಸುಪ್ರೀಂಕೋರ್ಟ್ ನೀಡಿರುವ ತೀರ್ಪು ಸ್ವಾಗತಾರ್ಹ. ಆದರೆ ಅದರಲ್ಲಿನ ಕೆನೆಪದರು ಎಂಬ ಮಿತಿ ಕೈಬಿಟ್ಟು ರಾಜ್ಯ ಸರ್ಕಾರ ಜಾರಿಗೊಳಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಎಂ. ಗೋವಿಂದರಾಜು, ಮಂಜುನಾಥ ಅಣ್ಣಯ್ಯ, ಎ.ಗೋಪಾಲ್, ನಾಗೇಶ್, ಕಾಂತರಾಜ್ ಹಾಗೂ ತಿಮ್ಮಯ್ಯ ಉಪಸ್ಥಿತರಿದ್ದರು.

ಸಮವಸ್ತ್ರ, ನೋಟ್ ಬುಕ್ ವಿತರಣೆ



ಮೈಸೂರಿನ ಹರೇ ಮುರಾರಿ ಟ್ರಸ್ಟ್ ವತಿಯಿಂದ ಮೆಲ್ಲಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ಶ್ವೇತ ಸಮವಸ್ತ್ರ ಮತ್ತು ನೋಟ್ ಬುಕ್ ವಿತರಿಸಲಾಯಿತು. ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಟಿ. ಸತೀಶ್ ಜವರೇಗೌಡ, ಮುಖ್ಯ ಶಿಕ್ಷಕಿ ಪಿ.ಎನ್. ವೀಣಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಆ.10, ಯುವ ವಿಶೇಷಚೇತನರಿಗಾಗಿ ಉದ್ಯೋಗ ಮೇಳ

ಮೈಸೂರು, ಆ. 9–ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ 109ನೇ ಜಯಂತಿ ಮಹೋತ್ಸವದ ಅಂಗವಾಗಿ ಸಮರ್ಥನಂ ಅಂಗವಿಕಲರ ಸಂಸ್ಥೆ ಮತ್ತು ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಸಂಯುಕ್ತಾಶ್ರಯದಲ್ಲಿ ಯುವ ವಿಶೇಷಚೇತನರಿಗೆ ಉದ್ಯೋಗ ಮೇಳವನ್ನು ಆ. 10ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 2 ಗಂಟೆವರೆಗೆ ಮೈಸೂರಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್, ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯದಲ್ಲಿ ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್‌ನ ಪ್ರಾಂಶುಪಾಲ ಬಿ.ಇಳಂಗೋವನ್ ಮತ್ತು ಸಮರ್ಥನಂ ಸಂಸ್ಥೆಯ ಸಂಸ್ಥಾಪಕ ಡಾ. ಜಿ.ಕೆ. ಮಹಾಂತೇಶ್ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಉದ್ಯೋಗ ಮೇಳಕ್ಕೆ 250 ರಿಂದ 350 ವಿಶೇಷಚೇತನ ಉದ್ಯೋಗಾಕಾಂಕ್ಷಿಗಳು ಬರುವ ನಿರೀಕ್ಷೆಯಿದ್ದು, 10 ರಿಂದ 15ಕ್ಕೂ ಹೆಚ್ಚು ಕಂಪನಿಗಳು ಸಂದರ್ಶನ ನಡೆಸಲಿವೆ. 18 ವರ್ಷದಿಂದ 35 ವರ್ಷದ ಒಳಗಿನ ನಿರುದ್ಯೋಗಿ ವಿಶೇಷಚೇತನ ಯುವಕ–ಯುವತಿಯರು ಸದರಿ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದಾಗಿದೆ. ಎಸ್.ಎಸ್.ಎಲ್.ಸಿ ಉತ್ತೀರ್ಣ, ಪಿ.ಯು.ಸಿ., ಡಿಪ್ಲೊಮಾ ಮತ್ತು ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವವರು ಭಾಗವಹಿಸಬಹುದು. ಬರುವ ಅಭ್ಯರ್ಥಿಗಳು ಬಯೋಡೇಟಾದ ಕನಿಷ್ಠ 5 ಪ್ರತಿಗಳು, ವಿಶೇಷ ಚೇತನರ ಗುರುತಿನ ಚೀಟಿ, ಕನಿಷ್ಠ 5 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು, ಶೈಕ್ಷಣಿಕ ಅರ್ಹತೆಯ ಪ್ರತಿಗಳು, ಮತ್ತು ಆಧಾರ್ ಕಾರ್ಡ್ ತರಬೇಕು. ಅಲ್ಲದೇ ಸದರಿ ಉದ್ಯೋಗ ಮೇಳದಲ್ಲಿ ವಿಶೇಷಚೇತನರು ಭಾಗವಹಿಸಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ– 8050709919, 9449864693, 9480812121, 6364867818, ಅಥವಾ ಸಮರ್ಥನಂ ಸಹಾಯವಾಣಿ 080 – 68333999.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ತಿದ್ದುಪಡಿ ಅಸಂವಿಧಾನಿಕ

ಬೆಂಗಳೂರು, ಆ. 9– ಸಹಕಾರ ಸಂಘಗಳಲ್ಲಿ ನೌಕರರ ನೇಮಕಾತಿ, ವರ್ಗಾವಣೆ ಹಾಗೂ ಅವರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಸಹಕಾರ ಸಂಘಗಳು ಹೊಂದಿದ್ದ ಅಧಿಕಾರ ಮೊಟಕುಗೊಳಿಸಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಸೆಕ್ಷನ್ 128ಎಗೆ ರಾಜ್ಯ ಸರ್ಕಾರ ತಂದಿದ್ದ ತಿದ್ದುಪಡಿಯನ್ನು ಅಸಂವಿಧಾನಿಕವೆಂದು ಘೋಷಿಸಿ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ತಿದ್ದುಪಡಿ ನಿಯಮ ಪ್ರಶ್ನಿಸಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಉಪ್ಪಿನಂಗಡಿ ಸಹಕಾರ ಕೃಷಿ ಸಂಸ್ಥೆಯ ಹಾಲಿ ಅಧ್ಯಕ್ಷ ಕೆ.ವಿ. ಪ್ರಸಾದ್ ಸೇರಿದಂತೆ 50ಕ್ಕೂ ಹೆಚ್ಚು ಸಹಕಾರ ಸಂಘಗಳು ಸಲ್ಲಿಸಿದ್ದ ತಕರಾರು ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನಂತ ರಮಾನಾಥ ಹೆಗಡೆ ಅವರ ಪೀಠ ಈ ಆದೇಶ ನೀಡಿದೆ. ಇದರಿಂದ ಸಹಕಾರ ಸಂಘಗಳಲ್ಲಿ ನೌಕರರ ನೇಮಕಾತಿ, ವರ್ಗಾವಣೆ ಮತ್ತು ಅವರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಅಧಿಕಾರವನ್ನು ತನ್ನ ಸುಪರ್ದಿಗೆ ಪಡೆಯಲು ಸರ್ಕಾರದ ನಡೆಸಿದ ಪ್ರಯತ್ನಕ್ಕೆ ತೀವ್ರ ಹಿನ್ನಡೆಯಾಗಿದೆ.



ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ–2023ರ ಸೆಕ್ಷನ್ 128ಎಗೆ ರಾಜ್ಯ ಸರ್ಕಾರ ತಂದಿರುವ ತಿದ್ದುಪಡಿಯು ಸಂವಿಧಾನದ ಪರಿಚ್ಛೇದ 19 (1)(ಸಿ) ಅಡಿಯಲ್ಲಿ ಎಲ್ಲ ನಾಗರಿಕರಿಗೆ ಕಲ್ಪಿಸಿರುವ ಸಂಘಗಳು ಮತ್ತು ಒಕ್ಕೂಟಗಳು ಅಥವಾ ಸಹಕಾರ ಸಂಘಗಳನ್ನು ರಚಿಸುವ ಹಕ್ಕನ್ನು ಉಲ್ಲಂಘಿಸಿದೆ. ಆದ್ದರಿಂದ ತಿದ್ದುಪಡಿ ನಿಯಮ ಸಂವಿಧಾನಬಾಹಿರವಾಗಿದೆ ಎಂದು ತೀರ್ಪಿನಲ್ಲಿ ನ್ಯಾಯಪೀಠ ತಿಳಿಸಿದೆ.


ಹೈಕೋರ್ಟ್ ಮಹತ್ವದ ತೀರ್ಪು

ವಿಚಾರಣೆ ವೇಳೆ ಅರ್ಜಿದಾರರ ಹಿರಿಯ ವಕೀಲ ಎ.ಕೇಶವ ಭಟ್, ಸಂವಿಧಾನದ ಪರಿಚ್ಛೇದ 19 (1)(ಸಿ) ಪ್ರಕಾರ ಸಹಕಾರ ಸಂಘಗಳನ್ನು ರಚಿಸುವುದು ಹಾಗೂ ನಿರ್ವಹಣೆ ಮಾಡಿಕೊಂಡು ಹೋಗುವುದು ನಾಗರಿಕರ ಮೂಲಭೂತ ಹಕ್ಕು ಆಗಿದೆ. ಅದರಂತೆ ರಾಜ್ಯದಲ್ಲಿ ಸ್ಥಳೀಯರು ಸೇರಿಕೊಂಡು ಸಹಕಾರ ಸಂಘಗಳನ್ನು ರಚಿಸಿಕೊಂಡು ಕಾನೂನು ರೀತಿ ನಿರ್ವಹಣೆ ಮಾಡುತ್ತ ಬಂದಿದ್ದಾರೆ. ನೌಕರರ ನೇಮಕಾತಿ, ವರ್ಗಾವಣೆ, ಶಿಸ್ತು ಕ್ರಮ ಮತ್ತಿತರ ಆಡಳಿತಾತ್ಮಕ ವಿಚಾರಗಳನ್ನು ಆಯಾ ಸಹಕಾರ ಸಂಘಗಳ ಆಡಳಿತ ಮಂಡಳಿಗಳು ನೋಡಿಕೊಳ್ಳುತ್ತಿದ್ದವು. ಆದರೆ, ರಾಜ್ಯ ಸರ್ಕಾರ 2023ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಸೆಕ್ಷನ್ 128ಎಗೆ ತಿದ್ದುಪಡಿ ತಂದು, ಆ ಎಲ್ಲ ಅಧಿಕಾರಿಗಳನ್ನು ಸಹಕಾರ ಸಂಘಗಳಿಂದ ಕಿತ್ತುಕೊಂಡಿರುವುದು ಸಂವಿಧಾನದ ಮೂಲಭೂತ ಹಕ್ಕಿನ ಉಲ್ಲಂಘನೆ ಎಂದು ಬಲವಾಗಿ ವಾದಿಸಿದ್ದರು. ಕಾನೂನು–ಸುವ್ಯವಸ್ಥೆ, ದೇಶದ ಸಮಗ್ರತೆ ಮತ್ತು ಸಾರ್ವಭೌಮತ್ವಕ್ಕೆ ಧಕ್ಕೆ ಬರುವ ಅಪಾಯವಿದ್ದಾಗ, ಸಾರ್ವಜನಿಕ ಸುವ್ಯವಸ್ಥೆ ನಿಯಂತ್ರಣ ಕಳೆದುಕೊಂಡಾಗ ಮೂಲಭೂತ ಹಕ್ಕುಗಳ ಮೇಲೆ ಸೀಮಿತ ನಿರ್ಬಂಧಗಳನ್ನು ಹೇರಬಹುದು. ಆದರೆ, ಈ ಪ್ರಕರಣದಲ್ಲಿ ಅಂತಹ ಸನ್ನಿವೇಶವೇ ಇಲ್ಲ. ಸಹಕಾರ ಸಂಘಗಳ ಅಧಿಕಾರ ಮೊಟಕುಗೊಳಿಸುವ ದುರದ್ದೇಶದಿಂದ ಸರ್ಕಾರ ಈ ತಿದ್ದುಪಡಿ ನಿಯಮ ರೂಪಿಸಿದೆ. ಇದರಿಂದ ಸಹಕಾರ ಸಂಘಗಳ ಸ್ವಾಯತ್ತತೆಗೆ ಧಕ್ಕೆಯಾಗುತ್ತದೆ. ಆದ್ದರಿಂದ ತಿದ್ದುಪಡಿ ನಿಯಮವನ್ನು ಸಂವಿಧಾನ ಬಾಹಿರವೆಂದು ಘೋಷಿಸಬೇಕು ಎಂದು ಕೋರಿದ್ದರು. ಈ ವಾದವನ್ನು ಹೈಕೋರ್ಟ್ ಪುರಸ್ಕರಿಸಿದೆ.

ರೈತರು, ಸ್ಥಳೀಯರ ಸಹಕಾರದಿಂದ ಕೆಆರ್‌ಎಸ್ ಬೃಂದಾವನದಲ್ಲಿ

ಮನೋರಂಜನಾ ಉದ್ಯಾನವನ ನಿರ್ಮಾಣ

2 ಸಾವಿರ ಕೋಟಿ ರೂ. ಅಂದಾಜು ವೆಚ್ಚದ ಈ ಯೋಜನೆಗೆ ಶೀಘ್ರ ಟೆಂಡರ್: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚೆಲುವರಾಯಸ್ವಾಮಿ, ಶಾಸಕರಾದ ರಮೇಶ್‌ಬಾಬು ಬಂಡಿಸಿದ್ದೇಗೌಡ, ಗಣಿಗ ರವಿ ಹಾಗೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳ ಜೊತೆ ಬೃಂದಾವನ, ಕೆಆರ್‌ಎಸ್ ಅಣೆಕಟ್ಟೆಯನ್ನು ಪರಿಶೀಲಿಸಿದರು.

ಮೈಸೂರು, ಆ. 9 (ಆರ್‌ಕೆ)– ಬಹು ನಿರೀಕ್ಷಿತ ಶ್ರೀರಂಗಪಟ್ಟಣ ತಾಲೂಕು, ಕೃಷ್ಣರಾಜಸಾಗರದ ಬೃಂದಾವನದಲ್ಲಿ ಅತ್ಯಾಕರ್ಷಕ ಮನೋರಂಜನಾ ಉದ್ಯಾನವನ (ಅಮ್ಯೂಸ್‌ಮೆಂಟ್ ಪಾರ್ಕ್) ನಿರ್ಮಾಣ ಮಾಡುವುದಾಗಿ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಕೃಷ್ಣರಾಜಸಾಗರದ (ಕೆಆರ್‌ಎಸ್) ರಾಯಲ್ ಆರ್ಕಿಡ್ ಹೋಟೆಲ್‌ನಲ್ಲಿ ಇಂದು ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ಹಾಲಿ ಇರುವ ಬೃಂದಾವನದ 200 ಎಕರೆ ಪ್ರದೇಶದಲ್ಲಿ ಸುಮಾರು 2 ಸಾವಿರ ಕೋಟಿ ರೂ. ಅಂದಾಜು ವೆಚ್ಚದಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್ ಅಭಿವೃದ್ಧಿಪಡಿಸುವ ಸಂಬಂಧ ಈಗಾಗಲೇ ಕಾವೇರಿ ನೀರಾವರಿ ನಿಗಮ, ತೋಟಗಾರಿಕೆ ಇಲಾಖೆ, ಪ್ರವಾಸೋದ್ಯಮ ಇಲಾಖೆ ಹಾಗೂ ಮಂಡ್ಯ ಜಿಲ್ಲಾಡಳಿತದ ಅಧಿಕಾರಿಗಳೊಂದಿಗೆ ಹಲವು ಸಭೆಗಳನ್ನು ನಡೆಸಿ ಚರ್ಚಿಸಲಾಗಿದ್ದು, ಈ ಯೋಜನೆ ಅನುಷ್ಠಾನಗೊಳಿಸಲು ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗಿದೆ ಎಂದರು.

ಈ ಹಿಂದೆಯೂ ಡಿಸ್ನಿಲ್ಯಾಂಡ್ ಮಾದರಿಯಲ್ಲಿ ಕೆಆರ್‌ಎಸ್ ಉದ್ಯಾನವನ ಅಭಿವೃದ್ಧಿಪಡಿಸಲು ಯೋಜನೆ ತಯಾರಿಸಲಾಗಿತ್ತಾದರೂ ಅನುಷ್ಠಾನಗೊಳಿಸಲು ನಾನಾ ಕಾರಣಗಳಿಂದಾಗಿ ಸಾಧ್ಯವಾಗಿರಲಿಲ್ಲ. ಆದರೆ, ಇದೀಗ ಅದನ್ನೇ ತುಸು ಮಾರ್ಪಾಡು ಮಾಡಿ ಉದ್ದೇಶಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಯನ್ನು ಹೊರತುಪಡಿಸಿ ಉಳಿದಂತೆ ಮನೋರಂಜನಾ ಉದ್ಯಾನವನ ಅಭಿವೃದ್ಧಿಪಡಿಸುವ ಸಂಬಂಧ ಸ್ಥಳೀಯರು ಹಾಗೂ ರೈತ ಮುಖಂಡರೊಂದಿಗೆ ಚರ್ಚಿಸಿ ಕಾಮಗಾರಿ ಆರಂಭಿಸಲಾಗುವುದು. ಇದರಿಂದಾಗಿ ಉದ್ಯೋಗ ಸೃಷ್ಟಿ, ವ್ಯಾಪಾರ, ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಅಭಿವೃದ್ಧಿ ಆಗುವ ಜೊತೆಗೆ ದೇಶ ವಿದೇಶಗಳಿಂದ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸಬಹುದಾಗಿದೆ ಎಂದು ಉಪ ಮುಖ್ಯಮಂತ್ರಿಗಳು ತಿಳಿಸಿದರು.

ಯಾವುದೇ ಯೋಜನೆಯನ್ನು ರೂಪಿಸುವಾಗ ಹಲವು ಅಡೆತಡೆಗಳು ಬರಬಹುದು. ಆದರೆ, ರೈತರು ಹಾಗೂ ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಉದ್ದೇಶಿತ ಯೋಜನೆಯಿಂದ ಆಗುವ ಅನುಕೂಲಗಳ ಬಗ್ಗೆ ವಿವರಿಸಿ ಮನದಟ್ಟು ಮಾಡುವ ಮೂಲಕ ಅಮ್ಯೂಸ್‌ಮೆಂಟ್ ಪಾರ್ಕ್ ಅನ್ನು ಅಭಿವೃದ್ಧಿಪಡಿಸುತ್ತೇವೆ. ಈ ಕುರಿತಂತೆ ಪ್ರಕ್ರಿಯೆಗಳು ಪೂರ್ಣಗೊಂಡಿದ್ದು, ಶೀಘ್ರವೇ ಟೆಂಡರ್ ಕರೆಯಲಾಗುವುದು. ಯಾರೂ ಇದಕ್ಕೆ ವಿರೋಧ ವ್ಯಕ್ತಪಡಿಸುವುದಿಲ್ಲ ಎಂಬ ವಿಶ್ವಾಸ ನಮಗಿದೆ ಎಂದು ಡಿ.ಕೆ. ಶಿವಕುಮಾರ್ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಈ ಯೋಜನೆಗಾಗಿ ಸುತ್ತಮುತ್ತಲಿನ 2 ಅಥವಾ 3 ಗ್ರಾಮ ಪಂಚಾಯಿತಿಗಳು ಸೇರಿಸಿಕೊಂಡು ಒಂದು ಯೋಜನಾ ಪ್ರದೇಶ (ಪ್ಲಾನಿಂಗ್ ಏರಿಯಾ)ನಿರ್ಧರಿಸಲಾಗುವುದು. ಜೊತೆಗೆ ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ಅಗಲೀಕರಣ, ಅಭಿವೃದ್ಧಿ, ಒಳಚರಂಡಿಗಳ ಅಭಿವೃದ್ಧಿಪಡಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಅದಕ್ಕೆ ಬೇಕಾಗಿರುವ ನೀರು, ವಿದ್ಯುತ್ ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ ಎಂದು ಅವರು ಇದೇ ಸಂದರ್ಭ ನುಡಿದರು.

ಮೈಶುಗರ್ ಕಾರ್ಖಾನೆ ಆಧುನೀಕರಣ: ಹಲವು ವರ್ಷಗಳಿಂದ ನಾನಾ ಸಮಸ್ಯೆಗಳಿಗೆ ಸಿಲುಕಿರುವ ಮಂಡ್ಯದ ಮೈಶುಗರ್ ಕಾರ್ಖಾನೆಯನ್ನು ಸದೃಢಗೊಳಿಸಿ ಕಬ್ಬು ಅರೆಯುವ ಸಾಮರ್ಥ್ಯವನ್ನು ಹೆಚ್ಚಿಸುವ ಸಂಬಂಧ ಈಗಾಗಲೇ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರಸ್ತುತ ಇರುವ 5 ಸಾವಿರ ಟಿಸಿಡಿ ಸಾಮರ್ಥ್ಯವನ್ನು 10 ಸಾವಿರಕ್ಕೆ ಹೆಚ್ಚಿಸಬಹುದೇ ಅಥವಾ ಅಷ್ಟೇ ಸಾಮರ್ಥ್ಯಕ್ಕೆ ಕಾರ್ಖಾನೆಯನ್ನು ಆಧುನೀಕರಣಗೊಳಿಸಿ ಸಮರ್ಥವಾಗಿ ಕಾರ್ಯನಿರ್ವಹಿಸಲು ಯೋಜನೆ ತಯಾರಿಸಬೇಕೇ ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಈ ಕುರಿತಂತೆ ಅಧ್ಯಯನ ನಡೆಸಿ ರೈತರು ಬೆಳೆದ ಕಬ್ಬನ್ನು ಅರೆಯಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಉಪ ಮುಖ್ಯಮಂತ್ರಿಗಳು ತಿಳಿಸಿದರು.

ಕಬ್ಬು ಅರೆಯುವ ಸಾಮರ್ಥ್ಯವನ್ನು ಹೆಚ್ಚಿಸಬೇಕೆಂದರೆ, ಪ್ಲಾಂಟ್ ವಿಸ್ತರಿಸಬೇಕು. ಆ ಪ್ರಮಾಣಕ್ಕೆ ಅಗತ್ಯವಿರುವ ಕಬ್ಬು ಪೂರೈಕೆಯಾಗಬೇಕು. ಇತ್ತೀಚಿನ ದಿನಗಳಲ್ಲಿ ರೈತರು ಕಬ್ಬು ಬೆಳೆಯುವ ಬದಲು ಬೇರೆ ವಾಣಿಜ್ಯ ಬೆಳೆಗಳಿಗೆ ಸ್ಥಳಾಂತರಗೊಳ್ಳುತ್ತಿರುವುದರಿಂದ ಕಾರ್ಖಾನೆಗೆ ಸಮರ್ಪಕವಾಗಿ ಕಬ್ಬು ಪೂರೈಕೆಯಾಗುತ್ತಿಲ್ಲ. ಆದ್ದರಿಂದ ರೈತರಿಗೆ ಕಬ್ಬು ಬೆಳೆಯಲು ಹಾಗೂ ಇಳುವರಿ ಹೆಚ್ಚಿಸಲು ಅಗತ್ಯವಿರುವ ಸೌಲಭ್ಯಗಳನ್ನು ಪೂರೈಸುವ ಮೂಲಕ ಅವರು ಕಬ್ಬಿನಿಂದ ಬೇರೆ ಬೆಳೆಗೆ ಸ್ಥಳಾಂತರವಾಗುವುದನ್ನು ತಪ್ಪಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ರೈತರಿಗೆ ಅನುಕೂಲವಾಗುವಂತೆ ನಿರ್ಧಾರ ಕೈಗೊಳ್ಳಲು ನಮ್ಮ ಸರ್ಕಾರ ಬದ್ಧವಾಗಿದೆ. ಈ ಹಿನ್ನೆಲೆಯಲ್ಲಿ ಮೈಶುಗರ್ ಕಾರ್ಖಾನೆಯನ್ನು ಸದೃಢಗೊಳಿಸಿ ಮತ್ತಷ್ಟು ಕಾರ್ಯನಿರ್ವಹಿಸುವಂತೆ ಮಾಡಲು ಕೃಷಿ ಸಚಿವರೂ ಆದ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿದ್ದೇನೆ. ರೈತ ಮುಖಂಡರು, ಸ್ಥಳೀಯ ಜನ ಪ್ರತಿನಿಧಿಗಳ ಸಲಹೆಗಳನ್ನು ಪಡೆದು ಮೈಶುಗರ್ ಕಾರ್ಖಾನೆಗೆ ಒಂದು ಹೊಸ ರೂಪ ಕೊಡುತ್ತೇವೆ ಎಂದು ಅವರು ಇದೇ ಸಂದರ್ಭ ನುಡಿದರು. ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚೆಲುವರಾಯಸ್ವಾಮಿ, ಗಣಿಗ ರವಿ ಹಾಗೂ ಇತರರು ಉಪಸ್ಥಿತರಿದ್ದರು.

ಕೇಂದ್ರ ಸರ್ಕಾರ ರಾಜ್ಯದ ರೈತರ ಪರ ಇಲ್ಲ

ಮೈಸೂರು, ಆ. 9 (ಆರ್‌ಕೆ)–ಕಾವೇರಿ ನೀರು ಹಂಚಿಕೆ ವಿವಾದ ಸಂಬಂಧ ಕೇಂದ್ರ ಸರ್ಕಾರ, ರಾಜ್ಯದ ಕೇಂದ್ರ ಸಚಿವರು ಹಾಗೂ ಸಂಸದರಿಗೆ ನಮ್ಮ ರಾಜ್ಯದ ರೈತರ ಬಗ್ಗೆ ಕಾಳಜಿ ಇಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರೋಪಿಸಿದ್ದಾರೆ.

ಕಾವೇರಿ ನದಿ ನೀರು ಹಂಚಿಕೆ ವಿವಾದವನ್ನು ಇತ್ಯರ್ಥಗೊಳಿಸುವ ಪ್ರಯತ್ನವನ್ನು ಕೇಂದ್ರ ಸರ್ಕಾರ ಮಾಡಲಿಲ್ಲ. ಕರ್ನಾಟಕದಿಂದ ಆಯ್ಕೆಯಾಗಿರುವ ಬಿಜೆಪಿ, ಜೆಡಿಎಸ್ ಸಂಸದರು ಈ ಬಗ್ಗೆ ಕೇಂದ್ರ ನೀರಾವರಿ ಇಲಾಖೆ, ಕಾವೇರಿ ಟ್ರಿಬ್ಯುನಲ್‌ನಲ್ಲಿ ಚರ್ಚಿಸಿ ಕರ್ನಾಟಕದ ಪರ ಮಾತನಾಡಲಿಲ್ಲ. ಏನೂ ಮಾಡದ ಕೆಲವರು ತಮಿಳುನಾಡು ಸರ್ಕಾರ ಅನುಮತಿ ನೀಡಿದರೆ, ಮೇಕೆದಾಟು ಯೋಜನೆಗೆ ಸಹಕಾರ ನೀಡುತ್ತೇನೆ ಎಂದು ಹೇಳುತ್ತಿದ್ದಾರೆ ಎಂದು ಹೆಸರೇಳದೆ ಕೇಂದ್ರ ಸಚಿವರೂ ಆದ ಮಂಡ್ಯ ಸಂಸದ ಹೆಚ್.ಡಿ. ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿದರು.

ಈ ಬಗೆಯ ಬುಡಬುಡಿಕೆ ಮಾತುಗಳು ನಮಗೆ ಬೇಕಿಲ್ಲ. ಇತ್ತೀಚೆಗೆ ಬಿಳಿ ಪಂಚೆ ಕಟ್ಟಿಕೊಂಡು ಓಡಾಡುತ್ತಿರುವುದನ್ನು ಬಿಟ್ಟರೆ ಬೇರೇನನ್ನು ಅವರು ಮಾಡಲಿಲ್ಲ. ಅವರಿಗೆ ಕರ್ನಾಟಕದ ಬಗ್ಗೆ, ರಾಜ್ಯದ ರೈತರ ಬಗ್ಗೆ ಕಾಳಜಿ ಇಲ್ಲ. ಇಂತಹವರಿಂದ ನಾವು ಏನನ್ನು ನಿರೀಕ್ಷಿಸಲು ಸಾಧ್ಯ? ಎಂದು ಪ್ರಶ್ನಿಸಿದ ಅವರು, ಈ ಸಂಬಂಧ ಕಾನೂನು ಹೋರಾಟ ಮಾಡುತ್ತೇವೆ. ಪ್ರಧಾನ ಮಂತ್ರಿಗಳು, ಕೇಂದ್ರದ ನೀರಾವರಿ ಸಚಿವರನ್ನು ಭೇಟಿ ಮಾಡಿ ಮೇಕೆದಾಟು ಯೋಜನೆಗೆ ಅವಕಾಶ ನೀಡುವಂತೆ ಮನವಿ ಮಾಡುತ್ತೇವೆ. ಸರ್ಕಾರ ಈ ನಿಟ್ಟಿನಲ್ಲಿ ಪ್ರಯತ್ನ ಮಾಡಲಿದೆ ಎಂದ ಅವರು, ಕರ್ನಾಟಕಕ್ಕೆ ಹಲವು ಕೈಗಾರಿಕೆಗಳನ್ನು ತರುತ್ತೇವೆ ಎಂದು ಹೇಳುತ್ತಿರುವ ಅವರು, ಅದನ್ನು ಮಾಡಲಿ. ನಾವು ಕೂಡ ಸಹಕಾರ ನೀಡುತ್ತೇವೆ ಎಂದು ಮತ್ತೆ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಛೇಡಿಸಿದರು.

ತಮಿಳುನಾಡಿಗೆ 177.77 ಟಿಎಂಸಿ ನೀರು ಬಿಡಬೇಕೆಂದು ಸುಪ್ರೀಂಕೋರ್ಟ್ ಆದೇಶ ನೀಡಿದೆ. ಅದರಂತೆ ನಾವು ಈಗಾಗಲೇ ಜಲಾನಯನ ಪ್ರದೇಶಗಳಲ್ಲಿ ಹೆಚ್ಚು ಮಳೆಯಾಗುತ್ತಿರುವುದರಿಂದ ಈವರೆಗೆ 149 ಟಿಎಂಸಿ ನೀರನ್ನು ಬಿಟ್ಟಿದ್ದೇವೆ. ಇದರಿಂದ ಮೆಟ್ಟೂರು ಜಲಾಶಯ ತುಂಬಿ ಹೆಚ್ಚುವರಿ ನೀರು ಸಮುದ್ರಕ್ಕೆ ಹೋಗುತ್ತಿದೆ ಎಂಬ ಮಾಹಿತಿಯನ್ನು ಅಧಿಕಾರಿಗಳು ನೀಡಿದ್ದಾರೆ. ಬಾಕಿ ನೀರನ್ನು ಕೂಡ ಹಂತ ಹಂತವಾಗಿ ಬಿಡಲು ಸಿದ್ಧರಿದ್ದೇವೆ. ಆದರೆ, ಮೇಕೆದಾಟು ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ನಮ್ಮ ಪ್ರಯತ್ನ ನಿರಂತರವಾಗಿ ಸಾಗಲಿದೆ ಎಂದು ಡಿಕೆಶಿ ಇದೇ ಸಂದರ್ಭ ನುಡಿದರು.

ಕಾವೇರಿ ಆರತಿಗೆ ಅಧ್ಯಯನ ಪ್ರವಾಸ: ಗಂಗಾ ಆರತಿಯಂತೆ ಕಾವೇರಿ ಆರತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಅಧಿಕಾರಿಗಳು ಅಧ್ಯಯನ ಪ್ರವಾಸ ಮಾಡಲಿದ್ದಾರೆ. ಈ ಸಂಬಂಧ ಈಗಾಗಲೇ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ರೂಪುರೇಷೆಗಳನ್ನು ನಿರ್ಧರಿಸಿದ್ದಾರೆ. ಅಲ್ಲದೇ, ನಾನೂ ಸಹ ಜಿಲ್ಲಾ ಉಸ್ತುವಾರಿ ಸಚಿವರು, ಈ ಭಾಗದ ಶಾಸಕರು, ಅಧಿಕಾರಿಗಳೊಂದಿಗೆ ಚರ್ಚಿಸಿದ್ದೇನೆ. ಅಧಿಕಾರಿಗಳು ಅಧ್ಯಯನ ನಡೆಸಿ ವರದಿ ನೀಡಿದ ಬಳಿಕ ಕಾರ್ಯಕ್ರಮಕ್ಕೆ ಒಂದು ರೂಪುರೇಷೆ ನೀಡಿ ಮುಂದಿನ ವರ್ಷ ಕಾವೇರಿಗೆ ಬಾಗಿನ ಅರ್ಪಿಸುವ ವೇಳೆ ಅದಕ್ಕೆ ಚಾಲನೆ ನೀಡಲಾಗುವುದು ಎಂದು ಅವರು ತಿಳಿಸಿದರು.

ಪರಿಶೀಲನೆ : ಗುರುವಾರ ರಾತ್ರಿ ಕೆಆರ್‌ಎಸ್‌ನಲ್ಲಿ ವಾಸ್ತವ್ಯ ಹೂಡಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಇಂದು ಬೆಳಗ್ಗೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚೆಲುವರಾಯಸ್ವಾಮಿ, ಶಾಸಕರಾದ ರಮೇಶ್‌ಬಾಬು ಬಂಡಿಸಿದ್ದೇಗೌಡ, ಗಣಿಗ ರವಿ ಹಾಗೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳ ಜೊತೆ ಬೃಂದಾವನ, ಕೆಆರ್‌ಎಸ್ ಅಣೆಕಟ್ಟೆಯನ್ನು ಪರಿಶೀಲಿಸಿದ ಬಳಿಕ ಅಧಿಕಾರಿಗಳ ಸಭೆ ನಡೆಸಿದರು.

ಪ್ರತಿಪಕ್ಷದಂತೆ ಆಡಳಿತ ಪಕ್ಷ ಬೀದಿಗಿಳಿದಿರುವುದು ವಿಪರ್ಯಾಸ

ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ವಾಗ್ದಾಳಿ



ಸುದ್ದಿಗೋಷ್ಠಿಯಲ್ಲಿ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿದರು.

ಮಂಡ್ಯ,ಆ.9(ಮೋಹನ್‌ರಾಜ್)– ಆಡಳಿತ ಪಕ್ಷ ಭ್ರಷ್ಟಾಚಾರ, ಸ್ವಜನಪಕ್ಷಪಾತದಲ್ಲಿ ತೊಡಗಿದ್ದರೆ ಅದನ್ನು ಜನರ ಮುಂದೆ ಇಡಲು ಪ್ರತಿಪಕ್ಷದವರು ಪಾದಯಾತ್ರೆ ನಡೆಸುವುದು ಅವರ ಹಕ್ಕು, ಆದರೆ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷದವರೇ ಬೀದಿಗಿಳಿದು ಪ್ರತಿ ಪಕ್ಷದವರ ರೀತಿ ನಡೆದುಕೊಳ್ಳುತ್ತಿರುವುದು ವಿಪರ್ಯಾಸ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಕಿಡಿಕಾರಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಗತ್ಯ ದಾಖಲೆಗಳನ್ನು ನೀಡಿ ಆಡಳಿತ ಪಕ್ಷದವರು ವಿಧಾನಸಭೆಯಲ್ಲಿ ಚರ್ಚೆ ಮಾಡಿ ಸಮಸ್ಯೆ ಬಗೆಹರಿಸಿಕೊಳ್ಳಬೇಕು. ನಮ್ಮ ಸರ್ಕಾರ ಪಾರದರ್ಶಕತೆಯಿಂದ ಇದೆ ಎನ್ನುವುದನ್ನು ಸಾಬೀತು ಪಡಿಸಿಕೊಳ್ಳಬೇಕು. ಅದು ಬಿಟ್ಟು ಬೀದಿಗೆ ಬಂದು 'ನಾನು ಕಳ್ಳ ಅಲ್ಲ' ಎಂದು ಹೇಳಿದರೆ ಅರ್ಥ ವಿದೆಯೇ? ವಿರೋಧ ಪಕ್ಷದವರಾಗಿ ಕೆಲಸ ಮಾಡುವುದು ಹೇಗೆ ಎಂಬುದನ್ನು ಕಲಿಯಲು ಈ ರೀತಿ ನಡೆದುಕೊಳ್ಳುತ್ತಿರುವಂತೆ ಕಾಣುತ್ತದೆ ಎಂದು ಟೀಕಿಸಿದರು.

ಬಿಜೆಪಿ ಮತ್ತು ಜೆಡಿಎಸ್ ನಡೆಸುತ್ತಿರುವುದು ಹೋರಾಟ. ಆದರೆ, ಕಾಂಗ್ರೆಸ್‌ನವರದ್ದು ಹಾರಾಟ, ಬಿಜೆಪಿಯ ಭ್ರಷ್ಟಾಚಾರವನ್ನು ಬಯಲಿಗೆಳೆಯಲು ಮತ್ತು ಕೇಂದ್ರ ಸರ್ಕಾರದ ಅನುದಾನದ ಬಗ್ಗೆ ತಿಳಿಸಲು ಸಮಾವೇಶವನ್ನು ಮಾಡುತ್ತಿದ್ದೇವೆ ಎಂದು ನಾಟಕ ಆಡುತ್ತಿದ್ದಾರೆ, ಕೇಂದ್ರ ಸರ್ಕಾರದಿಂದ ಅನುದಾನ ಬಂದಿಲ್ಲ ಎಂದರೆ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಾರೆ, ಅವರು ಒಂದು ದಿನವಾದರೂ ಕರ್ನಾಟಕದ ಅನುದಾನ ತಾರತಮ್ಯವಾಗಿದೆ ಎಂದು ಮಾತನಾಡಬೇಕಿತ್ತಲ್ಲವೆ ಎಂದು ಪ್ರಶ್ನಿಸಿದರು.

ರಾಜಕೀಯಕ್ಕೋಸ್ಕರ ಹಾಗೂ ಬೇಳೆ ಬೇಯಿಸಿಕೊಳ್ಳಲು ಕೇಂದ್ರದ ಮೇಲೆ ಗೂಬೆ ಕೂರಿಸಲು ಮಾತನಾಡುತ್ತಿದ್ದಾರೆ, ಈಗಾಗಲೇ ಬೆಂಗಳೂರಿಗೆ ಬಂದಿದ್ದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕಾಂಗ್ರೆಸ್ ಮುಖಕ್ಕೆ ಮಂಗಳಾರತಿ ಎತ್ತಿ ಹೋಗಿದ್ದಾರೆ, ಮನಮೋಹನ್ ಸಿಂಗ್ ಮತ್ತು ನರೇಂದ್ರ ಮೋದಿ ಅವರ ಹತ್ತು ವರ್ಷದ ಅವಧಿಯಲ್ಲಿನ ಅಂಕಿ ಅಂಶದ ರೀತಿ ಎಳೆಎಳೆಯಾಗಿ ತಿಳಿಸಿ ಹೋಗಿದ್ದಾರೆ. ಅಂದು ಎಷ್ಟು ಹಣ ಬಂದಿದೆ ಇಂದು ಎಷ್ಟಿದೆ ಎಂಬುದನ್ನು ಒಟ್ಟಾರೆ ಅವರಿಗಿಂತ ಐದು ಪಟ್ಟು ಜಾಸ್ತಿ ಕೊಟ್ಟಿದೆ. ಮೈಸೂರು ರಸ್ತೆಗೂ 800 ಕೋಟಿಗೂ ಹೆಚ್ಚು ಹಣ ನೀಡಿದೆ, ಯಾವುದರಲ್ಲಿಯೂ ತಾರತಮ್ಯ ಮಾಡದ ಕೇಂದ್ರದ ಬಗ್ಗೆ ಸುಳ್ಳು ಹೇಳುವುದೇ ಇವರ ಕಾಯಕ ಎಂದು ಆರೋಪಿಸಿದರು.

ವಿಧಾನಸಭೆಯಲ್ಲಿ ನಿಲುವಳಿ ಸೂಚಿಸುವುದು ಒಂದು ಬ್ರಹ್ಮಾಸ್ತ್ರ, ವಾಲ್ಮೀಕಿ ಹಗರಣದ ಬಗ್ಗೆ ನಿಲುವಳಿ ಸೂಚನೆ ತಂದೆವು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಉತ್ತರ ಕೊಟ್ಟು ನಿಮ್ಮ ಬಾಯಿ ಮುಚ್ಚಿಸುವಷ್ಟು ನಮ್ಮ ಹತ್ತಿರ ದಾಖಲೆಗಳಿವೆ ಎಂದಿದ್ದಾರೆ. ನಾನು 3 ಗಂಟೆ 15 ನಿಮಿಷ ಮಾತಾಡಿ 50 ಪುಟಗಳ ಸಮಗ್ರ ದಾಖಲೆ ಕೊಟ್ಟಿದ್ದೇನೆ, 178 ಕೋಟಿ ಹಣ ಡೆಪಾಸಿಟ್ ಮಾಡುವುದು ಲೋನ್ ತೆಗೆದುಕೊಂಡು ವಂಚಿಸಲಾಗಿದೆ, ಶಾಸಕ ತಪ್ಪು ಮಾಡಿಲ್ಲ ಎಂದ ಮೇಲೆ ಜೈಲಿಗೆ ಏಕೆ ಹೋದರು, ಆದರೆ ಸರ್ಕಾರ ಇಲ್ಲಿ ಚರ್ಚೆಗೆ ತಯಾರಿಲ್ಲ ಎಂದು ಕಿಡಿಕಾರಿದರು.

ಬಿಜೆಪಿಯ ಎಲ್ಲಾ ಹಗರಣವನ್ನು ಬಿಚ್ಚಿಡುತ್ತೀವಿ ಎಂದು ಕಾಂಗ್ರೆಸ್ಸಿಗರು ಹೇಳಿದ್ದಾರೆ. ಅದನ್ನು ವಿಧಾನಸಭೆ ಅಥವಾ ವಿಧಾನ ಪರಿಷತ್‌ನಲ್ಲಿ ಮಾತನಾಡಿ ಒಂದು ದಾಖಲೆ ಮಾಡಬೇಕಿತ್ತು. ಇಂತಹ ಹಗರಣ ನಡೆದಿದ್ದಕ್ಕೆ ಉತ್ತರ ಕೊಟ್ಟ ಸರ್ಕಾರ ಎಂಬುದು ಮುಂದಿನ ಜನಪ್ರತಿನಿಧಿಗಳಿಗೂ ತಿಳಿಯುತ್ತಿತ್ತು. ನೀವು ಅವಕಾಶವನ್ನೇ ನೀಡದೇ ಪಲಾಯನ ಮಾಡುವುದು ಸರಿಯೇ, ಡಿ.ಕೆ.ಶಿವಕುಮಾರ್ ಅವರು ಪ್ರತಿ ಸಭೆಯಲ್ಲಿಯೂ ಬಿಚ್ಚುವ ಮಾತನ್ನೇ ಹೇಳುತ್ತಿದ್ದವರು ವಿಧಾನ ಸಭೆಯಲ್ಲಿ ಏಕೆ ಬಿಚ್ಚಲಿಲ್ಲ, ನಿಮಗೆ ಮೈತ್ರಿ ಪಕ್ಷದವರ ಮೇಲೆ ಭಯವೇ ಎಂದು ಕುಟುಕಿದರು. ಸಿದ್ದರಾಮಯ್ಯ ಅವರು 40 ವರ್ಷದಲ್ಲಿ ಸ್ವಚ್ಛವಾಗಿದ್ದಾರಂತೆ ಅದು ಅವರ ಬಟ್ಟೆಯಂತೆ ಎಂಬುದನ್ನು ಹೇಳಿದ್ದಾರೆ, ಹೌದು ನಿಜ, ಬಟ್ಟೆಗಳನ್ನು ಲಾಂಡ್ರಿಗೆ ಕೊಟ್ಟರೆ ಸರ್ಫ್, ನಿರ್ಮಾ ಹಾಕಿ ತೊಳೆದು ಶುಚಿಯಾಗಿಯೇ ಕೊಡುತ್ತಾರೆ. ಬಿ.ಎಸ್.ಯಡಿಯೂರಪ್ಪ ಅವರು ಡಿನೋಟಿಫಿಕೇಷನ್ ಮಾಡಿದ್ದಾರೆ ಎಂಬುದನ್ನು ಹೇಳಿ ರೀಡೋ ಆಯೋಗ ಮಾಡುತ್ತೀರಾ, ಆಗಲೂ ಇದ್ದದ್ದೇ ಈಗಲೂ ಇದೆ, ನಿಮ್ಮ ಮೇಲೆ ಯಾವಾಗ ಆರೋಪ ಬರುತ್ತದೋ ಆವಾಗ ನೀವು ರೆಡಿಮೇಡ್ ಆಯೋಗ ರೆಡಿಮಾಡಿಕೊಂಡಿರುತ್ತೀರಿ. ನೀವು ಅಧಿವೇಶನದ ಒಂದು ದಿನ ಮುಂಚಿತವಾಗಿ ಆಯೋಗ ಮಾಡುವುದು ಸರಿಯೇ, ಚರ್ಚೆಗೆ ಅವಕಾಶ ನೀಡಬಾರದು ಎನ್ನುವ ಉದ್ದೇಶದಿಂದಲೇ ಮಾಡಿದ್ದೀರಾ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಡಾ ಆರೋಪ ಬಂದ ಮೇಲೆ ಸಿದ್ದರಾಮಯ್ಯ ಅವರು ಭಯಭೀತರಾಗಿ ಎರಡು ದಿನ ಮನೆಯಲ್ಲಿಯೇ ಕುಳಿತು ಬಿಟ್ಟಿದ್ದರು, ಮುಖ್ಯಮಂತ್ರಿಗೆ ಸರ್ಕಾರದ ಮೇಲೆ ಹಿಡಿತ ತಪ್ಪಿದೆ, ಶಾಸಕರು ಪಿಎಸ್‌ಐ ಹತ್ತಿರ ಹಾದಿ ಬೀದಿಯಲ್ಲಿ 30 ರಿಂದ 40 ಲಕ್ಷ ಹಣ ಕೇಳು ತ್ತಿದ್ದಾರೆ. ಸಚಿವರೂ ಯಥೇಚ್ಛವಾಗಿ ಕೇಳುತ್ತಿದ್ದಾರೆ. ದಾರಿ ತಪ್ಪಿದ ಸರ್ಕಾರ ವಾಗಿದೆ, ವಾಲ್ಮೀಕಿ ಹಗರಣದ್ದು ಸಿಬಿಐ, ಇಡಿ, ಎಸ್‌ಐಟಿ ತನಿಖೆ ನಡೆಯುತ್ತಿದೆ, ಇದರಲ್ಲಿ ಬಂಧನವಾಗಿದ್ದಾರೆ. ಬಳ್ಳಾರಿ ಚುನಾವಣೆಗೆ ಹಣ ಬಳಸಿಕೊಂಡಿರುವ ಸಾಕ್ಷಿಯು ಇದೆ, ಆದರೆ ಮುಡಾ ಹಗಣರದಲ್ಲಿ ಜೈಲಿಗೇ ಹೋಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯಪಾಲರಿಗೆ ಒತ್ತಡ ಹೇರುತ್ತಿದ್ದಾರೆ ಎನ್ನುವ ಸಿದ್ದರಾಮಯ್ಯ ಅವರು ವಕೀಲರು ಇದ್ದಾರೆ. ದೆಹಲಿಯಲ್ಲಿ ಮನಮೋಹನ್ ಸಿಂಗ್ ಸರ್ಕಾರವಿತ್ತು, ಕರ್ನಾಟಕದಲ್ಲಿ ಯಡಿಯೂರಪ್ಪ ಅವರ ಸರ್ಕಾರವಿತ್ತು, ಇವರ ಮೇಲೆ ಖಾಸಗಿ ದೂರು ಬರುತ್ತದೆ, ಅಂದಿನ ರಾಜ್ಯಪಾಲ ಹಂಸರಾಜ್ ಭಾರಧ್ವಾಜ್ ಅವರಿದ್ದರು, ಇವರು ಪ್ರಾಸಿಕ್ಯೂಷನ್‌ಗೆ ಯಾವ ಆಧಾರ ಮೇಲೆ ಯಡಿಯೂರಪ್ಪ ಅವರಿಗೆ ಕೊಟ್ಟರು, ಅದೇ ಅಂಬೇಡ್ಕರ್ ಸಂವಿಧಾನವೇ ಈಗಲೂ ಇರುವುದು, ಅವತ್ತು ಕೊಟ್ಟಾಗ ಸ್ವಾಗತ ಕೋರಿ ಈಗ ವೆರಿಬ್ಯಾಡ್ ಎನ್ನುವುದು ಸಿದ್ದರಾಮಯ್ಯ ಅವರಿಗೆ ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಾಸಿಕ್ಯೂಷನ್ ಕೊಡಲಿ ಬಿಡಿ, ತನಿಖೆ ಮಾಡಿದರೆ ಮಾಡಲಿ, ಸಿದ್ದರಾಮಯ್ಯ ಅವರೇ ನೀವು ತಪ್ಪು ಮಾಡಿಲ್ಲ ಎಂದ ಮೇಲೆ ಭಯಪಡುವ ಅಗತ್ಯವಿಲ್ಲ, ಸದನದಲ್ಲಿ ನೀವು ಚರ್ಚೆಗೆ ಅವಕಾಶ ಕೊಟ್ಟಿದ್ದರೆ ಅರ್ಧ ಸಮಸ್ಯೆ ಬಗೆಹರಿಯುತ್ತಿತ್ತು, ಹಾಗೆ ನೀವು ಮಾಡಲಿಲ್ಲ, ತಪ್ಪು ಮಾಡಿರುವವರಿಗೆ ಶಿಕ್ಷೆ ಆಗುತ್ತದೆ ಬಿಡಿ ಸಿದ್ದರಾಮಯ್ಯ ಅವರೇ ಏಕೆ ಗೊಂದಲ ಮಾಡುತ್ತೀರಿ ಎಂದರು. ಗೋಷ್ಠಿಯಲ್ಲಿ ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ವಕ್ತಾರ ಚಂದ್ರಶೇಖರ್, ಮಾಧ್ಯಮ ಸಂಚಾಲಕ ನಾಗೇಶ್, ಎಸ್ಸಿ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯ ಶಿವಯ್ಯ, ಜಿಲ್ಲಾ ವಕ್ತಾರ ಸಿ.ಟಿ.ಮಂಜುನಾಥ್, ಮಾಧ್ಯಮ ಸಂಚಾಲಕ ನಾಗಾನಂದ್ ಇದ್ದರು.

ಯಶಸ್ವಿಯಾಗಿ ಪೂರ್ಣಗೊಂಡ ಏಳನೇ ದಿನದ ಪಾದಯಾತ್ರೆ



ಶ್ರೀರಂಗಪಟ್ಟಣ,ಆ.9(ಮೋಹನ್‌ರಾಜ್)– ಮುಡಾ ಹಗರಣ ವಿರೋಧಿಸಿ ಬಿಜೆಪಿ–ಜೆಡಿಎಸ್ ನಡೆಸುತ್ತಿರುವ ಮೈಸೂರು ಚಲೋ ಪಾದಯಾತ್ರೆಯು ಏಳನೇ ದಿನಕ್ಕೆ ಕಾಲಿಟ್ಟಿದ್ದು, ಪಾದಯಾತ್ರೆಯು ಮಂಡ್ಯ ಜಿಲ್ಲೆ ಮುಗಿಸಿ ಮೈಸೂರು ಜಿಲ್ಲೆಗೆ ಕಾಲಿಟ್ಟಿತು.

ಶುಕ್ರವಾರ ಬೆಳಿಗ್ಗೆ ಪಟ್ಟಣದ ಟಿಎಪಿಸಿಎಂಎಸ್ ಸಭಾಂಗಣದ ಬಳಿ ಆರಂಭಗೊಂಡು ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸಾಗಿತು. ದಾರಿಯುದ್ದಕ್ಕೂ ಸಾಂಸ್ಕೃತಿಕ ಕಲಾತಂಡ, ನಗಾರಿ, ಬೃಹತ್ ಗೊಂಬೆ ಕುಣಿತ ಪಾದಯಾತ್ರಿಕರಿಗೆ ಸಾಥ್ ನೀಡಿತು. ಸುಮಾರು ಏಳು ಕಿಲೋಮೀಟರ್ ಸಾಗಿದ ಪಾದಯಾತ್ರೆ ಮೈಸೂರು ತಾಲ್ಲೂಕಿನ ಸಿದ್ದಲಿಂಗಪುರ ಸಮೀಪ ಮಧ್ಯಾಹ್ನದ ಊಟಕ್ಕೆ ನಿಲ್ಲಿಸಿ ಕೆಲಹೊತ್ತು ವಿಶ್ರಾಂತಿ ಪಡೆದು ಬಳಿಕ ಮುಂದೆ ಸಾಗಿತು.

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ತಮಟೆ ಸಿದ್ದಿಗೆ ಭರ್ಜರಿ ನೃತ್ಯ ಪ್ರದರ್ಶನ ಮಾಡಿದರೆ, ಮೈಸೂರು ಗಡಿ ಬಂದಾಗ ನೆಲಕ್ಕೆ ಮುತ್ತಿಕ್ಕಿ ಅಭಿಮಾನ ಪ್ರದರ್ಶಿಸಿದರು.

ಪಾದಯಾತ್ರೆಯಲ್ಲಿ ವಿಪಕ್ಷ ನಾಯಕ ಆರ್.ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕರಾದ ಅಶ್ವತ್ಥ್ ನಾರಾಯಣ, ಅರವಿಂದ್ ಬೆಲ್ಲದ್, ಸುರೇಶ್‌ಬಾಬು, ಜಿ.ಟಿ.ಹರೀಶ್‌ಗೌಡ, ಹೆಚ್.ಟಿ.ಮಂಜು, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸೇರಿದಂತೆ ಎರಡು ಪಕ್ಷಗಳ ಹಲವು ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು, ಮಾಜಿ ಸಂಸದರು ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.



ಗುಡಿಗೆರೆ ಗ್ರಾಮದಲ್ಲಿ ಗಂಡಾನೆಗಳು ಪತ್ಯಕ್ಷ

ಭಾರತೀನಗರ.ಆ.8–ಇಲ್ಲಿಗೆ ಸಮೀಪದ ಗುಡಿಗೆರೆ ಗ್ರಾಮಕ್ಕೆ ಎರಡು ಗಂಡಾನೆಗಳು ಲಗ್ಗೆಯಿಟಿದ್ದು, ಗ್ರಾಮದ ಹೊರವಲಯದ ಕಬ್ಬಿನ ಗದ್ದೆಯಲ್ಲಿ ಬೀಡುಬಿಟ್ಟಿವೆ.

ಇತ್ತೀಚಿಗೆ ಇದೇ ರೀತಿ ಎರಡು ಆನೆಗಳು ಕೆ.ಎಂ.ದೊಡ್ಡಿ ಸಮೀಪದ ಕಾರ್ಕಹಳ್ಳಿ ಗ್ರಾಮದಲ್ಲಿ ಕಾಣಿಸಿಕೊಂಡಿದ್ದವು. ರೈತರು ಅರಣ್ಯ ಇಲಾಖೆಗೆ ತಿಳಿಸಿದ ಹಿನ್ನೆಲೆಯಲ್ಲಿ ಅರಣ್ಯಾಧಿಕಾರಿಗಳು ಅವುಗಳನ್ನು ಕಾಡಿನತ್ತ ಓಡಿಸಲು ಕಾರ್ಯಾಚರಣೆ ನಡೆಸಿದ್ದರು. ಆದರೆ ಆನೆಗಳು ರಾತ್ರಿ ವೇಳೆ ಕಾರ್ಯಾಚರಣೆ ನಡೆಸಿದ್ದರಿಂದ ದಿಕ್ಕು ತಪ್ಪಿ ಮಂಡ್ಯ ತಾಲೂಕಿನ ತಗ್ಗಹಳ್ಳಿ ಪುರದ ಬಳಿ ಕಾಣಿಸಿಕೊಂಡಿದ್ದವು. ಅಲ್ಲಿಯೂ ಸಹ ಮಂಡ್ಯ ಹಾಗೂ ಮದ್ದೂರು ತಾಲೂಕಿನ ಅರಣ್ಯ ಇಲಾಖೆ ಸಿಬ್ಬಂದಿಗಳು ಕಾಡಿನತ್ತ ಓಡಿಸಲು ಯತ್ನಿಸಿದ್ದರು. ಆದರೆ ಆನೆಗಳು ತಾವು ಹೋದ ಮಾರ್ಗದಲ್ಲಿ ವಾಪಸ್ಸು ಆಗಮಿಸಿ ಗುಡಿಗೆರೆ ಬಳಿ ಕಬ್ಬಿನ ಗದ್ದೆಯಲ್ಲಿ ಬೀಡುಬಿಟ್ಟಿವೆ. ಆನೆಗಳನ್ನು ಓಡಿಸಲು ಹುಣಸೂರಿನ ಅರಣ್ಯ ಇಲಾಖೆ ತಂಡವನ್ನು ಕರೆಸಿಕೊಂಡಿರುವ ಮದ್ದೂರು ಅರಣ್ಯ ಇಲಾಖೆ ಅಧಿಕಾರಿಗಳು ಆನೆಯನ್ನು ಅತ್ತಿತ್ತ ಕದಲದಂತೆ 20 ಕ್ಕೂ ಹೆಚ್ಚು ಸಿಬ್ಬಂದಿಯಿಂದ ಕಾವಲು ಇರಿಸಿದ್ದಾರೆ. ಸಂಜೆ ವೇಳೇ ಕಾರ್ಯಾಚರಣೆ ನಡೆಸಿ ಆನೆಗಳನ್ನು ಕಬ್ಬಾಳು ಅರಣ್ಯ ಪ್ರದೇಶಕ್ಕೆ ಅಟ್ಟಲಾಗುವುದೆಂದು ಮದ್ದೂರು ವಲಯ ಅರಣ್ಯಾಧಿಕಾರಿ ಗವಿಯಪ್ಪ ತಿಳಿಸಿದ್ದಾರೆ.

ಕಾಂಗ್ರೆಸ್ ಜನಾಂದೋಲನ ಸಮಾವೇಶದಲ್ಲಿ ಜನಸ್ತೋಮ....



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಜನಾಂದೋಲನ ಸಮಾವೇಶಕ್ಕೆ ಆಗಮಿಸಿದ್ದ ಜನಸ್ತೋಮ

ಸಮಾವೇಶದಲ್ಲಿ ಸಿದ್ದರಾಮಯ್ಯ ಸೆಂಟರ್ ಆಫ್ ಅಟ್ರ್ಯಾಕ್ಷನ್

ಮೈಸೂರು, ಆ.9(ಬಿಎಲ್‌ಯು)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಇಂದು ನಡೆದ ಕಾಂಗ್ರೆಸ್ ಜನಾಂದೋಲನ ಸಮಾವೇಶದಲ್ಲಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಸೆಂಟರ್ ಆಫ್ ಅಟ್ರ್ಯಾಕ್ಷನ್ ಆಗಿದ್ದರು. ರಾಜ್ಯ ಸಚಿವ ಸಂಪುಟದ ಎಲ್ಲಾ ಸಚಿವರು, ಹಿರಿಯ ಶಾಸಕರು ಸಮಾವೇಶದಲ್ಲಿ ಭಾಗವಹಿಸಿದ್ದರು. ಈ ವೇಳೆ ಮಾತನಾಡಿದ ಪ್ರತಿಯೊಬ್ಬರು ಸಿದ್ದರಾಮಯ್ಯ ಯಾವುದೇ ಅವ್ಯವಹಾರದಲ್ಲಿ ಭಾಗಿಯಾಗಿಲ್ಲ ಎಂದು ಕ್ಲೀನ್ ಚಿಟ್ ನೀಡಿದರು. ಮುಡಾ ಅಥವಾ ವಾಲ್ಮೀಕಿ ಹಗರಣದಲ್ಲಿ ಸಿದ್ದರಾಮಯ್ಯ ಪಾತ್ರವಿಲ್ಲ ಎಂದು ಮುಖ್ಯಮಂತ್ರಿಗಳನ್ನು ಸಮರ್ಥಿಸಿಕೊಂಡರು. ಇಡೀ ಸಮಾವೇಶದಲ್ಲಿ ಹಗರಣ ಎಂಬ ಒಂದೇ ವಿಚಾರ ಸದ್ದು ಮಾಡಿತು. ಪ್ರತಿಯೊಬ್ಬರ ಭಾಷಣದಲ್ಲಿ ಹಗರಣ ಎಂಬ ಪದದ ಉಲ್ಲೇಖ ಇದ್ದೆ ಇತ್ತು. ಸಿದ್ದರಾಮಯ್ಯ ಮಾತು ಆರಂಭಿಸಿದಾಗ ಜೈಕಾರ ಕೂಗುತ್ತಲೇ ಇದ್ದರು. ಸುಮಾರು ಐದು ನಿಮಿಷಗಳ ಕಾಲ ಸಿದ್ದರಾಮಯ್ಯ ಮಾತಿಗೆ ಅವಕಾಶ ನೀಡದೆ ಜೈಕಾರ ಮೊಳಗಿಸಿದರು. ಆಗಾಗ ಹೇ... ಎದ್ದೇಳ ಬೇಡಿ, ಕೂತ್ಕೊಳ್ಳಿ ಎಂದು ಕಾರ್ಯಕರ್ತರನ್ನು ಸಿಎಂ ಗದರಿಸಿ ಕೂರಿಸಿದ್ದೇ ಆಯ್ತು. ಕಾಂಗ್ರೆಸ್ ಕಾರ್ಯ ಕರ್ತರು ಹಾಗೂ ಅಭಿಮಾನಿಗಳ ಜೈಕಾರ ನಿಲ್ಲಿಸಿ ಮಾತು ಮುಂದುವರೆಸಲು ಸ್ವತಃ ಸಿದ್ದರಾಮಯ್ಯ ಅವರೆ ಹರ ಸಾಹಸ ಪಟ್ಟರು.

ಸಮಾವೇಶದಲ್ಲಿ ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಹೆಜ್ಜೆ ಹಜ್ಜೆಗೂ ಖಾಕಿ ಕಣ್ಗಾವಲಿತ್ತು.

ಸಮಾವೇಶ ನಡೆಯುತ್ತಿದ್ದ ಸಮಾವೇಶದ ಪ್ರವೇಶ ದ್ವಾರದಲ್ಲಿ 20ಕ್ಕೂ ಹೆಚ್ಚು ಮೆಟಲ್ ಡಿಟೆಕ್ಟರ್‌ಗಳನ್ನು ಅಳವಡಿಸಲಾಗಿತ್ತು. ಪ್ರತಿಯೊಂಬ್ಬರು ಮೆಟಲ್ ಡಿಟೆಕ್ಟರ್ ಮೂಲಕ ಒಳಗೆ ಪ್ರವೇಶ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿತ್ತು. ಸಹಸ್ರಾರು ಸಂಖ್ಯೆಯಲ್ಲಿ ಜನರು ಸೇರಿದ್ದರೂ ಯಾವುದೇ ಅಹಿತಕರ ಘಟನೆ ನಡೆಯದೆ ಸಮಾವೇಶ ಶಾಂತಿಯುತವಾಗಿ ನೆರವೇರಿತು.






ವಿವಿಧ ಜಿಲ್ಲೆಗಳಿಂದ ಸಮಾವೇಶಕ್ಕಾಗಿ ಮೈಸೂರಿಗೆ ಆಗಮಿಸಿದ್ದ ಕಾರ್ಯಕರ್ತರು ತಮ್ಮ ಕರೆತಂದ ಬಸ್‌ನಿಂದಿಳಿದು, ಮಹಾರಾಜ ಕಾಲೇಜು ಮೈದಾನದತ್ತ ತೆರಳಿದರು.

ಮಾಜಿ ಪ್ರಧಾನಿ ದೇವೇಗೌಡರ ಕುಟುಂಬದ ವಿರುದ್ಧ ಭೂಕಬಳಿಕೆ ಫ್ಲೆಕ್ಸ್ ಅನಾವರಣ

ಸಾ.ರಾ.ಮಹೇಶ್ ನೇತೃತ್ವದಲ್ಲಿ ಖಂಡನೆ: ಹಲವರು ಪೊಲೀಸ್ ವಶಕ್ಕೆ; ಸಂಜೆ ವೇಳೆಗೆ ಎಲ್ಲರ ಬಿಡುಗಡೆ





ದೇವೇಗೌಡರ ಕುಟುಂಬದ ವಿರುದ್ಧ ಹಾಕಲಾಗಿದ್ದ ಫ್ಲೆಕ್ಸ್ ತೆರವಿಗೆ ಆಗ್ರಹಿಸಿದ ಮಾಜಿ ಸಚಿವ ಸಾ.ರಾ.ಮಹೇಶ್ ನೇತೃತ್ವದ ಜೆಡಿಎಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಮೈಸೂರು, ಆ.9(ಜಿಎ)– 'ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬದ ಭೂಕಬಳಿಕೆ ಪಕ್ಷಿನೋಟ' ಜಾಹಿರಾತು ಮಾದರಿ ಫ್ಲೆಕ್ಸ್ ತೆರವುಗೊಳಿಸುವಂತೆ ಆಗ್ರಹಿಸಿದ ಜೆಡಿಎಸ್ ಕಾರ್ಯಾಧ್ಯಕ್ಷರೂ ಆದ ಮಾಜಿ ಸಚಿವ ಸಾ.ರಾ.ಮಹೇಶ್ ಮತ್ತಿತರರ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದ ಘಟನೆ ಶುಕ್ರವಾರ ನಡೆಯಿತು.

ಕಾಂಗ್ರೆಸ್ ಜನಾಂದೋಲನ ಸಮಾವೇಶ ಹಿನ್ನೆಲೆಯಲ್ಲಿ ನಗರದ ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ಫ್ಲೆಕ್ಸ್, ಕಟೌಟ್, ಬಂಟಿಂಗ್ಸ್‌ಗಳನ್ನು ಅಳವಡಿಸಲಾಗಿತ್ತು. ಹಾಗೆಯೇ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ(ಮೆಟ್ರೋಪೋಲ್) ವೃತ್ತದಲ್ಲಿ ಬಿಜೆಪಿಯವರು ಈ ಹಿಂದೆ ನೀಡಿದ್ದರೆನ್ನಲಾದ 'ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬದ ಭೂಕಬಳಿಕೆ ಪಕ್ಷಿನೋಟ' ಜಾಹಿರಾತು ಪ್ರತಿಯನ್ನು ಫ್ಲೆಕ್ಸ್ ಮಾದರಿಯಲ್ಲಿ ಅಳವಡಿಸಲಾಗಿತ್ತು.

ಈ ಬಗ್ಗೆ ಮಾಹಿತಿ ತಿಳಿದ ಸಾ.ರಾ. ಮಹೇಶ್ ಹಾಗೂ ಜೆಡಿಎಸ್ ಮುಖಂಡರು, ಆ ಅವಹೇಳನಕಾರಿ ಫ್ಲೆಕ್ಸ್ ಬಳಿ ಜಮಾಯಿಸಿದರು. ಕೆಲ ಹೊತ್ತಿನಲ್ಲೇ ಎಸಿಪಿ ಶಾಂತಮಲ್ಲಪ್ಪ ಇನ್ನಿತರ ಅಧಿಕಾರಿಗಳು ದೌಡಾಯಿಸಿ, ಅವರನ್ನು ವಶಕ್ಕೆ ಪಡೆಯಲು ಮುಂದಾದರು. ಆ ವೇಳೆ ಸಾ.ರಾ. ಮಹೇಶ್, ನಾವು ಯಾರ ವಿರುದ್ಧವೂ ಘೋಷಣೆ ಕೂಗಿಲ್ಲ, ಪ್ರತಿಭಟನೆ ಮಾಡಿಲ್ಲ. ಹೀಗಿರುವಾಗ ನಮ್ಮನ್ನೇಕೆ ವಶಕ್ಕೆ ಪಡೆಯುತ್ತೀರಿ ಎಂದು ಪ್ರಶ್ನಿಸಿದರು. ಇಲ್ಲಿ ಅಹಿತಕರ ಘಟನೆ ನಡೆಯುವ ಸಾಧ್ಯತೆ ಇದೆ ಎಂಬ ಮಾಹಿತಿ ಇದೆ. ಹಾಗಾಗಿ ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ನಾವು ಕ್ರಮ ವಹಿಸುತ್ತಿದ್ದೇವೆ ಎಂದು ಎಸಿಪಿ ಪ್ರತಿಕ್ರಿಯಿಸಿದರು.

ಮಾಜಿ ಪ್ರಧಾನಿಗಳಿಗೆ ಅಪಮಾನ ಮಾಡುವ ಫ್ಲೆಕ್ಸ್ ಅಳವಡಿಸಿದ್ದಾರೆ. ಈಗಲೇ ಈ ಫ್ಲೆಕ್ಸ್ ತೆರವು ಮಾಡಿಸಿ, ನಾವು ಇಲ್ಲಿಂದ ಹೋಗುತ್ತೇವೆ ಎಂದರು. ಆದರೆ ಪೊಲೀಸರು ಸ್ಪಂದಿಸದಿದ್ದಾಗ ಸಾ.ರಾ.ಮಹೇಶ್ ರಾಜ್ಯ ಸರ್ಕಾರ, ಸಿಎಂ ಸಿದ್ದರಾಮಯ್ಯ ಹಾಗೂ ಪೊಲೀಸರ ವಿರುದ್ಧ ಘೋಷಣೆ ಕೂಗಿದರು. ಆಗ ಅವರೂ ಸೇರಿದಂತೆ ಮಾಜಿ ಮೇಯರ್ ಎಂ.ಜೆ.ರವಿಕುಮಾರ್, ಮಾಜಿ ಕಾರ್ಪೊರೇಟರ್ ಎಸ್‌ಬಿಎಂ ಮಂಜು, ಮುಖಂಡರಾದ ಸೋಮು, ಲಕ್ಷ್ಮೀ, ರಾಮು ಮತ್ತಿತರರನ್ನು ವಶಕ್ಕೆ ಪಡೆದು, ಸಿಎಆರ್ ಮೈದಾನಕ್ಕೆ ಕರೆದೊಯ್ದರು.

ಸಂಜೆ ಬಿಡುಗಡೆ: ಮಾಜಿ ಪ್ರಧಾನಿ ದೇವೇಗೌಡರು ಹಾಗೂ ಅವರ ಕುಟುಂಬದ ವಿರುದ್ಧ ಸುಳ್ಳು ಆರೋಪದ ಫ್ಲೆಕ್ಸ್ ಅಳವಡಿಸಿ, ಕೀಳು ರಾಜಕೀಯ ಮಾಡಿದ್ದಾರೆ. ನಮ್ಮನ್ನು ವಶಕ್ಕೆ ಪಡೆಯಲು ಕಾರಣವೇನು ತಿಳಿಸಿ?. ಇಂದಿರಾ ಗಾಂಧಿ, ರಾಜೀವ್ ಗಾಂಧಿ ಬಗ್ಗೆ ಸಿದ್ದರಾಮಯ್ಯನವರು ಮಾತನಾಡಿರುವ, ಸಿದ್ದರಾಮಯ್ಯ ಅವರ ಬಗ್ಗೆ ಡಿ.ಕೆ. ಶಿವಕುಮಾರ್ ಮಾತನಾಡಿರುವ ವಿಡಿಯೋಗಳನ್ನು ನಾವೂ ದೊಡ್ಡ ಪರದೆಯಲ್ಲಿ ಪ್ರದರ್ಶಿಸಬಹುದೇ?. ಸಾರ್ವಜನಿಕ ಸ್ಥಳದಲ್ಲಿ ಆ ರೀತಿಯ ಫ್ಲೆಕ್ಸ್ ಅಳವಡಿಸಲು ಅನುಮತಿ ನೀಡಿದ್ದು ಯಾರು?. ನಮಗೆ ನ್ಯಾಯ ಸಿಗುವವರೆಗೆ ನಾವು ಇಲ್ಲಿಯೇ ಇರುತ್ತೇವೆ ಎಂದು ಪಟ್ಟು ಹಿಡಿದು ಪ್ರತಿಭಟಿಸಿದರು.

ಡಿಸಿಪಿ ಮುತ್ತುರಾಜ್ ಭೇಟಿಯಾಗಿ ಪ್ರತಿಭಟನೆ ಮಾಡದಂತೆ ಮನವಿ ಮಾಡಿದರಾದರೂ ಸಾ.ರಾ.ಮಹೇಶ್ ಒಪ್ಪಲಿಲ್ಲ. ಫ್ಲೇಕ್ಸ್ ಅಳವಡಿಸಿದವರ ವಿರುದ್ಧ ದೂರು ದಾಖಲಿಸಬೇಕು ಅಥವಾ ನಮಗೂ ಅಲ್ಲಿ ಫ್ಲೆಕ್ಸ್ ಅಳವಡಿಸಲು ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಸಿ.ಅಶ್ವಿನ್ ಕುಮಾರ್ ಸೇರಿದಂತೆ ಹಲವು ಮುಖಂಡರೂ ಜೊತೆ ಸೇರಿದರು. ಬಳಿಕ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಶಾಸಕ ಜಿ.ಟಿ. ದೇವೇಗೌಡರು, ಮಾಜಿ ಸಚಿವ ಸಿ.ಎಸ್. ಪುಟ್ಟರಾಜು, ಸುರೇಶ್‌ಬಾಬು, ನಾಡಗೌಡರು ಸೇರಿದಂತೆ ಹಲವು ನಾಯಕರು ಸಿಎಆರ್ ಮೈದಾನಕ್ಕೆ ಧಾವಿಸಿದರು. ಅಷ್ಟರಲ್ಲಿ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಪ್ರತಿಭಟನಾ ನಿರತರ ಮನವೊಲಿಸುವ ಪ್ರಯತ್ನ ನಡೆಸಿದ್ದರು. ಮೈಸೂರು ಚಲೋ ಪಾದಯಾತ್ರೆ ಸಮಾರೋಪ ಸಮಾರಂಭ ಇರುವ ಹಿನ್ನೆಲೆಯಲ್ಲಿ ಈ ವಿಚಾರವನ್ನು ಬೆಳೆಸುವುದು ಬೇಡ ಎಂದು ನಾಯಕರು ತಿಳಿಸಿದ್ದರಿಂದ ಪಟ್ಟು ಸಡಿಲಿಸಿದ ಸಾ.ರಾ.ಮಹೇಶ್, ನಾವು ದೂರು ನೀಡುತ್ತೇವೆ, ಫ್ಲೆಕ್ಸ್ ಅಳವಡಿಸಿದ್ದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು. ಸಂಜೆ ಸುಮಾರು 5.30ರ ವೇಳೆಗೆ ಅಲ್ಲಿಂದ ಹೊರಟರು.


ನಿಧನ



ರಂಗೇಗೌಡ

ಮೈಸೂರು, ಆ. 9–ನಿವೃತ್ತ ಉಪಾಧ್ಯಾಯರು ಮತ್ತು ಆರ್.ಟಿ.ನಗರದ ಪತ್ರಕರ್ತರ ಬಡಾವಣೆ ನಿವಾಸಿ ರಂಗೇಗೌಡ (87) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ವನ್ಯಜೀವಿ ಛಾಯಾಗ್ರಾಹಕ ಲೋಕೇಶ್ ಮೊಸಳೆ ಸೇರಿದಂತೆ ಇಬ್ಬರು ಪುತ್ರರು, ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಜಯನಗರ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.08.2024 ಶನಿವಾರ, ಮಳೆ ನಕ್ಷತ್ರ: ಆಶ್ಲೇಷ 03.08.2024 ರಿಂದ 12.08.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕೂದಲು ಉದುರುವಿಕೆ ಮತ್ತು ಇತರೆ ನೆತ್ತಿ ಸಂಬಂಧಿತ ಸಮಸ್ಯೆಗಳಿಗೆ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯದ ನೌಕರರ ಸಹಕಾರ ಪತ್ತಿನ ಸಂಘ :** ಸರ್ವ ಸದಸ್ಯರ ಮಹಾಸಭೆ, ನಿವೃತ್ತ ನೌಕರರಿಗೆ ಸನ್ಮಾನ ಸಮಾರಂಭ, ಪ್ರತಿಭಾ ಪುರಸ್ಕಾರ, ಮುಖ್ಯ ಅತಿಥಿಗಳಾಗಿ ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಹಣಕಾಸು ಅಧಿಕಾರಿ ಶ್ರೀ ಮತಿ ಕೆ.ಎಸ್. ರೇಖಾ, ಉಪಸ್ಥಿತರು : ಸಂಘದ ಅಧ್ಯಕ್ಷ ವೈ.ಎಸ್. ಹರ್ಷ, ಉಪಾಧ್ಯಕ್ಷ ಬಿ. ಪ್ರಕಾಶ್, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 9 ಗಂಟೆಗೆ

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಿವಿಧ ರಾಜ್ಯಗಳ ರೇಷ್ಮೆ ಸೀರೆಗಳು ಮತ್ತು ಕೈಮಗ್ಗ ಉತ್ಪನ್ನಗಳು ಹಾಗೂ ಕರಕುಶಲ ವಸ್ತುಗಳ ಪ್ರದರ್ಶನ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ರಿಂಗ್ ರೋಡ್, ಹೆಬ್ಬಾಳು, ಬೆಳಗ್ಗೆ 10 ರಿಂದ.

■ **ಸಮರ್ಥನಂ ಅಂಗವಿಕಲರ ಸಂಸ್ಥೆ, ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ :** ಉದ್ಯೋಗ ಮೇಳ, ಉದ್ಘಾಟನೆ : ಜಿಲ್ಲಾ ಗವರ್ನರ್ ಎನ್. ಸುಬ್ರಮಣ್ಯ, ಅಧ್ಯಕ್ಷತೆ : ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಪ್ರಾಂಶುಪಾಲ ಬಿ. ಇಳಂಗೋವನ್, ಉಪಸ್ಥಿತರು : ಮೈಸೂರು ಜಿಲ್ಲಾ ಕಿವುಡರ ಸಂಘದ ಅಧ್ಯಕ್ಷ ಎಸ್. ಮೂರ್ತಿ, ಆಲ್ ಇಂಡಿಯಾ ಪ್ಲೇಸ್‌ಮೆಂಟ್ ಸೆಲ್ ಸಮರ್ಥನಂ ಅಂಗವಿಕಲರ ಸಂಸ್ಥೆ ಮುಖ್ಯಸ್ಥ ಕೆ. ಸತೀಶ್, ಕೇಂದ್ರೀಯ ಮುಖ್ಯಸ್ಥ ಸುಭಾಷ್‌ಚಂದ್ರ, ಸ್ಥಳ: ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ 95–96, ತಿಂಗಳ ಸಾಧಕರು ಬಹುಮುಖ ಪ್ರತಿಭೆಯ ವೈದ್ಯರಾದ ಡಾ. ಎಸ್. ಗುರುರಾಜ್, ರೈತ ಸಂಘದ ಅಧ್ಯಕ್ಷರಾದ ಮಹೇಶ್, ಮುಖ್ಯ ಅತಿಥಿಗಳು: ಶ್ರೀಮತಿ ರುಕ್ಮಿಣಿ ಚಂದ್ರನ್, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ವಿಶೇಷ ಆಹ್ವಾನಿತರು : ಡಾ. ಡಿ. ರಮಣಿ, ಶ್ರೀಮತಿ ಮೇಟಿಲ್ಡಾ ಮೋನಿಸ್, ಡಾ. ನಂದಕುಮಾರ್, ಪ್ರೊ. ಪವನ್ ಭಾರದ್ವಾಜ್, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಮಂಡ್ಯ ಜಿಲ್ಲೆಯ ಮೈಸೂರು ನಿವಾಸಿಗಳು, ರೋಟರಿ ಕ್ಲಬ್ ಆಫ್ ಹೆರಿಟೇಜ್, ಮೈಸೂರು, ಪುಣ್ಯಕೋಟಿ ಸೇವಾ ಟ್ರಸ್ಟ್ :** ಶ್ರಾವಣ ಮಾಸದ ಪ್ರಯುಕ್ತ ಅವರೇಕಾಳು–ಮುದ್ದೆ ಊಟ ಕಾರ್ಯಕ್ರಮ, ಸಾನ್ನಿಧ್ಯ: ಪ್ರೊ ಭಾಷ್ಯಂ ಸ್ವಾಮೀಜಿ, ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ವಿಶೇಷ ಆಹ್ವಾನಿತರು : ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಚಿವ ಪುಟ್ಟರಾಜು, ಸಾ.ರಾ. ಮಹೇಶ್, ಡಾ. ಅಶ್ವಥ್‌ನಾರಾಯಣ, ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕ ಎಲ್. ನಾಗೇಂದ್ರ, ಸ್ಥಳ: ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ

■ **ಚಂಪಕ ಎಜುಕೇಶನಲ್ ಅಂಡ್ ಕಲ್ಚರಲ್ ಟ್ರಸ್ಟ್ :** ವತಿಯಿಂದ ಭಾರತೀಯ ಪ್ರದರ್ಶಕ ಕಲೆಗಳ ಕಲಾವಿದರಿಗೆ ಪ್ರೋತ್ಸಾಹ ನೀಡಲು ಚಂಪಕ ರಾಷ್ಟ್ರೀಯ ಕಲಾ ಉತ್ಸವ, ಚಂಪಕ ಅಕಾಡೆಮಿಯ ಸಂಸ್ಥಾಪಕಿ ವಿದುಷಿ ಡಾ. ನಾಗಲಕ್ಷ್ಮಿ ನಾಗರಾಜನ್ ಅವರ ಕಿರಿಯ ಶಿಷ್ಯಂದಿರು ಭರತನಾಟ್ಯ, ಬೆಂಗಳೂರಿನ ಕಾರುಣ್ಯ ನೃತ್ಯ ಅಕಾಡೆಮಿಯ ಸಂಸ್ಥಾಪಕರು ಮತ್ತು ನಿರ್ದೇಶಕರಾದ ವಿದುಷಿ ಅಮೃತಾ ಶಶಾಂಕ್ ಮತ್ತು ಶಿಷ್ಯಂದಿರು ಭರತನಾಟ್ಯ, ತ್ರಿಪುರ ಪಾಠಶಾಲಾ ಸಂಸ್ಥಾಪಕರಾದ ವಿದುಷಿ ಗೌರಿ ಪ್ರಿಯಾ ಸೇತುರಾಮ್ ಮತ್ತು ಶಿಷ್ಯವೃಂದದವರು ಭರತನಾಟ್ಯ, ಮುಖ್ಯ ಅತಿಥಿಗಳು : ಮಹಾಜನ ಎಜುಕೇಶನ್ ಸೊಸೈಟಿ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಸ್ಥಳ: ಚಂಪಕ ಅಕಾಡೆಮಿ ಸಭಾಂಗಣ, ರಾಮಕೃಷ್ಣನಗರ, ಸಂಜೆ 4.30ಕ್ಕೆ

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಡಾ. ಮಳಲಿ ವಸಂತಕುಮಾರ್ ಅವರ ದತ್ತಿ ಪ್ರಶಸ್ತಿ ಕಾರ್ಯಕ್ರಮ, ಉದ್ಘಾಟನೆ : ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಶಸ್ತಿ ಪ್ರದಾನ : ಕರ್ನಾಟಕ ಸಂಘ, ಮಂಡ್ಯ ಅಧ್ಯಕ್ಷ ಪ್ರೊ. ಜಯಪ್ರಕಾಶ್‌ಗೌಡ, ಪ್ರಶಸ್ತಿ ಪುರಸ್ಕೃತರು : ನಿವೃತ್ತ ಪ್ರಾಧ್ಯಾಪಕ ಪ್ರೊ. ರಾಗೌ, ಮುಖ್ಯ ಅತಿಥಿಗಳು : ಪ್ರಾಧ್ಯಾಪಕರಾದ ಡಾ. ಹೆಚ್.ಪಿ. ಗೀತಾ, ಶ್ರೀಮತಿ ಶಾಂತ ಮಳಲಿ ವಸಂತಕುಮಾರ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ :** ಗುತ್ತಿಗೆದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ : ಸೊಸೈಟಿ ಅಧ್ಯಕ್ಷ ಮಹಾಲಿಂಗಂ, ಮುಖ್ಯ ಅತಿಥಿಗಳು : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಭಾಷಣಕಾರರು : ನಿವೃತ್ತ ಪ್ರಾಧ್ಯಾಪಕ ಡಾ. ಎನ್.ಎಸ್. ರಂಗರಾಜು, ಸೊಸೈಟಿ ಉಪಾಧ್ಯಕ್ಷ ವಿ. ಕುಮಾರ್, ಸ್ಥಳ: ರಿಯೋ ಮೆರಿಡಿಯನ್ ಸಭಾಂಗಣ, ಹೈವೇ ಸರ್ಕಲ್ ಹತ್ತಿರ, ಸಂಜೆ 5ಕ್ಕೆ.

■ **ಮೈಸೂರು ಆಬ್‌ಸ್ಟರಿಕ್ ಅಂಡ್ ಗೈನಾಕಲಾಜಿಕಲ್ ಸೊಸೈಟಿ :** ಫಾಗ್ಸಿ ಸೌತ್ ಜೋನಲ್ ಕಾನ್ಫರೆನ್ಸ್ ವಿತ್ ಯುವ 2024, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ವಿಶೇಷ ಅತಿಥಿಗಳು : ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಮುಕ್ತಿದಾನಂದ ಸ್ವಾಮೀಜಿ, ಎಂಎಂಸಿ ಮತ್ತು ಆರ್‌ಐ ಡೀನ್ ಡಾ. ಕೆ.ಆರ್. ದಾಕ್ಷಾಯಿಣಿ, ಸ್ಥಳ: ಕೃಷ್ಣರಾಜ ಹಾಲ್, ಸೈಲೆಂಟ್ ಶೋರ್ಸ್ ರೆಸಾರ್ಟ್, ಸಂಜೆ 5 ರಿಂದ.

■ **ಬಸವ ಭಾರತ ಪ್ರತಿಷ್ಠಾನ, ಸಮಸ್ತ ಬಸವ ಪರ ಸಂಘಟನೆಗಳು:** ಬಸವ ಧರ್ಮ ಜಾಗೃತಿ ಅಭಿಯಾನ, ಇಷ್ಟಲಿಂಗಧಾರಣೆ ಶಿವಯೋಗ, ವಚನ ಪಠಣ, ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮ, ಗಂಗಾಧರ ಸ್ವಾಮಿ ಮತ್ತು ಬಸವ ಚೇತನ ಅವರಿಂದ ಬಸವತತ್ವ ಪ್ರಚಾರದಲ್ಲಿ ಹಿರಿಯರ ಪಾತ್ರ, ಬಸವ ಧರ್ಮದ ನಿಜಾಚರಣೆಗಳು (ವಚನ ಮಾಂಗಲ್ಯ) ಕುರಿತು ಉಪನ್ಯಾಸ, ಸ್ಥಳ: ಗೌರಿಶಂಕರ ಶಾಲೆ, ಗೌರಿಶಂಕರನಗರ, ಸಂಜೆ 5.30ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು (ಮೈಸೂರು ನಗರ ಘಟಕ), ಕದಳಿ ಮಹಿಳಾ ವೇದಿಕೆ (ಮೈಸೂರು) :** ವಚನ ಶ್ರಾವಣ–ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಸಂಯೋಜನಾಧಿಕಾರಿ ಜಿ.ಎಲ್. ತ್ರಿಪುರಾಂತಕ ಅವರಿಂದ ಕೊಟ್ಟು ಕುದಿಯಲು ಬೇಡ–ಸರ್ವಜ್ಞ ಕುರಿತು ಉಪನ್ಯಾಸ, ಸ್ಥಳ: ಡಾ. ಶೈಲ ನಾಗರಾಜ, ಆರ್ಯ ಈಡಿಗರ ವಿದ್ಯಾರ್ಥಿ ನಿಲಯ, ಸಪ್ತಮಾತೃಕಾ ಚೌಡೇಶ್ವರಿ ದೇವಸ್ಥಾನದ ಮುಂಭಾಗ, ವಿಜಯನಗರ 3ನೇ ಹಂತ, ಸಂಜೆ 5.30ಕ್ಕೆ.

■ **ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲ ಮಹಾ ಸಂಸ್ಥಾನ, ಶ್ರೀ ರಾಜೇಂದ್ರ ತೀರ್ಥರ ಪೂರ್ವಾಧಿ ಮಠ, ಶ್ರೀ ಮುನಿತ್ರಯ ಪೀಠ, ಶ್ರೀ ವ್ಯಾಸರಾಜ ಮಠ (ಸೋಸಲೆ):** ಶ್ರೀ ವಿದ್ಯಾ ಕರ್ಣಾಟಕ ಸಿಂಹಾಸನಾಧೀಶ್ವರರಾದ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದಂಗಳವರ 8ನೇ ಚಾತುರ್ಮಾಸ್ಯ, ಸ್ಥಳ: ಶ್ರೀ ವ್ಯಾಸರಾಜ ಮಠ, ಸೋಸಲೆ ಕ್ಷೇತ್ರ, ಸಂಜೆ.

■ **ಅವಧೂತ ದತ್ತಪೀಠ:** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಶ್ರಾವಣ ಶನಿವಾರ ಪ್ರಯುಕ್ತ ಶ್ರೀ ದತ್ತ ವೆಂಕಟೇಶ್ವರ ಸ್ವಾಮಿಗೆ ವಿಶೇಷ ಅರ್ಚನೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ನಂಜನಗೂಡು ರಸ್ತೆ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ, ಶ್ರೀ ಸುತ್ತೂರು ಮಠ, ಮೈಸೂರು :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮ, ಬೆಳಗ್ಗೆ ವಿಶೇಷ ಪೂಜೆ, ಸಂಜೆ 6 ರಿಂದ ಸಾಮೂಹಿಕ ಪ್ರಾರ್ಥನೆ, ಡಾ.ಕೆ.ಅನಂತರಾಮು ಅವರಿಂದ ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ವ ಚಿಂತಾಮಣಿ' ಕುರಿತು ಪ್ರವಚನ, ವಿದುಷಿ ಎಂ.ವಿ.ಶುಭಾ ರಾಘವೇಂದ್ರ ಅವರಿಂದ ವಾಚನ, ಸ್ಥಳ: ಮೈಸೂರು ಶ್ರೀ ಸುತ್ತೂರು ಶಾಖಾ ಮಠ.

■ **ನಾದಬ್ರಹ್ಮ ಸಂಗೀತ ಸಭಾ :** ಡಾ. ಕೆ. ಶ್ರೀಕಂಠಯ್ಯ ಸಂಸ್ಮರಣ ಕಾರ್ಯಕ್ರಮ, ವಿದ್ವಾನ್ ಹರೀಶ್ ಪಾಂಡವ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸ್ಯಾಕ್ಸೋಫೋನ್ ವಾದನ, ವಿದ್ವಾನ್ ಕೇಶವ ಮೋಹನ್ ಕುಮಾರ್–ಪಿಟೀಲು, ವಿದ್ವಾನ್ ಸುನೀಲ್ ಸುಬ್ರಹ್ಮಣ್ಯ–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ ವಾಸುದೇವಾಚಾರ್ಯ ಸಭಾ ಭವನ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ – ಅನುಶೋಧ, ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು : CSIR, CFTRI, Mysuru, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 'ಹಾದಿಯಲ್ಲಿ ಕಂಡ ಮುಖ'– ಬಾನುಲಿ ಸರಣಿ, ಮೈಸೂರು ತಾಲೂಕು ಆನಂದೂರ ಕೊಪ್ಪಲಿನ ನಾಟಕದ ಮೇಷ್ಟ್ರು ವೆಂಕಟಸ್ವಾಮಪ್ಪ ಅವರೊಂದಿಗೆ ಸಂವಾದ. ಪ್ರಸ್ತುತಿ : ಅಬ್ದುಲ್ ರಶೀದ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಕೋದಂಡರಾಮ್ ಮತ್ತು ಸಂಗಡಿಗರು – ನಾದಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.30 ದೇವರನಾಮ–ರೋಹಿಣಿ ಸುಧಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು – ವೃಂದಗಾನ, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ, ಎರಡೂ ಕೈಗಳಲ್ಲಿ ಬರೆಯುವ ಮತ್ತು ಹಾಡುವ ಚಿರಸ್ವಿ ಬಾಲಸುಬ್ರಹ್ಮಣ್ಯನ್ ಪರಿಚಯ. ಪ್ರಸ್ತುತಿ: ಎಂ.ಎಸ್. ಭಾರತಿ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ : ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ : ಮಂಡ್ಯ ತಾಲ್ಲೂಕು ಚಂದಗಾಲ ಗ್ರಾಮದ ಕೃಷಿಕ ದಂಪತಿ ಆನಂದ್ ಹಾಗೂ ಹೆಚ್.ಕೆ. ಮಂಜುಳಾ. ಪ್ರಸ್ತುತಿ : ಎನ್. ಕೇಶವಮೂರ್ತಿ. 8.00 ಇಸ್ ಸಪ್ತಾಹ್ ಸಂಸದ್ ಮೇ, 8.15 ಯುವವಾಣಿ– ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಪ್ರಥಮದರ್ಜೆ ಕಾಲೇಜಿನ ವಿದ್ಯಾರ್ಥಿನಿಯರಿಂದ ಕಾರ್ಯಕ್ರಮ ವೈವಿಧ್ಯ, 9.30 ಸವಿನೆನಪು–ಹಳೆಯ ಕನ್ನಡ ಚಿತಗೀತೆಗಳು, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ: ವಿದ್ವಾನ್. ವಿ. ವಂಶೀಧರ್–ಕೊಳಲು ವಾದನ, ಹೆಚ್. ಎನ್. ಭಾಸ್ಕರ್– ವೈಯೋಲಿನ್, ಬೆಂಗಳೂರು ವಿ. ಪ್ರವೀಣ್–ಮೃದಂಗ, ವಿ. ಆರ್. ಚಕ್ರವರ್ತಿ–ಘಟ (ಆಕಾಶವಾಣಿ ಮೈಸೂರು ಕೇಂದ್ರದ ಕೊಡುಗೆ)

ಸಿದ್ದರಾಮಯ್ಯ ಸಮಾವೇಶದಲ್ಲೇ ರಾಜೀನಾಮೆ ಘೋಷಿಸುತ್ತಾರೆ ಅಂದುಕೊಂಡಿದ್ದೆವು...

●ವಿಪಕ್ಷ ನಾಯಕ ಆರ್.ಅಶೋಕ್ ಮಾರ್ಮಿಕ ನುಡಿ ●ಆದರೂ, ಅವರು ರಾಜೀನಾಮೆ ನೀಡುವವರೆಗೂ ನಮ್ಮ ಹೋರಾಟ ನಿಲ್ಲಲ್ಲ

ಮೈಸೂರು, ಆ.9(ಎಸ್‌ಬಿಡಿ)– 'ಮೈಸೂರು ಚಲೋ' ಪಾದಯಾತ್ರೆಗೆ ನಮ್ಮ ಹೋರಾಟ ನಿಲ್ಲದು. ಸಿದ್ದರಾಮಯ್ಯನವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವವರೆಗೂ ಹೋರಾಟ ಮುಂದುವರೆಯಲಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು.

ಕಾಂಗ್ರೆಸ್ ಜನಾಂದೋಲನ ಸಮಾವೇಶ ಮುಕ್ತಾಯವಾದ ಬೆನ್ನಲ್ಲೇ ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾವು ಏನೂ ತಪ್ಪು ಮಾಡಿಲ್ಲ ಎಂದು ಬಾಯಿ ಬಡಿದುಕೊಳ್ಳುತ್ತಿರುವ ಕಾಂಗ್ರೆಸ್ ನಾಯಕರ ಸಮಾವೇಶ ಮುಗಿದಿದೆ. ಏನೋ ಬಾರಿ ತಯಾರಿ ಮಾಡಿಕೊಂಡಿದ್ದಾರೆ ಎಂದು ನಿರೀಕ್ಷಿಸಿದ್ದೆವು. ಆದರೆ ಆಡಿದ್ದೇ ಆಡೋ ಕಿಸಬಾಯಿ ದಾಸ ಎಂಬಂತೆ ಸಿದ್ದರಾಮಯ್ಯನವರು ಹೇಳಿದ್ದನ್ನೇ ಹೇಳಿದರು. ನಲವತ್ತು ವರ್ಷದ ರಾಜಕೀಯ ಜೀವನದಲ್ಲಿ ನಾನು ಶುದ್ಧಹಸ್ತನಾಗಿದ್ದೇನೆ. ನಾನು ಭ್ರಷ್ಟಾಚಾರೀನಾ? ನಾನು ತಪ್ಪು ಮಾಡುತ್ತೇನಾ? ಎಂದು ನೂರು ಬಾರಿ ಕೇಳಿದ್ದಾರೆ. ಹಣ ಕೊಟ್ಟು ಕರೆತಂದಿರುವ ಜನ ಸಹಜವಾಗಿ ಇಲ್ಲಾ ಎಂದಿದ್ದಾರೆ ಎಂದು ವ್ಯಂಗ್ಯವಾಡಿದರು.

ಸಿದ್ಧರಾಮಯ್ಯನವರು ಶುದ್ಧಹಸ್ತ, ಭ್ರಷ್ಟಾಚಾರಿ ಅಲ್ಲ ಎಂದಾದರೆ ಮುಡಾ ಪ್ರಕರಣವನ್ನು ಸಿಬಿಐ ಅಥವಾ ಲೋಕಾಯುಕ್ತ ಸಂಸ್ಥೆಗೆ ತನಿಖೆಗೆ ವಹಿಸಲು ಏಕೆ ಹೆದರುತ್ತಿದ್ದಾರೆ ಎಂಬುದು ನನ್ನ ಪ್ರಶ್ನೆ. ರಾಜ್ಯಪಾಲರು ನೀಡಿರುವ ಶೋಕಾಸ್ ನೋಟೀಸ್‌ಗೆ ಇಷ್ಟೊಂದು ಹೆದರಿದ್ದೀರಿ ಎಂದರೆ ಅವರೇನಾದರೂ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದರೆ ನಿಮ್ಮ ಕತೆ ಏನು?. ನಾವೂ ಕೂಡ ಮುಖ್ಯಮಂತ್ರಿಯವರ ಶ್ರೀಮತಿಯವರ ಬಗ್ಗೆ ಮಾತನಾಡುತ್ತಿಲ್ಲ. ಅವರಿಗೆ 14 ಸೈಟುಗಳನ್ನು ನೀಡಿರುವುದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹಸ್ತಕ್ಷೇಪವಿದೆ ಎಂಬುದು ನಮ್ಮ ವಾದ. ಅವರು ಸಮಾವೇಶದಲ್ಲೇ ರಾಜೀನಾಮೆ ಘೋಷಿಸುತ್ತಾರೆ ಎಂದುಕೊಂಡಿದ್ದೆವು. ನಮ್ಮ ಹೋರಾಟ ಪಾದಯಾತ್ರೆಗಷ್ಟೇ ಮುಗಿಯುವುದಿಲ್ಲ. ಸಿದ್ದರಾಮಯ್ಯನವರು ರಾಜೀನಾಮೆ ನೀಡಬೇಕು. ಸೈಟುಗಳನ್ನು ಮುಡಾಗೆ ವಾಪಸ್ ನೀಡಬೇಕು. 50:50 ಅನುಪಾತದಲ್ಲಿ ವಿತರಣೆಯಾಗಿರುವ ನೂರಾರು ನಿವೇಶನಗಳನ್ನೂ ವಾಪಸ್ ಪಡೆಯಬೇಕು. ಹಗರಣದ ತನಿಖೆಯಲ್ಲಿ ಸಿಬಿಐಗೆ ವಹಿಸಬೇಕು. ಅಲ್ಲಿಯವರೆಗೂ ನಮ್ಮ ಹೋರಾಟ ಮುಂದುವರೆಯಲಿದೆ ಎಂದರು.

ಚುನಾವಣೆಗೆ ಹಣ ಹೊಂದಿಸಲು ಹಗರಣ: ವಾಲ್ಮೀಕಿ ನಿಗಮದಲ್ಲಿ ಹಗರಣವೇ ಆಗಿಲ್ಲ ಎಂದು ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಸಮರ್ಥಿಸಿಕೊಂಡರು. ಆದರೆ ಇಡಿ ಪ್ರವೇಶವಾಗುತ್ತಿದ್ದಂತೆ 187 ಕೋಟಿ ಅಲ್ಲ 89 ಕೋಟಿ ರೂ. ಹಗರಣವಾಗಿದೆ ಎಂದು ತಪ್ಪೊಪ್ಪಿಕೊಂಡರು. ಈ ಹಗರಣದಲ್ಲಿ ನನ್ನ ಪಾತ್ರ ಏನಿದೆ ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ. ಆದರೆ ಹಣಕಾಸು ಸಚಿವರಾಗಿ ನಿಗಮದ ಅನುದಾನ ಬಳಕೆ ಬಗ್ಗೆ ಏಕೆ ಪರಿಶೀಲನೆ ಮಾಡಲಿಲ್ಲ. ಲೋಕಸಭಾ ಚುನಾವಣೆಗೆ ಹಣ ಹೊಂದಿಸಲು ಈ ಹಗರಣ ನಡೆಸಿದ್ದಾರೆ. ಈ ಹಣ ಹೇಗೆಲ್ಲಾ ವರ್ಗಾವಣೆಯಾಗಿದೆ ಎಂಬುದು ತನಿಖೆಯಲ್ಲಿ ಗೊತ್ತಾಗಿದೆ. ನಮ್ಮ ಹೋರಾಟವನ್ನು ಒಂದು ಹಂತದಲ್ಲಿ ತಾರ್ಕಿಕ ಅಂತ್ಯಕ್ಕೆ ತಂದಿದ್ದೇವೆ. ಈ ಸಂಬಂಧ ನಾನು 59 ದಾಖಲೆಗಳನ್ನು ನೀಡಿದ್ದೇನೆ. ಆದರೆ ಸಿಎಂ ಸುಳ್ಳು ಹೇಳಿ ಜನರನ್ನು ತಪ್ಪು ದಾರಿಗೆಳೆಯುತ್ತಿದ್ದಾರೆ ಎಂದು ಹೇಳಿದರು.

ಸುಳ್ಳನ್ನು ನೂರು ಬಾರಿ ಹೇಳಿ ಅದನ್ನೇ ಸತ್ಯ ಮಾಡಲು ಹೊರಟಿದ್ದಾರೆ ಎಂದು ನಮ್ಮ ಮೇಲೆ ಆರೋಪ ಮಾಡಿದ್ದಾರೆ. ಮುಡಾ ವಿಚಾರ ಹಗರಣವೇ ಅಲ್ಲ ಎನ್ನುತ್ತಿದ್ದಾರೆ. ಹಾಗಿದ್ದರೆ ನಾವು ಪಾದಯಾತ್ರೆ ಕೈಗೊಂಡ ಮಾರ್ಗದಲ್ಲಿ ಮುಂಚಿತವಾಗಿಯೇ ಏಕೆ ಬಾಯಿ ಬಡಿದುಕೊಂಡಿರಿ. ಮಾತೆತ್ತಿದರೆ ಬಿಜೆಪಿ ಹಗರಣವನ್ನು ಬಿಚ್ಚಿಡುತ್ತೇನೆ ಎನ್ನುತ್ತೀರಿ. ಆ ಕೆಲಸವನ್ನು ವಿಧಾನಸಭೆಯಲ್ಲೇ ಮಾಡಬಹುದಿತ್ತಲ್ಲವೇ?. ಶುದ್ಧ ಹಸ್ತ ಎನ್ನುತ್ತೀರಿ. ಹಾಗಾದರೆ ರೀಡೂ ಮಾಡಿದ್ದು ಯಾರು? ಹತ್ತು ವರ್ಷದ ಹಿಂದೆ ರಚಿಸಿದ ಕೆಂಪಣ್ಣ ಆಯೋಗದ ವರದಿ ಏನಾಯಿತು?. ಅದನ್ನಾದರೂ ಜನರ ಮುಂದಿಡಿ. ಇನ್ನು ಮುಡಾ ಹಗರಣದಲ್ಲಿ ನ್ಯಾ.ದೇಸಾಯಿ ಆಯೋಗ ವರದಿಗೆ 25–30 ವರ್ಷ ಕಾಯಬೇಕಾ? ಎಂದು ಪ್ರಶ್ನಿಸಿದರು.

ಈಗ ಬ್ಲಾಕ್ ಮೇಲರ್ರಾ: ಬಿಜೆಪಿ ನಾಯಕರ ವಿರುದ್ಧ ದೂರು ನೀಡಿದ್ದಾಗ ಟಿ.ಜೆ.ಅಬ್ರಹಾಂ ಅವರನ್ನು ಸಿದ್ದರಾಮಯ್ಯ ಹೊಗಳಿದ್ದರು. ಈಗ ಅವರ ವಿರುದ್ಧ ದೂರು ನೀಡಿದ್ದಕ್ಕೆ ಬ್ಲಾಕ್‌ಮೇಲರ್ ಎನ್ನುತ್ತಿದ್ದಾರೆ. ಹಾಗಾದರೆ ಸುಪ್ರೀಂಕೋರ್ಟ್‌ನಲ್ಲಿರುವ ಯಡಿಯೂರಪ್ಪ ವಿರುದ್ಧದ ಅಬ್ರಹಾಂ ದೂರನ್ನು ಸರ್ಕಾರ ವಾಪಸ್ ಪಡೆಯಲಿ. ಸಿದ್ದರಾಮಯ್ಯನವರದು ದ್ವಂದ ನೀತಿ. ನೀವು ಕ್ಲೀನ್ ಎಂದು ಜನ ಹೇಳಬೇಕೇ ಹೊರತು ನೀನೇ ಹೇಳಿಕೊಂಡು ಓಡಾಡುವುದಲ್ಲ. ನೀನೇ ಹಗರಣ ಮಾಡಿ ಸಿಕ್ಕಿಹಾಕಿಕೊಂಡಿದ್ದೀಯಾ. ಸಮಾಜವಾದಿ ಎಂದು ಹೇಳಿಕೊಂಡು ದುಬಾರಿ ವಾಚ್ ಪಡೆದಿದ್ದೀಯಾ ಎಂದು ಏಕವಚನದಲ್ಲೇ ಸಿದ್ದರಾಮಯ್ಯನವರನ್ನು ವಾಗ್ದಾಳಿ ನಡೆಸಿದರು.

ಸ್ವಜನ ಪಕ್ಷಪಾತ: ಅಕ್ರಮವಾಗಿ ದಲಿತರ ಜಮೀನನ್ನು ನುಂಗಿದ್ದೀರಿ. ಇಪ್ಪತ್ತೇಳು ಮಂದಿ ಹಕ್ಕುದಾರರಿರುವ ಜಮೀನಿಗೆ ಒಬ್ಬನೇ ಮಾಲೀಕ ಎಂದಿದ್ದೀರಿ. ಒಂದು ಸಾರಿ ನೋಟಿಫಿಕೇಷನ್ ಆದ ಮೇಲೆ ಡಿನೋಟಿಫಿಕೇಷನ್ ಸಾಧ್ಯವೇ ಇಲ್ಲ. ಸ್ವಜನ ಪಕ್ಷಪಾತ, ಕಬಳಿಕೆ ಸ್ಪಷ್ಟವಾಗಿ ಕಾಣುತ್ತಿದೆ. ಹೆಚ್.ಡಿ.ದೇವೇಗೌಡರ ಕುಟುಂಬದವರನ್ನು ಜಾಲಾಡುತ್ತೇನೆ ಎಂದು ಸಮಾವೇಶದಲ್ಲಿ ಧಮ್ಕಿ ಹಾಕಿದ್ದೀರಿ. ಹಾಗಾದರೆ ಅವರ ಜೊತೆ ಎರಡು ಬಾರಿ ಏಕೆ ಮೈತ್ರಿ ಮಾಡಿಕೊಂಡಿದ್ದೀರಿ. ಆಗ ಭಿಕ್ಷುಕರ ರೀತಿ ಏಕೆ ಅವರ ಮನೆ ಮುಂದೆ ನಿಂತಿದ್ದೀರಿ?. ಮುಡಾ ವಿಚಾರ ಬಂದಿದ್ದಕ್ಕೆ ನಮ್ಮ ವಿರುದ್ಧ ಆರೋಪ ಮಾಡುತ್ತಿದ್ದೀರಿ. ರಾಜಭವನ ದುರ್ಬಳಕೆ ಆರೋಪದಲ್ಲಿ ಹುರುಳಿಲ್ಲ. ಅವರು ರಾಜ್ಯಪಾಲರನ್ನೇ ನೇರವಾಗಿ ಕೇಳಲಿ?. ಮುಡಾ ಹಗರಣದಲ್ಲಿ ಯಾವ ಪಕ್ಷದವರು ಭಾಗಿಯಾಗಿದ್ದರೂ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಿ ಎಂದರು.

ಮಾಜಿ ಉಪಮುಖ್ಯಮಂತ್ರಿ ಡಾ.ಅಶ್ವತ್ಥ ನಾರಾಯಣ, ವಿಪಕ್ಷ ಉಪನಾಯಕ ಅರವಿಂದ ಬೆಲ್ಲದ್, ವಿಧಾನ ಪರಿಷತ್‌ನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಮುಖಂಡ ಬಂಗಾರು ಹನುಮಂತು, ಸ್ಥಳೀಯ ಮುಖಂಡರಾದ ಮಹೇಶ್ ರಾಜೇಅರಸ್, ಕೇಬಲ್ ಮಹೇಶ್, ಸಂತೋಷ್ ಕುಮಾರ್ ಸುದ್ದಿಗೋಷ್ಠಿಯಲ್ಲಿದ್ದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ವಿಪಕ್ಷ ನಾಯಕ ಆರ್.ಅಶೋಕ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಡಿಸೆಂಬರ್‌ನೊಳಗೆ ಸಿಎಂ ಆಗಬೇಕಂತೆ...

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೃದಯದಲ್ಲಿ ಸಿದ್ದರಾಮಯ್ಯ ಸಿಎಂ ಸ್ಥಾನದಿಂದ ಇಳಿಯಬೇಕು ಎಂಬ ಆಸೆಯಿದೆ. ಆದರೆ ಹೊರಗಡೆ ನಾನು ಅವರ ರಕ್ಷಣೆಗೆ ಬಂಡೆಯಾಗಿ ರಕ್ಷಣೆ ಕೊಡುತ್ತೇನೆ ಎನ್ನುತ್ತಿದ್ದಾರೆ. ಡಿಸೆಂಬರ್ ಒಳಗೆ ಸಿಎಂ ಆದರೆ ಆಗಬಹುದು, ಇಲ್ಲವಾದರೆ ಕಷ್ಟ ಎಂದು ಅಜ್ಜಯ್ಯನವರು ಹೇಳಿದ್ದಾಗಿ ಅವರೇ ಆಪ್ತರ ಬಳಿ ಹೇಳಿಕೊಂಡಿದ್ದಾರೆ ಎಂದು ಅಶೋಕ್ ತಿಳಿಸಿದರು. ಬಿಜೆಪಿ ನಾಯಕರ ವಿರುದ್ಧವೇ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ವಾಗ್ದಾಳಿ ಮುಂದುವರಿಸಿರುವ ಕುರಿತು ಪ್ರತಿಕ್ರಿಯಿಸಿ, ಈಗಾಗಲೇ ಕೇಂದ್ರದ ನಾಯಕರು ಅವರ ಜೊತೆ ಮಾತನಾಡಿದ್ದಾರೆ ಎಂದರು. ಪ್ರೀತಂಗೌಡ ನಮ್ಮ ಕಾರ್ಯಕರ್ತ. ಸಣ್ಣಪುಟ್ಟ ಮನಸ್ತಾಪ ಸಹಜ. ಎಲ್ಲವನ್ನೂ ಮರೆತು ಎರಡೂ ಪಕ್ಷದವರು ಹಾಲು– ಜೇನಿನಂತೆ ಬೆರೆಯುತ್ತೇವೆ ಎಂದು ಇದೇ ವೇಳೆ ವಿಶ್ವಾಸ ವ್ಯಕ್ತಪಡಿಸಿದರು.

ಚಾಮುಂಡಿ ತಾಯಿಗೆ ಡಿಕೆಶಿ ವಿಶೇಷ ಪೂಜೆ


ಶುಕ್ರವಾರ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಕಾಂಗ್ರೆಸ್ ಜನಾಂದೋಲನಾ ಸಭೆಗೂ ಮುನ್ನ ಡಿಸಿಎಂ ಡಿ.ಕೆ.ಶಿವಕುಮಾರ್, ಮಾಜಿ ಸಂಸದ ಡಿ.ಕೆ.ಸುರೇಶ್ ಚಾಮುಂಡೇಶ್ವರಿ ಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಶಾಸಕರಾದ ನೆಲಮಂಗಲ ಶ್ರೀನಿವಾಸ್, ಆನೇಕಲ್ ಶಿವಣ್ಣ, ಎಂಎಲ್‌ಸಿ ರವಿ, ಕೆಪಿಸಿಸಿ ಖಜಾಂಚಿ ವಿನಯ್ ಕಾರ್ತಿಕ್ ಇದ್ದರು.

ಜನಾಂದೋಲನ ಸಮಾವೇಶದಲ್ಲಿ ಪೊಲೀಸರ ತಪಾಸಣೆ


ಜನಾಂದೋಲನ ಸಮಾವೇಶದಲ್ಲಿ ಪೊಲೀಸರು ಮುನ್ನೆಚ್ಚರಿಕೆ ಕ್ರಮವಾಗಿ ಮಹಿಳೆ, ಪುರುಷ ಎಂಬ ಪ್ರತ್ಯೇಕ ಸಾಲು ನಿರ್ಮಿಸಿ, ಎಲ್ಲರನ್ನು ಪರಿಶೀಲಿಸಿದರು.

ಸಮಾವೇಶದಲ್ಲಿ ಕೈ ಕಾರ್ಯಕರ್ತರ ತಮಟೆ ಸದ್ದು



ಮೈಸೂರಿನ ಮಹಾರಾಜ ಕಾಲೇಜಿನ ಮೈದಾನದಲ್ಲಿ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಜನಾಂದೋಲನ ಸಮಾವೇಶಕ್ಕೆ ಕಾಂಗ್ರೆಸ್ ಕಾರ್ಯಕರ್ತರು ತಮಟೆ ಬಾರಿಕೊಂಡು ಮೈದಾನದ ಕಡೆ ಬರುತ್ತಿರುವುದು.

ಲೋಕೇಶ್ ಪಿಯಾ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಮೆರವಣಿಗೆ


ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಜನಾಂದೋಲನ ಸಮಾವೇಶಕ್ಕೆ ವಾರ್ಡ್ ನಂಬರ್ 50ರ ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ ನೇತೃತ್ವದಲ್ಲಿ ಐನೂರಕ್ಕೂ ಹೆಚ್ಚು ಮಂದಿ ನಗಾರಿ ಬಾರಿಸಿ, ಪಟಾಕಿ ಸಿಡಿಸುವ ಮೂಲಕ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಪಾದಯಾತ್ರೆಯ ಮೂಲಕ ಮಹಾರಾಜ ಮೈದಾನಕ್ಕೆ ತೆರಳಿದರು. ಇದೇ ಸಂದರ್ಭದಲ್ಲಿ ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ, ರಾಮು, ಸತೀಶ್, ಕುಮಾರ್, ಸ್ವಾಮಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮಾಡಿರುವ ಪಾಪಕ್ಕೆ ಬಿಜೆಪಿ, ಜೆಡಿಎಸ್ ಐದು ಬಾರಿ ಪಾದಯಾತ್ರೆ ಮಾಡಬೇಕು

ಇಂಧನ ಸಚಿವ ಕೆ.ಜೆ.ಜಾರ್ಜ್ ಟೀಕೆ



ಮೈಸೂರು, ಆ.9(ಜಿಎ)–ಬಿಜೆಪಿ ಮತ್ತು ಜೆಡಿಎಸ್‌ನವರು ಮಾಡಿರುವ ಪಾಪಕ್ಕೆ ರಾಜ್ಯದಾದ್ಯಂತ ಐದೈದು ಬಾರಿ ಪಾದಯಾತ್ರೆ ಮಾಡಬೇಕಿದೆ ಎಂದು ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು. ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಜನಾಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜನಾದೇಶವನ್ನು ಪಡೆದು ರಾಜ್ಯದಲ್ಲಿ ಐದು ಗ್ಯಾರಂಟಿಗಳನ್ನು ಜಾರಿಗೊಳಿಸುವ ಮೂಲಕ ಯಶಸ್ವಿಯಾಗಿ ಸರ್ಕಾರ ನಡೆಸುತ್ತಿರುವಾಗ ಭ್ರಷ್ಟಾಚಾರದಲ್ಲಿ ಹುಟ್ಟಿ ಬೆಳೆದಿರುವ ಮಿತ್ರ ಪಕ್ಷ ಪಾದಯಾತ್ರೆಯಿಂದ ಪಾಪ ದೋಷ ಮುಕ್ತವಾಗುತ್ತದೆ ಅಂದುಕೊಂಡಿದ್ದಾರೆ. ಆದರೆ ಜನತೆ ಈಗಾಗಲೇ ಅವರಿಗೆ ಬುದ್ಧಿ ಕಲಿಸಿದ್ದಾರೆ. ಎಷ್ಟೇ ಖರ್ಚಾದರೂ ಪರವಾಗಿಲ್ಲ. ಗ್ಯಾರಂಟಿ ಮುಂದುವರೆಸುತ್ತೇವೆ. ಬಿಜೆಪಿ, ಜೆಡಿಎಸ್ ಅವರು ಮಾಡಿರುವ ಪಾಪಕ್ಕೆ ರಾಜ್ಯದಾದ್ಯಂತ ಐದು ಬಾರಿ ಪಾದಯಾತ್ರೆ ಮಾಡಬೇಕಿದೆ ಎಂದು ವ್ಯಂಗ್ಯವಾಡಿದರು.

ಬಿಜೆಪಿ–ಜೆಡಿಎಸ್ ಜನರ ಸಮಸ್ಯೆ ಬದಿಗೊತ್ತಿ ಪಾದಯಾತ್ರೆ ನಡೆಸುತ್ತಿವೆ

ಮೈಸೂರು ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಾಗ್ದಾಳಿ

ಮೈಸೂರು,ಆ.9(ಎಂಟಿವೈ)– ವಾಮ ಮಾರ್ಗದಲ್ಲಿ ಮತ್ತೊಮ್ಮೆ ಅಧಿಕಾರದ ಚುಕ್ಕಾಣಿ ಹಿಡಿಯಬೇಕೆಂಬ ಹಂಬಲದಿಂದ ಬಿಜೆಪಿ–ಜೆಡಿಎಸ್ ನಾಯಕರು ಯಾವುದೇ ಹುರುಳಿಲ್ಲದ ಮುಡಾ ಹಗರಣವನ್ನು ಮುಂದಿಟ್ಟುಕೊಂಡು ಪಾದಯಾತ್ರೆ ನಡೆಸುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ವಾಗ್ದಾಳಿ ನಡೆಸಿದರು.

ಮೈಸೂರಲ್ಲಿ ನಡೆದ ಜನಾಂದೋಲನ ಸಮಾವೇಶದಲ್ಲಿ ಮಾತನಾಡಿದ ಅವರು, ಮುಡಾದಲ್ಲಿ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ಆಯೋಗ ರಚನೆ ಮಾಡಿದ್ದೇವೆ. ವಿಷಯನೇ ಇಲ್ಲದಿದ್ದರೂ ಪಾದಯಾತ್ರೆ ಮಾಡುತ್ತಿರುವವರಿಗೆ ಇನ್ನೇನು ಮಾಡಬೇಕು. ಸಿದ್ದರಾಮಯ್ಯ ಅವರು ನಲವತ್ತು ವರ್ಷಗಳ ಕಾಲ ಶುದ್ಧ ಮತ್ತು ಪ್ರಾಮಾಣಿಕ ರಾಜಕೀಯ ಮಾಡಿದ್ದಾರೆ. ಇಂತಹ ರಾಜಕಾರಣಿ ವಿರುದ್ಧ ಸುಳ್ಳು ಆರೋಪ ಮಾಡಿ ಪಾದಯಾತ್ರೆ ನಡೆಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಹೋರಾಟ ಮಾಡಿದ ದಿನದಂದು ಕಾಂಗ್ರೆಸ್ ಸಮಾವೇಶ ನಡೆಸಲಾಗುತ್ತಿದೆ. ಮೂಲಭೂತವಾದಿಗಳು ಸಂವಿಧಾನ ದಮನ ಮಾಡುವ ಕೆಲಸ ಮಾಡುತ್ತಿದ್ದಾರೆ. ಪಾದಯಾತ್ರೆಗೆ ಯಾವುದೇ ಅಡ್ಡಿ ಇಲ್ಲ. ಆದರೆ ಜನರ ಸಮಸ್ಯೆಗಳನ್ನು ಬದಿಗೊತ್ತಿ ಪಾದಯಾತ್ರೆ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.



ಡಿ.ದೇವರಾಜ ಅರಸು ಕಾಲದಲ್ಲಿ 'ಉಳುವವನೇ ಭೂಮಿ ಒಡೆಯ' ಕಾನೂನು ಜಾರಿಗೆ ತರಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದಲ್ಲಿ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಬಡವರ ಬದುಕು ಹಸನಾಗೊಳಿಸಲಾಯಿತು. ಇದನ್ನು ಸಹಿಸಲು ಆಗದೇ ಸಂಚು ನಡೆಸಲಾಗುತ್ತಿದೆ. ಪ್ರತಿಪಕ್ಷವಾಗಿ ಬಿಜೆಪಿ ಒಂದು ದಿನವೂ ಸಮರ್ಥವಾಗಿ ಕೆಲಸ ಮಾಡುತ್ತಿಲ್ಲ. ಅಧಿವೇಶನದಲ್ಲಿ ಒಂದು ದಿನವೂ ಚರ್ಚೆ ಮಾಡಲು ಅವಕಾಶ ಕೊಡದೆ ವಿರೋಧ ಮಾಡಿದರು. ಮಂಡಲ್ ಆಯೋಗದ ವರದಿಯನ್ನು ಜಾರಿಗೊಳಿಸಲು ಮುಂದಾದಾಗ ಕಮಂಡಲ ಹಿಡಿದು ಕೊಂಡು ಬೀದಿಗಿಳಿದರು. ಅಂತಹವರಿಗೆ ದಲಿತರು, ಹಿಂದುಳಿದ ವರ್ಗಗಳ ಬಗ್ಗೆ ಮಾತನಾಡುವ ಯಾವುದೇ ನೈತಿಕ ಹಕ್ಕಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಸವರಾಜ ಬೊಮ್ಮಾಯಿ ಸರ್ಕಾರದ ಆಡಳಿತದಲ್ಲಿ ಹತ್ತು ಸಾವಿರ ಕೋಟಿ ರೂ.ಗಳನ್ನು ಡೀಮ್ಡ್ ಹೆಸರಿನಲ್ಲಿ ಅನ್ಯ ಯೋಜನೆಗಳಿಗೆ ಬಳಕೆ ಮಾಡಿದ್ದಾರೆ. ಸಂವಿಧಾನದ ವಿರುದ್ಧ ಇದ್ದುಕೊಂಡು ಈಗ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಕೊರೊನಾ ಸಂದರ್ಭದಲ್ಲಿ ಅಂದಿನ ಆರೋಗ್ಯ ಸಚಿವ ಡಾ.ಸುಧಾಕರ್ ಹಗರಣ ನಡೆಸಿರುವುದನ್ನು ಬಿಜೆಪಿ ನಾಯಕ ಯತ್ನಾಳ್ ಎಳೆಎಳೆಯಾಗಿ ವಿವರಿಸಿದ್ದಾರೆ ಎಂದರು.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಮಾತನಾಡಿ, ಕೇಂದ್ರ ಸರ್ಕಾರ ಮೊದಲಿನಿಂದಲೂ ಕರ್ನಾಟಕವನ್ನು ನಿರ್ಲಕ್ಷಿಸುತ್ತಾ ಬಂದಿದೆ. ಕರ್ನಾಟಕಕ್ಕೆ ಯಾವುದೇ ಯೋಜನೆ ಕೊಡುಗೆ ನೀಡಿಲ್ಲ. ರಾಜಕೀಯ ದುರುದ್ದೇಶದಿಂದ ಮೋದಿ ಸರ್ಕಾರ ರಾಜ್ಯವನ್ನು ನಿರ್ಲಕ್ಷಿಸುತ್ತಿದೆ. ಕೇಂದ್ರದ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಅನುದಾನ ಕೊಡಲಿಲ್ಲವೇಕೆ? ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕರ್ನಾಟಕಕ್ಕೆ ಅನ್ಯಾಯ ಮಾಡಿದೆ. ರೈತರಿಗೆ ನೆರವಾಗುವ ಮಹದಾಯಿ ಹಾಗೂ ಮೇಕೆದಾಟು ಯೋಜನೆಗೆ ಮಂಜೂರಾತಿ ಕೊಡದೇ ದ್ರೋಹ ಬಗೆದಿದೆ ಎಂದು ವಾಗ್ದಾಳಿ ನಡೆಸಿದರು.

ದುರ್ಯೋಧನ, ಶಕುನಿಯಂತೆ ಕುತಂತ್ರ ರಾಜಕಾರಣದ ಭಾಗವಾಗಿ ಪಾದಯಾತ್ರೆ ಮಾಡುತ್ತಿದ್ದು, ಇದು ಕಾಂಗ್ರೆಸ್ ವಿರುದ್ಧ ವಲ್ಲ. ಗ್ಯಾರಂಟಿ ಯೋಜನೆಗಳ ವಿರುದ್ಧದ ಪಾದಯಾತ್ರೆ ಇದು. ಈ ಯೋಜನೆಗಳನ್ನು ದಮನ ಮಾಡಲು ಹುನ್ನಾರ ನಡೆದಿದೆ ಎಂದು ಆರೋಪಿಸಿದರು.

ಶಾಸಕ ಕೆ.ಹರೀಶ್‌ಗೌಡ ನೇತೃತ್ವದಲ್ಲಿ ಪಾದಯಾತ್ರೆ


ಮೈಸೂರು ನಗರದಲ್ಲಿ ಶುಕ್ರವಾರ ನಡೆದ ಜನಾಂದೋಲನ ಸಭೆಗೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರ ನೇತೃತ್ವದಲ್ಲಿ ನಗರದ ಕಾಂಗ್ರೆಸ್ ಕಚೇರಿಯಿಂದ ಮಹಾರಾಜ ಕಾಲೇಜಿನ ಮೈದಾನದವರೆಗೆ ಕಾರ್ಯಕರ್ತರು ಪಾದಯಾತ್ರೆಯಲ್ಲಿ ತೆರಳಿದರು. ಚಾಮರಾಜ ಕ್ಷೇತ್ರದ ಇಂದಿರಾಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡಕೊಪ್ಪಲು, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ರಾಂಪುಪ್ಪ, ಡೆಲ್ಲಿ ರವಿ, ಲತಾ ಚಿಕ್ಕಣ್ಣ ಮೋದಮಣಿ ಹಾಗೂ ಎಲ್ಲಾ ವಾರ್ಡ್‌ನ ಅಧ್ಯಕ್ಷರು ಇದ್ದರು.

ನಾಗಮಂಗಲ ಬಳಿ ಪ್ರತ್ಯೇಕ ಅಪಘಾತ: ಮೂವರು ಸಾವು, ಮೂವರಿಗೆ ಗಾಯ

ನಾಗಮಂಗಲ: ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ ಮೂವರು ಸಾವನ್ನಪ್ಪಿ, ಮಗು ಸೇರಿದಂತೆ ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನಲ್ಲಿ ಸಂಭವಿಸಿದೆ.

ಕಾರು ಪಲ್ಟಿಯಾಗಿ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಸಾಣೇನಹಳ್ಳಿ ನಿವಾಸಿ ಪ್ರವೀಣ್ ಅವರ ಪತ್ನಿ ಬಿಂದು(34), ಅವರ ತಾಯಿ ಕಾಳಮ್ಮ(75), ಲಾರಿ ಡಿಕ್ಕಿಯಿಂದ ಬೈಕ್ ಸವಾರ ಉಪ್ಪಾರ ಕೊಪ್ಪಲು ಗ್ರಾಮದ ನಾಗೇಶ್(35) ಸಾವನ್ನಪ್ಪಿದ್ದು, ತೀವ್ರವಾಗಿ ಗಾಯಗೊಂಡು ಕೋಮಾದಲ್ಲಿರುವ 2 ವರ್ಷದ ಮಗು ಚಾರ್ವಿಯನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಬೆಂಗಳೂರಿನಿಂದ ಚನ್ನರಾಯಪಟ್ಟಣಕ್ಕೆ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಸಾಣೇನಹಳ್ಳಿ ಗ್ರಾಮದ ಪ್ರವೀಣ್, ತಾರಾದೇವಿ, ಬಿಂದು, ಕಾಳಮ್ಮ ಮತ್ತು ಚಾರ್ವಿ ಅವರುಗಳು ಸ್ಯಾಂಟ್ರೋ (ಕೆಎ02 ಎಂಜೆ 103) ಕಾರಿನಲ್ಲಿ ತೆರಳುತ್ತಿದ್ದ ಸಮಯದಲ್ಲಿ ಪಲ್ಟಿಯಾಗಿ ಪ್ರವೀಣ್ ಅವರ ಪತ್ನಿ ಬಿಂದು (34), ತಾಯಿ ಕಾಳಮ್ಮ (75) ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. 2 ವರ್ಷದ ಮಗು ಚಾರ್ವಿ ತೀವ್ರ ಗಾಯಗೊಂಡು ಕೋಮಾ ಸ್ಥಿತಿಯಲ್ಲಿದೆ. ಚಾಲಕ ಪ್ರವೀಣ್ ಮತ್ತು ತಾರಾದೇವಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಬೆಳ್ಳೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್ ಸವಾರ ಸಾವು: ಮತ್ತೊಂದು ಪ್ರಕರಣದಲ್ಲಿ ಬೈಕ್‌ಗೆ ಲಾರಿ ಡಿಕ್ಕಿ ಹೊಡೆದು ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿದ ಘಟನೆ ತಾಲೂಕಿನ ಚೌಡೇನಹಳ್ಳಿ ಬಳಿಯಿರುವ ಕೃಷಿ ಉತ್ಪನ್ನ ಮಾರುಕಟ್ಟೆಯ ಬಳಿ ನಡೆದಿದೆ.

ಶುಕ್ರವಾರ ಮಧ್ಯಾಹ್ನ ಹೊಣಕೆರೆ ಹೋಬಳಿಯ ಉಪ್ಪಾರಕೊಪ್ಪಲು ಗ್ರಾಮದ ನಾಗೇಶ್(35) ತನ್ನ ಬೈಕ್‌ನಲ್ಲಿ ಬೆಳ್ಳೂರಿಗೆ ಹೋಗುತ್ತಿದ್ದ ಸಮಯದಲ್ಲಿ ಅಕ್ಕಿ ತುಂಬಿಕೊಂಡು ಬರುತ್ತಿದ್ದ ಲಾರಿ ಡಿಕ್ಕಿ ಹೊಡೆದ ಪರಿಣಾಮ ನಾಗೇಶ್ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಆದರೂ ಲಾರಿ ನಿಲ್ಲಿಸದೇ ಮತ್ತೆ ಕಲ್ಲು ದೇವನಹಳ್ಳಿ ಗ್ರಾಮಕ್ಕೆ ತೆರಳಲು ಸಿದ್ದವಾಗಿದ್ದ ಲಾರಿ ಚಾಲಕನನ್ನು ತಡೆದು ಸಾರ್ವಜನಿಕರು ಪೋಲೀಸರಿಗೆ ಒಪ್ಪಿಸಿದ್ದು ಪ್ರಕರಣ ಪಟ್ಟಣ ಠಾಣೆಯಲ್ಲಿ ದಾಖಲಾಗಿದೆ

ಹೌದು, ಹುಲಿಯಾ...




ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಕಾಂಗ್ರೆಸ್ ಜನಾಂದೋಲನ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕಟ್ಟಾ ಅಭಿಮಾನಿಯೊಬ್ಬ ಅವರ ಹೆಸರನ್ನು ಮೈಮೇಲೆ ಬರೆಸಿಕೊಂಡು ಓಡಾಡುವ ಮೂಲಕ ಗಮನ ಸೆಳೆದರು.

ಕಾರಣ ಇಲ್ಲದೆ ಪಾದಯಾತ್ರೆ ಮಾಡುವುದು ಬಿಜೆಪಿ–ಜೆಡಿಎಸ್ ನೋಡಿ ಕಲೀಬೇಕು

●ಗೃಹ ಸಚಿವ ಡಾ. ಪರಮೇಶ್ವರ್ ವ್ಯಂಗ್ಯ ●ಸಿದ್ದರಾಮಯ್ಯರ ದಕ್ಷ ಆಡಳಿತ ಸಹಿಸಲು ಇವರಿಗೆ ಸಾಧ್ಯವಾಗ್ತಿಲ್ಲ: ಜಮೀರ್ ●ಪಾದಯಾತ್ರೆ ನಡೆಸುತ್ತಿರುವವರ ಬಗ್ಗೆಯೂ ಜನರಿಗೆ ಅರಿವಿದೆ

ಮೈಸೂರು, ಆ.9(ಎಂಟಿವೈ)– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬದ ವಿರುದ್ಧ ಭೂ ಕಬಳಿಕೆಯ ಜಾಹೀರಾತು ನೀಡಿ ಆರೋಪದ ಸುರಿಮಳೆಗರೆದಿದ್ದ ಬಿಜೆಪಿ ನಾಯಕರು ಇದೀಗ ಯಾವುದೇ ದಾಖಲೆಯಿಲ್ಲದೆ, ಆಧಾರ ರಹಿತ ಆರೋಪ ಮಾಡಿ ರಾಜ್ಯ ಸರ್ಕಾರದ ವಿರುದ್ಧ ಪಾದಯಾತ್ರೆ ನಡೆಸುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಕಿಡಿಕಾರಿದ್ದಾರೆ.

ಮೈಸೂರಿನಲ್ಲಿ ಶುಕ್ರವಾರ ಕಾಂಗ್ರೆಸ್ ಜನಾಂದೋಲನ ಸಮಾವೇಶದಲ್ಲಿ ಮಾತನಾಡಿದ ಅವರು, ಈ ಹಿಂದೆ ಬಿಜೆಪಿ ನಾಯಕರು ಹೆಚ್.ಡಿ.ದೇವೇಗೌಡರು ಹಾಗೂ ಕುಟುಂಬ ಸದಸ್ಯರು ಭೂ ಕಬಳಿಕೆ ಮಾಡಿದ್ದಾರೆ ಎಂದು ಹೋರಾಟ ಮಾಡಿದ್ದರು. ಜಾಹೀರಾತು ನೀಡುವ ಮೂಲಕ ಭೂಕಬಳಿಕೆ ಆರೋಪ ಮಾಡಿದ್ದರು. ಇದೀಗ ಜೆಡಿಎಸ್‌ನೊಂದಿಗೆ ಸೇರಿಕೊಂಡು ಮುಡಾ ಹಗರಣದಲ್ಲಿ ಏನೋ ನಡೆದಿದೆ ಎಂದು ಬಿಂಬಿಸಲು ಪಾದಯಾತ್ರೆ ಮಾಡುತ್ತಿದ್ದಾರೆ. ಪ್ರತಿಭಟನೆ, ಪಾದಯಾತ್ರೆ ಮಾಡೋದು ನಿಮ್ಮ ಹಕ್ಕು. ನಿಮ್ಮ ಹೋರಾಟಕ್ಕೆ ನಮ್ಮ ಅಭ್ಯಂತರ ಏನಿಲ್ಲ. ಆದರೆ, ಯಾವ ಕಾರಣಕ್ಕೆ ನಿಮ್ಮ ಹೋರಾಟ ಎಂಬುದನ್ನು ತಿಳಿಸಬೇಕು. ನಾವು ಅನೇಕ ಪಾದಯಾತ್ರೆ, ಹೋರಾಟಗಳನ್ನು ಮಾಡಿದ್ದೇವೆ. ನಾವು ಜನರ ಅಭಿವೃದ್ಧಿ, ನಾಡಿನ ಒಳಿತಿಗಾಗಿ ಮಾಡಿದ್ದೇವೆ. ಸಿಎಂ ವಿರುದ್ಧ ಆರೋಪ ಮಾಡಲಿಕ್ಕೆ ನಿಮ್ಮಲ್ಲಿ ದಾಖಲಾತಿ ಇದ್ದರೆ ತೋರಿಸಿ ಎಂದು ಸವಾಲು ಹಾಕಿದರು.



ಬಿಜೆಪಿ– ಜೆಡಿಎಸ್ ಪಕ್ಷದವರು ಸರ್ಕಾರ ಉರುಳಿಸುವ ಮಾತನಾಡಿದ್ದಾರೆ. ಪಾದಯಾತ್ರೆ ಮಾಡುತ್ತಿರುವ ಅವರಿಗೆ ಕೆಲ ಪ್ರಶ್ನೆಗಳನ್ನು ಕೇಳಬೇಕಿದೆ. ಜನರಿಗಾಗಿ, ರಾಜ್ಯದ ಸಂಪತ್ತು ಉಳಿಸಲು ನಾವು ಪಾದಯಾತ್ರೆ ಮಾಡಿದ್ದೇವೆ. ಆದರೆ, ವಿಪಕ್ಷಗಳ ಪಾದಯಾತ್ರೆ ಕ್ಷುಲ್ಲಕ ಕಾರಣಗಳಿಗಾಗಿ ನಡೆದಿದೆ. 25ಕ್ಕೂ ಹೆಚ್ಚು ಹಗರಣ ವಿಪಕ್ಷಗಳ ಮೇಲಿದೆ ಎಂದು ವಾಗ್ದಾಳಿ ನಡೆಸಿದರು.

ವಾಲ್ಮೀಕಿ ನಿಗಮದ ಹಗರಣ ಹೊರಬಂದ ನಂತರ ನಾವೇ ಕ್ರಮ ತೆಗೆದುಕೊಂಡಿದ್ದೇವೆ. ಆದರೂ ಸಿಬಿಐ, ಇಡಿ ದುರುಪಯೋಗ ಮಾಡಿಕೊಂಡು ಸವಾರಿ ಮಾಡಿದ್ದಾರೆ. ಜಿಎಸ್ಟಿ, ತೆರಿಗೆ ಹಣ, ಅತಿವೃಷ್ಟಿ ಪರಿಹಾರ ಕೇಂದ್ರ ಸರ್ಕಾರ ಕೊಡಲಿಲ್ಲ. ಸುಪ್ರೀಂಕೋರ್ಟ್ ಚಾಟಿ ಬೀಸಿದ ಬಳಿಕ ಕೊಟ್ಟಿದ್ದಾರೆ. 5100 ಕೋಟಿ ರೂ. ಭದ್ರಾ ಮೇಲ್ದಂಡೆ ಯೋಜನೆಗೆ ಹಣ ಕೊಡಲಿಲ್ಲ. ಇದು ಕರ್ನಾಟಕದ ಮಟ್ಟಿಗೆ ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ಎಂದು ವಿಶ್ವಕ್ಕೆ ಗೊತ್ತಾಗುತ್ತಿದೆ ಎಂದು ಕಿಡಿಕಾರಿದರಲ್ಲದೆ, ಸರ್ಕಾರದ ವಿರುದ್ಧ ಮಾತನಾಡುವ ನೈತಿಕ ಹಕ್ಕು ಹೆಚ್.ಡಿ.ಕುಮಾರಸ್ವಾಮಿ ಅವರಿಗಿಲ್ಲ. ಈ ಹಿಂದೆ ತಮ್ಮದೇ ಕುಟುಂಬದ ವಿರುದ್ಧ ಆಸ್ತಿ ಕಬಳಿಕೆ ಜಾಹೀರಾತು ನೀಡಿದ ಬಿಜೆಪಿ ಜೊತೆ ಸೇರಿಕೊಂಡು ಹೋರಾಟ ಮಾಡುತ್ತಿರುವುದು ವಿಷಾದನೀಯ ಎಂದರು.

ಅಧಿಕಾರ ದುರುಪಯೋಗವಾಗಿದ್ಯಾ?: ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಮಾತನಾಡಿ, ಅಧಿವೇಶನದಲ್ಲಿ ಮುಖ್ಯಮಂತ್ರಿಗಳು ದಾಖಲೆ ಮುಂದಿಟ್ಟು ಮುಡಾ ಹಗರಣದ ಬಗ್ಗೆ ವಿವರಿಸಿದ್ದಾರೆ. ಆದರೆ ಬಿಜೆಪಿ ಮತ್ತು ಜೆಡಿಎಸ್‌ನವರು ಗದ್ದಲದ ನಡುವೆ ಪಾದಯಾತ್ರೆ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಸರ್ಕಾರದ ಯಶಸ್ಸನ್ನು ಸಹಿಸಿಕೊಳ್ಳಲಾಗದೇ, ಯಾವುದೇ ವಿಷಯ ಇಲ್ಲದೆ ಮುಡಾ ಹೆಸರನ್ನು ಇಟ್ಟುಕೊಂಡು ಪಾದಯಾತ್ರೆ ಮಾಡುತ್ತಿರುವ ಬಿಜೆಪಿ ನಾಯಕರಿಗೆ ನಾಚಿಕೆಯಾಗಬೇಕು. ಬಿಜೆಪಿ ಸರ್ಕಾರದ ಅವಧಿಯಲ್ಲಿಯೇ ಸಿದ್ಧರಾಮಯ್ಯ ಅವರ ಕುಟುಂಬಕ್ಕೆ ನಿವೇಶನ ಮಂಜೂರಾಗಿದೆ. ಈ ವಿಚಾರ ಬಿಜೆಪಿಗರಿಗೂ ತಿಳಿದಿದೆ. ಸಿಎಂ ಸಿದ್ದರಾಮಯ್ಯ ಅಧಿಕಾರ ದುರುಪಯೋಗ ಮಾಡಿಕೊಂಡು ನಿವೇಶನ ಪಡೆದಿಲ್ಲ. ಇದನ್ನು ಅರಿಯದೇ ಸಾರ್ವಜನಿಕರ ಮುಂದೆ ತಪ್ಪು ಮಾಹಿತಿ ನೀಡುವ ಮೂಲಕ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ ಎಂದು ಕಿಡಿಕಾರಿದರು.


ಕಪ್ಪುಚುಕ್ಕೆ ಇಲ್ಲದ ವ್ಯಕ್ತಿತ್ವ: ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಮಾತನಾಡಿ, ಮೈಸೂರು ಅಂದರೆ ನಾಲ್ವಡಿ ಅವರನ್ನು ಸ್ಮರಣೆ ಮಾಡಿಕೊಳ್ಳುತ್ತೇವೆ. ಮೈಸೂರು ಭಾಗದ ಸಿದ್ದರಾಮಯ್ಯ ಅವರು 40 ವರ್ಷಗಳ ಸುದೀರ್ಘ ರಾಜಕಾರಣದಲ್ಲಿ ಒಂದು ಕಪ್ಪು ಚುಕ್ಕೆ ಹೊಂದಿಲ್ಲ. ಸಿದ್ದರಾಮಯ್ಯ ಅತ್ಯಂತ ಪ್ರಭಾವಿ, ಹಿಂದುಳಿದ ವರ್ಗಗಳ ನಾಯಕ. ಹಾಗಾಗಿಯೇ ಬಿಜೆಪಿಯವರು ಸಿದ್ದರಾಮಯ್ಯ ವ್ಯಕ್ತಿತ್ವಕ್ಕೆ ಮಸಿ ಬಳಿಯಲು ಯತ್ನಿಸಿದ್ದಾರೆ. ಸಿಎಂ ಪತ್ನಿ ಹೆಸರಿಗೆ ಕಾನೂನು ಪ್ರಕಾರ ನಿವೇಶನ ಮಂಜೂರಾಗಿದ್ದರೂ ಜನರಲ್ಲಿ ತಪ್ಪು ಅಭಿಪ್ರಾಯ ಮೂಡಿಸಲು ಅಪಪ್ರಚಾರ ಮಾಡುತ್ತಿದ್ದಾರೆ. ಅಕ್ರಮವಾಗದೆ ಇದ್ದರೂ ರಾಜ್ಯಪಾಲರನ್ನು ಬಳಸಿಕೊಂಡು ನೋಟಿಸ್ ಕೊಡಿಸಲಾಗಿದೆ. ಹಿಂದುಳಿದ ವರ್ಗಗಳ ನಾಯಕರಾಗಿರುವ ಸಿದ್ದರಾಮಯ್ಯ ಎರಡು ಬಾರಿ ಸಿಎಂ ಆಗಿರುವುದನ್ನು ಸಹಿಸದೆ ಬಿಜೆಪಿ–ಜೆಡಿಎಸ್ ಪಾದಯಾತ್ರೆ ನಡೆಸುತ್ತಿದ್ದಾರೆ. ಅವರ ಆರೋಪದಲ್ಲಿ ಯಾವುದೇ ಹುರುಳಿಲ್ಲ ಎಂದು ಕಿಡಿಕಾರಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಈ ಹಿಂದೆ ಯಡಿಯೂರಪ್ಪ ಸಿಎಂ ಆಗಿದ್ದಾಗ ಏನು ಮಾಡಿದ್ದರು ಎಂದು ಎಲ್ಲರಿಗೂ ತಿಳಿದಿದೆ. ಬಿಜೆಪಿ ಮುಖಂಡ ಬಸನಗೌಡ ಪಾಟೀಲ್ ಯತ್ನಾಳ್ ಅವರೇ ವಿಜಯೇಂದ್ರ ಬಗ್ಗೆ ಮಾತನಾಡಿದ್ದಾರೆ. ಮೊದಲು ಬಿಜೆಪಿ ಸರ್ಕಾರದ ಹಗರಣಗಳ ಬಗ್ಗೆ ಜನರಿಗೆ ಉತ್ತರ ಕೊಡಬೇಕು ಎಂದು ಸವಾಲು ಹಾಕಿದರು.

ಮುಡಾ ಹಗರಣ ಮುಂದಿಟ್ಟುಕೊಂಡು 'ಮೈಸೂರು ಚಲೋ' ಪಾದಯಾತ್ರೆ ನಡೆಸಿದ ಬಿಜೆಪಿ–ಜೆಡಿಎಸ್ ದೋಸ್ತಿ ವಿರುದ್ಧ ರಣ ಕಹಳೆ ಮೊಳಗಿಸಿದ ಕಾಂಗ್ರೆಸ್

● ಸಿಎಂ ಸಿದ್ದರಾಮಯ್ಯ ಬೆನ್ನಿಗೆ ನಿಂತ ಕೈಪಡೆ ● ಮಹಾರಾಜ ಕಾಲೇಜು ಮೈದಾನದಲ್ಲಿ ಭಾರೀ ಶಕ್ತಿ ಪ್ರದರ್ಶನ

ಮೈಸೂರು,ಆ.9(ಎಂಟಿವೈ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಶೇ.50:50 ಅನುಪಾತದಡಿ ನಿವೇಶನ ಹಂಚಿಕೆ ವಿವಾದದಿಂದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬೆಂಗಳೂರಿನಿಂದ ಮೈಸೂರಿಗೆ ಬಿಜೆಪಿ–ಜೆಡಿಎಸ್ ನಡೆಸುತ್ತಿರುವ ಪಾದಯಾತ್ರೆಗೆ ಕಾಂಗ್ರೆಸ್ ಸೆಡ್ಡು ಹೊಡೆದಂತೆ ಇಂದು ಹಮ್ಮಿಕೊಂಡಿದ್ದ ಜನಾಂದೋಲನ ಸಮಾವೇಶದಲ್ಲಿ ಕೈ ಪಕ್ಷದ ನಾಯಕರು ಒಗ್ಗಟ್ಟು ಪ್ರದರ್ಶಿಸಿದರು.



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶುಕ್ರವಾರ ನಡೆದ ಜನಾಂದೋಲನ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಆಯೋಜಿಸಿದ್ದ ಜನಾಂದೋಲನ ಸಮಾವೇಶದಲ್ಲಿ ಬಹುತೇಕ ಶಾಸಕರು, ಸಚಿವರು, ಸಂಸದರು, ಮುಂಚೂಣಿ ಘಟಕದ ಪದಾಧಿಕಾರಿಗಳು ಸೇರಿದಂತೆ ಅಪಾರ ಸಂಖ್ಯೆಯ ಕಾರ್ಯಕರ್ತರು ಸಿದ್ದರಾಮಯ್ಯ ಅವರ ಬೆಂಬಲಕ್ಕೆ ನಿಲ್ಲುವ ಮೂಲಕ ಬಿಜೆಪಿ–ಜೆಡಿಎಸ್ ಮೈತ್ರಿ ಪಾದಯಾತ್ರೆ ವಿರುದ್ಧ ಸಂಘಟಿತ ಹೋರಾಟದ ಎಚ್ಚರಿಕೆ ಸಂದೇಶ ರವಾನಿಸಿದರು.

ಮುಡಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಹೆಸರಲ್ಲಿ 14 ನಿವೇಶನ ಪಡೆದುಕೊಂಡು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ. ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಆಗ್ರಹಿಸಿ ಬಿಜೆಪಿ–ಜೆಡಿಎಸ್ ಕಳೆದ 8 ದಿನಗಳಿಂದ ಬೆಂಗಳೂರಿಂದ ಮೈಸೂರಿಗೆ ಪಾದಯಾತ್ರೆ ಹಮ್ಮಿಕೊಂಡಿದ್ದವು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ. ಜಿ.ಪರಮೇಶ್ವರ್ ಸೇರಿದಂತೆ ಸಂಪುಟದ ಬಹುತೇಕ ಸಚಿವರು, ಶಾಸಕರು, ಸಂಸದರು ಪಾಲ್ಗೊಂಡಿದ್ದ ಜನಾಂದೋಲನ ಸಮಾವೇಶದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಅಪಾರ ಸಂಖ್ಯೆಯ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಪಾಲ್ಗೊಂಡು ಮೈತ್ರಿ ಪಾದಯಾತ್ರೆ ವಿರುದ್ಧ ಧ್ವನಿ ಎತ್ತಿದರು.

ಕಾರ್ಯಕರ್ತರಿಂದ ಕಿಕ್ಕಿರಿದು ತುಂಬಿದ್ದ ಸಮಾವೇಶವನ್ನು ಸಿಎಂ ಸಿದ್ದರಾಮಯ್ಯ ದೀಪ ಬೆಳಗುವ ಮೂಲಕ ಉದ್ಘಾಟಿಸಿದರು. ಬಳಿಕ ಬಿಜೆಪಿ–ಜೆಡಿಎಸ್ ಪಾದಯಾತ್ರೆ ವಿರುದ್ಧ ಕಹಳೆ ಮೊಳಗಿಸಿದರು. ನಂತರ ವೇದಿಕೆ ಮೇಲಿದ್ದ ಎಲ್ಲಾ ಸಚಿವರು, ಶಾಸಕರು ಪರಸ್ಪರ ಕೈ ಮೇಲೆತ್ತಿ ಒಗ್ಗಟ್ಟು ಪ್ರದರ್ಶಿಸಿದರು.

ಮೊಳಗಿದ ಹರ್ಷೋದ್ಘಾರ: ಸಮಾವೇಶದ ಕೇಂದ್ರ ಬಿಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ 2–3 ಬಾರಿ ಕಾರ್ಯಕರ್ತರಿಂದ ಮುಗಿಲು ಮುಟ್ಟುವ ಹರ್ಷೋದ್ಘಾರ ಮೊಳಗಿತು. ವೇದಿಕೆಗೆ ಸಿಎಂ ಸಿದ್ದರಾಮಯ್ಯ ಆಗಮಿಸುತ್ತಿದ್ದಂತೆ ಕಾರ್ಯಕರ್ತರು ಮುಗಿಲು ಮುಟ್ಟುವಂತೆ ಜಯಕಾರ–ಘೋಷಣೆ ಮೊಳಗಿಸಿದರು. ಬಳಿಕ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾಷಣದ ಆರಂಭದಲ್ಲಿ ಎಲ್ಲರಿಗೂ ಜೈಕಾರ ಹೇಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ.. ಎಂದು ಹೇಳುತ್ತಿದ್ದಂತೆ ಮತ್ತೊಮ್ಮೆ ಸತತ ಎರಡು ನಿಮಿಷ ಜೈಕಾರ, ಹರ್ಷೋದ್ಘಾರದ ಸದ್ದು ಕೇಳಿಬಂತು. ಆ ನಂತರ ಸಿದ್ದರಾಮಯ್ಯ ಅವರು ಭಾಷಣ ಮಾಡಲು ಬರುತ್ತಿದ್ದಂತೆ ಮತ್ತೊಮ್ಮೆ ಅಭಿಮಾನಿಗಳು ಸಿಳ್ಳೆ, ಕೇಕೆ ಹಾಕುವ ಮೂಲಕ ಸಂತಸ ವ್ಯಕ್ತಪಡಿಸಿದರು.

ಟೀಕೆಗಳ ನುಡಿಮುತ್ತು: ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡುವ ವೇಳೆ ಮೈತ್ರಿ ಪಕ್ಷಗಳ ನಾಯಕರು ಈ ಹಿಂದೆ ಪರಸ್ಪರ ಟೀಕೆ ಮಾಡಿಕೊಂಡಿದ್ದ ನುಡಿಮುತ್ತುಗಳ ವಿಡಿಯೋ ತುಣುಕುಗಳ ನೋಡಿ ಎಂದು ವಿಡಿಯೋ ಪ್ರದರ್ಶಿಸಲಾಯಿತು. ಈ ವೇಳೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ವಿರುದ್ಧ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ಬಿಜೆಪಿ ಮುಖಂಡ ಬಸನಗೌಡ ಪಾಟೀಲ್ ಯತ್ನಾಳ್ ಕಟು ಶಬ್ದಗಳಿಂದ ಟೀಕೆ ಮಾಡಿರುವ ವಿಡಿಯೋ, ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಯಡಿಯೂರಪ್ಪ ಸರ್ಕಾರ ಪತನದ ಸಂದರ್ಭದಲ್ಲಿ ಆಡಿದ ಮಾತು, ಸಿ.ಪಿ.ಯೋಗೇಶ್ವರ್, ಹೆಚ್‌ಡಿಕೆ ವಿರುದ್ಧ ಮಾಡಿದ್ದ ಟೀಕೆ ಹಾಗೂ ಮುಡಾ ಹಗರಣದ ಸಂಬಂಧ ನಡೆಸುತ್ತಿರುವ ಪಾದಯಾತ್ರೆ ವಿರುದ್ಧವೇ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದ್ದು ಮತ್ತು ಶಾಸಕ ಜಿ.ಟಿ.ದೇವೇಗೌಡರು ಮುಡಾ ನಿವೇಶನ ಹಂಚಿಕೆ ವಿರುದ್ಧದ ಹೇಳಿಕೆಯುಳ್ಳ ವಿಡಿಯೋ ಪ್ರದರ್ಶಿಸಲಾಯಿತು.


ಪುಸ್ತಕ ಬಿಡುಗಡೆ: ಮುಡಾ ಹಗರಣದಲ್ಲಿ ಮೈತ್ರಿ ಪಕ್ಷಗಳ ಆರೋಪಕ್ಕೆ ಸಂಬಂಧಿಸಿದಂತೆ ಜನರಿಗೆ ಸತ್ಯಾಂಶ ಹೇಳುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ಶಾಸಕ ಎ.ಎಸ್. ಪೊನ್ನಣ್ಣ ಪ್ರಕಟಿಸಿರುವ 'ಮುಖ್ಯಮಂತ್ರಿ ಸಿದ್ದರಾಮಯ್ಯ ನೂರಕ್ಕೆ ನೂರು ಕಳಂಕ ರಹಿತ' ಸತ್ಯಶೋದನಾ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಸಮಾವೇಶದಲ್ಲಿ ಸಚಿವರುಗಳಾದ ಡಾ.ಹೆಚ್.ಸಿ ಮಹದೇವಪ್ಪ ಕೆ.ಹೆಚ್ ಮುನಿಯಪ್ಪ, ಎಂ.ಬಿ ಪಾಟೀಲ್, ಕೆ.ಜೆ.ಜಾರ್ಜ್, ಸತೀಶ್ ಜಾರಕಿಹೊಳಿ, ಭೈರತಿ ಸುರೇಶ್, ರಾಮಲಿಂಗಾರೆಡ್ಡಿ, ಹೆಚ್.ಕೆ ಪಾಟೀಲ್, ಚಲುವರಾಯಸ್ವಾಮಿ, ಕೃಷ್ಣ ಬೈರೇಗೌಡ, ಲಕ್ಷ್ಮಿ ಹೆಬ್ಬಾಳ್ಕರ್, ದಿನೇಶ್ ಗುಂಡೂರಾವ್, ಜಮೀರ್ ಅಹ್ಮದ್, ಶರಣ ಪ್ರಕಾಶ್ ಪಾಟೀಲ್, ಪ್ರಿಯಾಂಕ್ ಖರ್ಗೆ, ರಹೀಂ ಖಾನ್, ಈಶ್ವರ್ ಖಂಡ್ರೆ, ಕೆ.ವೆಂಕಟೇಶ್, ಎಂ.ಸಿ ಸುಧಾಕರ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಜಿ.ಸಿ ಚಂದ್ರಶೇಖರ್, ವಸಂತ್ ಕುಮಾರ್, ವಿನಯ್ ಕುಲಕರ್ಣಿ, ತನ್ವೀರ್ ಸೇಠ್, ಮಂಜುನಾಥ್ ಭಂಡಾರಿ, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ, ವಿಧಾನಪರಿಷತ್ ಸದಸ್ಯರಾದ ಬಿ.ಕೆ.ಹರಿಪ್ರಸಾದ್, ಡಾ.ಡಿ.ತಿಮ್ಮಯ್ಯ ಹಿರಿಯ ನಾಯಕರಾದ ರಮೇಶ್ ಕುಮಾರ್, ಸಂಸದ ಸುನೀಲ್ ಬೋಸ್, ಮಾಜಿ ಸಂಸದ ಡಿ.ಕೆ. ಸುರೇಶ್, ಶಾಸಕರು ಮತ್ತಿತರರು ಪಾಲ್ಗೊಂಡಿದ್ದರು.

ರಾಜಕಾರಣದಿಂದ ಯಾರು ನಿವೃತ್ತಿ ಆಗುತ್ತಾರೆ ಎಂಬುದು ಕೆಲವೇ ದಿನಗಳಲ್ಲಿ ಗೊತ್ತಾಗಲಿದೆ

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮಾಜಿ ಸಿಎಂ ಯಡಿಯೂರಪ್ಪ ತಿರುಗೇಟು

ಮೈಸೂರು, ಆ. 9– ರಾಜಕಾರಣದಿಂದ ಯಾರು ನಿವೃತ್ತಿ ಆಗುತ್ತಾರೆ ಎಂಬುದು ಕೆಲವೇ ದಿನಗಳಲ್ಲಿ ಗೊತ್ತಾಗಲಿದೆ. ಸಿದ್ದರಾಮಯ್ಯ ಮನೆಗೆ ಹೋಗುವ ಕಾಲ ಹತ್ತಿರದಲ್ಲಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿರುಗೇಟು ನೀಡಿದರು.



ಚಾಮುಂಡಿ ಬೆಟ್ಟದಲ್ಲಿ ಶುಕ್ರವಾರ ದೇವರಿಗೆ ಪೂಜೆ ಸಲ್ಲಿಸಿದ ಸಂದರ್ಭ ಪತ್ರಕರ್ತರ ಜೊತೆ ಅವರು ಮಾತನಾಡಿದರು. ಯಡಿಯೂರಪ್ಪ ನಿವೃತ್ತಿ ಘೋಷಣೆ ಮಾಡಬೇಕು ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿ, ಮನೆಗೆ ಹೋಗುವ ಕಾಲ ಹತ್ತಿರ ಬಂದಾಗ ಅವರು ಇನ್ನೊಬ್ಬರ ಬಗ್ಗೆ ಹೇಳುವುದು ಸ್ವಾಭಾವಿಕ. ಮುಂದೆ ಯಾರು ನಿವೃತ್ತರಾಗುತ್ತಾರೆ. ನ್ಯಾಯಾಲಯಗಳಲ್ಲಿ ಏನೆಲ್ಲ ಆಗುತ್ತದೆ ಎಂಬುದು ಗೊತ್ತಾಗಲಿದೆ. ಆಗ ಯಾರು ನಿವೃತ್ತಿ ಆಗಬೇಕು ಎಂಬುದನ್ನು ತೀರ್ಮಾನ ಮಾಡೋಣ ಎಂದರು.

ಈ ದೇಶದ ಇತಿಹಾಸದಲ್ಲಿ ಒಬ್ಬ ಮುಖ್ಯಮಂತ್ರಿ ತಮ್ಮ ಮನೆಯವರಿಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಲೆ ಬಾಳುವ ನಿವೇಶನ ಕೊಟ್ಟ ಉದಾಹರಣೆ ಇದೆಯೇ? ಸ್ವಂತ ಹೆಂಡತಿಗೆ ಸೈಟು ಕೊಟ್ಟಿರುವುದು ಅಕ್ಷಮ್ಯ ಅಪರಾಧ ಎಂದರು. ನನ್ನ ವಿರುದ್ಧದ ಪೋಕ್ಸೊ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ತೀರ್ಮಾನ ಆದ ಬಳಿಕ ಸತ್ಯ ಸಂಗತಿ ಬಹಿರಂಗ ಆಗುತ್ತದೆ. ಅಲ್ಲಿಯವರೆಗೂ ನಾನು ಏನನ್ನೂ ಮಾತನಾಡುವುದಿಲ್ಲ. ಅಲ್ಲಿಯೇ ಸಿದ್ದರಾಮಯ್ಯ ಅವರಿಗೆ ತಕ್ಕ ಉತ್ತರ ಸಿಗಲಿದೆ ಎಂದು ತಿರುಗೇಟು ನೀಡಿದರು.

ಬಿಜೆಪಿ, ಜೆಡಿಎಸ್ ಹಮ್ಮಿಕೊಂಡಿರುವ ಜನಾಕ್ರೋಶ ಯಾತ್ರೆಯು ಇತಿಹಾಸದಲ್ಲೇ ಐತಿಹಾಸಿಕ ಪಾದಯಾತ್ರೆ, ಭ್ರಷ್ಟ ಸರ್ಕಾರ ಕಿತ್ತೊಗೆಯಲು ವಿಜಯೇಂದ್ರ ನೇತೃತ್ವದಲ್ಲಿ ಈ ಪಾದಯಾತ್ರೆ ನಡೆದಿದೆ ಜನರಿಂದ ನಿರೀಕ್ಷೆ ಮೀರಿ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದರು.

ಬಿಎಸ್‌ವೈ ಸಿಎಂ ಆಗಿದ್ದಾಗ ಪುತ್ರ ಬಿವೈವಿ ಫೋರ್ಜರಿ ಸಹಿ ಮೂಲಕ ಹಗರಣ

ತನಿಖೆ ನಡೆಸಲು ಬಿ.ಕೆ.ಹರಿಪ್ರಸಾದ್ ಆಗ್ರಹ

ಮೈಸೂರು, ಆ.9(ಎಂಟಿವೈ)– ಈ ಹಿಂದೆ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ವೇಳೆ ಅವರ ಪುತ್ರ ಬಿ.ವೈ.ವಿಜಯೇಂದ್ರ ಅನೇಕ ಕಡತಗಳಿಗೆ ಫೋರ್ಜರಿ ಸಹಿ ಮಾಡಿ ಹಗರಣ ನಡೆಸಿದ್ದು, ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ತನಿಖೆ ನಡೆಸುವಂತೆ ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಒತ್ತಾಯಿಸಿದ್ದಾರೆ.



ಮೈಸೂರಲ್ಲಿ ನಡೆದ ಜನಾಂದೋಲನ ಸಮಾವೇಶದಲ್ಲಿ ಮಾತನಾಡಿದ ಅವರು, ವಿಜಯೇಂದ್ರ ಮಾಡಿರುವ ಫೋರ್ಜರಿ ಸಹಿಗಳ ಪರಿಶೀಲನೆಗೆ ಎಫ್‌ಎಸ್‌ಎಲ್‌ಗೆ ಕಳುಹಿಸಬೇಕು ಎಂದು ಆಗ್ರಹಿಸಿದರು. ಬಿಜೆಪಿ–ಜೆಡಿಎಸ್ ನಾಯಕರು ಮುಡಾ ಹಗರಣವನ್ನು ಮುಂದಿಟ್ಟುಕೊಂಡು ಬೆಂಗಳೂರಿನಿಂದ ಮೈಸೂರಿನವರೆಗೂ ಪಾದಯಾತ್ರೆ ಮಾಡುತ್ತಿದ್ದಾರೆ. ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ರಾಜ್ಯದ ಕಾಂಗ್ರೆಸ್ ಸರ್ಕಾರಕ್ಕೆ ಮಸಿ ಬಳಿಯುವ ಕೆಲಸ ಮಾಡುತ್ತಿದೆ.

ಈ ಹಿಂದಿನಿಂದಲೂ ಬಿಜೆಪಿಯವರು ಕಾಂಗ್ರೆಸ್ ವಿರುದ್ಧ ಅಪಪ್ರಚಾರ ಮಾಡುವ ಮೂಲಕ ಕಾಂಗ್ರೆಸ್ ವರ್ಚಸ್ಸು ಕುಗ್ಗಿಸುವ ಸಂಚನ್ನು ಮಾಡುತ್ತಲೇ ಇವೆ. ಭ್ರಷ್ಟಾಚಾರದ ವಿರುದ್ಧ ಮಾತನಾಡಲು ಬಿಜೆಪಿಗರಿಗೆ ನೈತಿಕ ಹಕ್ಕಿಲ್ಲ. ಆದರೂ, ರಾಜ್ಯ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪಿತೂರಿ ನಡೆಸುತ್ತಿದ್ದಾರೆ ಎಂದು ಕಿಡಿಕಾರಿದರು.

ಆಪರೇಷನ್ ಕಮಲದ ಮೂಲಕ ಅಧಿಕಾರಕ್ಕೆ ಬಂದ ಬಿ.ಎಸ್. ಯಡಿಯೂರಪ್ಪ ಪ್ರಪಂಚದಲ್ಲಿಯೇ ಕುಖ್ಯಾತಿ ಪಡೆದಿದ್ದಾರೆ. ಇದೀಗ ಮರಿ ಯಡಿಯೂರಪ್ಪ ಪಾದಯಾತ್ರೆ ಮಾಡಿಕೊಂಡು ಬರುತ್ತಿದ್ದಾರೆ. ಯಡಿಯೂರಪ್ಪ ಸಿಎಂ ಆಗಿದ್ದಾಗ ನೂರಾರು ಕಡತಗಳಿಗೆ ವಿಜಯೇಂದ್ರ ಸಹಿ ಮಾಡಿ, ಹಗರಣ ನಡೆಸಿದ್ದಾರೆ. ಮುಖ್ಯಮಂತ್ರಿ ಸಹಿಯನ್ನು ಮಗ ಮಾಡಿರುವುದು ಅಪರಾಧ ಎಂದರು.

ಸ್ವತಂತ್ರ ಭಾರತದ ಇತಿಹಾಸದಲ್ಲಿ ಇಂದು ಪವಿತ್ರವಾದ ದಿನ. 83 ವರ್ಷಗಳ ಹಿಂದೆ ಮಹಾತ್ಮಗಾಂಧಿ ಜಿ ಅವರ ನೇತೃತ್ವದಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಲು ಕರೆಕೊಟ್ಟಾಗ ಲಕ್ಷಾಂತರ ಜನ ಮನೆ–ಮಠ ತೊರೆದು ಹೋರಾಟದಲ್ಲಿ ಭಾಗಿಯಾಗಿದ್ದರು. ಅದೇ ರೀತಿಯಲ್ಲಿ ಕಾಂಗ್ರೆಸ್ ಜನಾಂದೋಲನದ ಮೂಲಕ ಬಿಜೆಪಿ ವಿರುದ್ಧ ಹೋರಾಟ ಮಾಡುತ್ತಿದೆ. ಕಾಂಗ್ರೆಸ್ ವಿರುದ್ಧ ಬಿಜೆಪಿಯವರು ಅಪಪ್ರಚಾರ ಮಾಡಿ, ಸುಳ್ಳು ಹೇಳಿ ಕೊಂಡು ಬಂದರೂ ಕಾಂಗ್ರೆಸ್ ವಿರುದ್ಧ ಜಯಗಳಿಸಲು ಸಾಧ್ಯವಾಗಲಿಲ್ಲ. ಪಾದಯಾತ್ರೆ ಮಾಡುತ್ತಿರುವ ಬಿಜೆಪಿ–ಜೆಡಿಎಸ್ ನಾಯಕರು ಮದ್ದೂರಿನಲ್ಲಿ ಧ್ವಜ ಸತ್ಯಾಗ್ರಹದ ಮುಂದೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ರಾಷ್ಟ್ರ ಭಕ್ತಿಯ ಹೆಸರಿನಲ್ಲಿ ಮಂಕುಬೂದಿ ಎರಚುತ್ತಿದ್ದಾರೆ. ಮೀಸಲಾತಿ ಕೊಟ್ಟಾಗಲೂ ಇದೇ ಶಕ್ತಿಗಳು ಹೋರಾಟ ಮಾಡಿದರು. ಸಂವಿಧಾನದ ವಿರುದ್ಧ ಹೇಳಿಕೆಗಳನ್ನು ಕೊಡುವ ಬಿಜೆಪಿಯಿಂದ ಜನರ ಹಿತ ಕಾಪಾಡಲು ಸಾಧ್ಯವಿಲ್ಲ ಎಂದು ಕಿಡಿಕಾರಿದರು.

ರಾಜ್ಯದ ಅಭಿವೃದ್ಧಿಗೆ ಪಾದಯಾತ್ರೆ ಮಾಡಿ, ಕ್ಷುಲಕ ಕಾರಣಕ್ಕೆ ಬೇಡ

ಮೈಸೂರು, ಆ.9(ಜಿಎ)–ರಾಜ್ಯದ ಅಭಿವೃದ್ಧಿಗಾಗಿ ಪಾದಯಾತ್ರೆ ಮಾಡಿ. ಅದು ಬಿಟ್ಟು ಕ್ಷುಲಕ ಕಾರಣಕ್ಕೆ ಮಾಡಬೇಡಿ ಎಂದು ಆಹಾರ ಸಚಿವ ಕೆ.ಹೆಚ್. ಮುನ್ನಿಯಪ್ಪ ತಿಳಿಸಿದರು.



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಜನಾಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ನಡೆದ ಚುನಾವಣೆಯಲ್ಲಿ ರಾಜ್ಯದ ಮತದಾರರು 136 ಶಾಸಕರನ್ನು ಆಯ್ಕೆ ಮಾಡಿ ಸುಭದ್ರ ಸರ್ಕಾರ ನಡೆಸಬೇಕು ಎಂದು ಜನಾದೇಶ ನೀಡಿದ್ದಾರೆ. ಅದರಂತೆ ಚುನಾವಣೆಯಲ್ಲಿ ಪ್ರಣಾಳಿಕೆಯಲ್ಲಿ ನೀಡಿರುವ ಐದು ಗ್ಯಾರಂಟಿಯನ್ನು ಶೇ.80 ಜನರಿಗೆ ತಲುಪಿಸಿ, ನುಡಿದಂತೆ ನಡೆದಿದ್ದೇವೆ ಎಂದರು.

ಈ ರೀತಿ ಗ್ಯಾರಂಟಿ ನೀಡಿರುವುದು ಭಾರತದಲ್ಲಿ ನೀಡಿರುವುದು ಕರ್ನಾಟಕದಲ್ಲಿ ಮಾತ್ರ. ಐಕ್ಯತ ಸಮಾವೇಶ ಮಾಡುವ ಮೂಲಕ ರಾಜ್ಯದಲ್ಲಿ ಪ್ರಜಾಪ್ರಭುತ್ವ ಉಳಿಯಲು ನಾವೆಲ್ಲರೂ ಒಗ್ಗೂಡಬೇಕಿದೆ ಎಂದು ಸಂದೇಶ ರವಾನಿಸಿ, ಈ ಕಾರ್ಯಕ್ರಮವನ್ನು ಮಲ್ಲಿಕಾರ್ಜುನ ಖರ್ಗೆ ಅವರು ಚಾಲನೆ ನೀಡಿದರು. ಅದಕ್ಕೆ ತಕ್ಕಂತೆ ಉತ್ತಮ ಫಲಿತಾಂಶ ಬಂದಿದೆ ಎಂದರು.

ಸಿದ್ದರಾಮಯ್ಯ ಅವರ ನಾಯಕತ್ವದಲ್ಲಿ ರಾಜ್ಯ 4.50 ಕೋಟಿ ಜನತೆಗೆ ಗ್ಯಾರಂಟಿ ನೀಡಿದ್ದಾರೆ. ಕೇವಲ ಯಾವುದೋ ಒಂದು ಸೈಟಿನ ವಿಷಯದಲ್ಲಿ ಸಿಲುಕಿಸಿ ಅವರಿಗೆ ರಾಜೀನಾಮೆ ಕೇಳಿ ಪಾದಯಾತ್ರೆ ಮಾಡುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ರಾಜ್ಯ ಬೇಕಿರುವ ಯೋಜನೆಗಳಿಗೆ ಪಾದಯಾತ್ರೆ ಮಾಡಿ. ಕ್ಷುಲಕ ಕಾರಣಕ್ಕೆ ಪಾದಯಾತ್ರೆ ಮಾಡಬೇಡಿ. ಸಿದ್ದರಾಮಯ್ಯ ಅವರೊಟ್ಟಿಗೆ ಕಾಂಗ್ರೆಸ್ ಇದೆ. ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಲು ಸಾಧ್ಯವಿಲ್ಲ. ರಾಜ್ಯದ ಅಭಿವೃದ್ಧಿ ಮಾಡಲು ನಮಗೆ ಅವಕಾಶ ನೀಡಿದಂತೆ. ಕೇಂದ್ರದಲ್ಲಿ ನಿಮಗೆ ಅಧಿಕಾರ ನೀಡಿದ್ದಾರೆ. ಅದನ್ನು ಬಳಸಿಕೊಂಡು ಸಂಸದರು ದೇಶದ ಅಭಿವೃದ್ಧಿಗೆ ಶ್ರಮಿಸಿ ಜನಾದೇಶಕ್ಕೆ ಬೆಲೆ ನೀಡಿ ಎಂದರು.

ನೈಪುಣ್ಯದಲ್ಲಿ ಜಯಚಾಮರಾಜ ಒಡೆಯರ್‌ರ ಸ್ಮರಣೆ

ಮೈಸೂರು, ಆ.9– ಜಯಚಾಮರಾಜ ಒಡೆಯರ್ ಅವರು ತಮ್ಮ ರಾಜತ್ವವನ್ನು ತೊರೆದು ಅಖಂಡ ಭಾರತದ ಅಸ್ತಿತ್ವಕ್ಕೆ ಮೈಸೂರು ಸಂಸ್ಥಾನವನ್ನು ಸಮರ್ಪಿಸಿದ ದಿನ (ಆ.9) ವನ್ನು ಕನಕದಾಸನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ಸ್ಮರಿಸಲಾಯಿತು.



ಈ ಸಂಬಂಧ ವಿದ್ಯಾರ್ಥಿಗಳಿಗೆ ಇತಿಹಾಸದ ದಿನ ನೆನಪು ಮಾಡಿಕೊಟ್ಟ ಸಂಸ್ಥೆಯ ಅಧ್ಯಕ್ಷ ಆರ್. ರಘು, ಸ್ವಾತಂತ್ರ್ಯದ ಪರಿಕಲ್ಪನೆಯಲ್ಲಿ ಗಾಂಧೀಜಿ ಕಲ್ಪಿಸಿದ ರಾಮರಾಜ್ಯವನ್ನು ಅಕ್ಷರಶಃ ಮೈಸೂರು ಸಂಸ್ಥಾನದಲ್ಲಿ ನಿರ್ಮಿಸಿ, ಆಳಿದ ಮೈಸೂರು ರಾಜವಂಶಸ್ಥರು. ಅದರಲ್ಲೂ ರಾಜಋಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಗಳನ್ನು ಸ್ಮರಿಸಿದರು.

ಪ್ರಜಾಪ್ರಭುತ್ವವನ್ನು ಅಕ್ಷರಶಃ ಗೌರವಿಸುತ್ತಿದ್ದ ರಾಜಮನೆತನದ ಪರಂಪರೆಯ ಸಂಕೇತವಾಗಿ ಜಯಚಾಮರಾಜ ಒಡೆಯರ್ ಅವರು ಭಾರತದೊಂದಿಗೆ ಸಂಸ್ಥಾನವನ್ನು ವಿಲೀನಗೊಳಿಸಿ ಭಾರತ ಗಣರಾಜ್ಯವಾಗಲು ಕೊಡುಗೆ ನೀಡಿದ ದೇಶದ ಪ್ರಪ್ರಥಮ ದೊರೆ ಎನಿಸಿಕೊಂಡರು. ಇಂತಹ ಆದರ್ಶ ದೊರೆಗಳು ಈ ಭಾಗದಲ್ಲಿ ಆಡಳಿತ ನಡೆಸಿದ್ದು ಮೈಸೂರಿಗರ ಹೆಮ್ಮೆ ಎಂದು ಹೇಳಿದ ಅವರು ಸ್ವಾತಂತ್ರ್ಯ ದಿನಾಚರಣೆಗೆ ಮುನ್ನ ಆಗಸ್ಟ್ 9 ರಂದು ಜಯಚಾಮರಾಜ ಒಡೆಯರ್ ಅವರು ಪ್ರಜಾಪ್ರಭುತ್ವ ಮತ್ತು ಭಾರತ ನಿರ್ಮಾಣಕ್ಕೆ ತಮ್ಮನ್ನು ಸಮರ್ಪಿಸಿಕೊಂಡ ದಿನವನ್ನು ಮೈಸೂರು ಭಾಗದಲ್ಲಿ ಗೌರವಿಸಿ, ಸ್ಮರಿಸಿ ಅವರ ಇತಿಹಾಸವನ್ನು ಶಾಲಾ ವಿದ್ಯಾರ್ಥಿಗಳಿಗೆ ತಿಳಿಸಿಕೊಡಬೇಕೆಂದು ಹೇಳಿದರು.

ಇದೇ ಸಂದರ್ಭದಲ್ಲಿ 'ಚಿಣ್ಣರ ಚಿತ್ತದಲ್ಲಿ ಭಾರತ 'ಎಂಬ ಪರಿಕಲ್ಪನೆಯಲ್ಲಿ ಆ.15ರ ಸ್ವತಂತ್ರ ದಿನಾಚರಣೆಯ ಸಡಗರದ ನೆನಪಿಗಾಗಿ ಚಿತ್ರಕಲಾ ಸ್ಪರ್ಧೆ ಏರ್ಪಡಿಸಿ ಮಕ್ಕಳಲ್ಲಿ ರಾಷ್ಟ್ರಭಕ್ತಿ, ಇತಿಹಾಸದ ಕುರಿತು ಜಾಗೃತಿ ಮಾಡಿಸಲು ಪ್ರೇರೇಪಿಸಲಾಯಿತು. ಚರ್ಚಾಸ್ಪರ್ಧೆ ಸೇರಿದಂತೆ ವಿವಿಧ ಸ್ಪರ್ಧೆ ಏರ್ಪಡಿಸಿ ಅರ್ಥಪೂರ್ಣವಾಗಿ ಸ್ವಾತಂತ್ರ್ಯ ದಿನ ಆಚರಿಸಲು ಚಾಲನೆ ನೀಡಲಾಯಿತು. ಕಾರ್ಯಕ್ರಮವನ್ನು ಶಾಲೆಯ ಅಧ್ಯಕ್ಷ ಆರ್.ರಘು ಅವರು ಜಯಚಾಮ ರಾಜೇಂದ್ರ ಒಡೆಯರ್ ಅವರ ಭಾವಚಿತ್ರಕ್ಕೆ ಪುಷ್ಪಗಳನ್ನು ಅರ್ಪಿಸುವ ಮೂಲಕ ಉದ್ಘಾಟಿಸಿದರು. ಶಾಲೆಯ ಅಕಾಡೆಮಿಕ್ ಡೀನ್ ಶ್ರೀಮತಿ ವಿಜಯಾ ಅಯ್ಯರ್, ಪ್ರಾಂಶುಪಾಲೆ ಶ್ರೀಮತಿ ಶಾಂತಿನಿ ಜೆರಾಲ್ಡ್, ಶಿಕ್ಷಣ ಸಂಯೋಜಕಿ ಶ್ರೀಮತಿ ಭಾವನಾ ಶ್ರೀಕಾಂತ್ ಮತ್ತು ಪಿ.ಆರ್.ಒ ಶ್ರೀಮತಿ ಅಶ್ವಿನಿ ಶಂಕರ್ ಅವರು ಉಪಸ್ಥಿತರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸಿಎನ್‌ಸಿ ಧರಣಿ

ಮಡಿಕೇರಿ, ಆ.9–ವಿಶ್ವ ಸಂಸ್ಥೆಯ ಜಾಗತಿಕ ಆದಿಮ ಸಂಜಾತ ಜನಾಂಗಗಳ ಹಕ್ಕುಗಳ ದಿನಾಚರಣೆ ಅಂಗವಾಗಿ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಕಾರ್ಯಕರ್ತರು ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಶಾಂತಿಯುತ ಧರಣಿ ಸತ್ಯಾಗ್ರಹ ನಡೆಸಿದರು.



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಎದುರು ಸಿಎನ್‌ಸಿ ಕಾರ್ಯಕರ್ತರು ಕೊಡವ ಬುಡಕಟ್ಟು ಸಮುದಾಯದ ಪ್ರಾಚೀನ ಪರಿಕರಗಳ ಪ್ರದರ್ಶಿಸುವ ಮೂಲಕ ಧರಣಿ ನಡೆಸಿದರು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ನಡೆದ ಧರಣಿಯಲ್ಲಿ ಸಾಂವಿಧಾನಿಕ ಹಕ್ಕುಗಳಿಂದ ವಂಚಿತವಾಗಿರುವ ಆದಿಮಸಂಜಾತ ಕೊಡವ ಬುಡಕಟ್ಟು ಜನರ ಹಕ್ಕೊತ್ತಾಯದ ಮಂಡಿಸಲಾಯಿತು.

ಕೊಡವರು ಪವಿತ್ರ ಕೊಡವ ನೆಲದ ಮೂಲನಿವಾಸಿ ಆದಿಮ ಸಂಜಾತ ಬುಡಕಟ್ಟು ಸಮುದಾಯದವರಾಗಿದ್ದು, ಏಕೈಕ ನೆಲೆ ಕೊಡವ ಲ್ಯಾಂಡ್ ಕೊಡವರ ಸಾಂಪ್ರದಾಯಿಕ ಹಾಗೂ ಅವಿಭಾಜ್ಯ ಮಾತೃ ಭೂಮಿಯಾಗಿದೆ. ಕೊಡವರ ಜನ್ಮಭೂಮಿ ಈ ಭೂಮಂಡಲದಷ್ಟೇ ಪ್ರಾಚೀನವಾಗಿದೆ. ಕೊಡವ ಬುಡಕಟ್ಟು ಜನಾಂಗ ಮಾನವ ಜನಾಂಗದಷ್ಟೇ ಹಳೆಯದಾಗಿದೆ. ಈ ಮಣ್ಣಿನಲ್ಲಿ ನಮ್ಮ ಐತಿಹಾಸಿಕ ನಿರಂತರತೆಯನ್ನು ಶಾಸನಬದ್ಧವಾಗಿ ಅನುಮೋದಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಕೊಡವರ ಆವಾಸಸ್ಥಾನ, ಕೊಡವ ಲ್ಯಾಂಡ್, ಪಾರಂಪರಿಕ ಪ್ರಾಚೀನ ಭೂಮಿಗಳು, ರಾಜಕೀಯ–ಸಾಂಸ್ಕೃತಿಕ ಹಕ್ಕುಗಳು, ಜಾನಪದ ಗುರುತು, ದೈವಿಕ ವನಗಳು, ಮಂದ್‌ಗಳು, ದೇವಟ್ ಪರಂಬು ಕೊಡವ ನರಮೇಧದ ಸ್ಮಾರಕ, ದುರಂತ ಸ್ಥಳ ಮತ್ತು ಕೊಡವರ ಪವಿತ್ರ ತೀರ್ಥಯಾತ್ರ ಕ್ಷೇತ್ರ ತಲಕಾವೇರಿಯನ್ನು ಅಂತಾರಾಷ್ಟ್ರೀಯ ಕಾನೂನಿನ ಪ್ರಕಾರ ಆದಿಮಸಂಜಾತರ ಹಕ್ಕುಗಳಡಿಯಲ್ಲಿ ರಕ್ಷಿಸಬೇಕು. ಆಂತರಿಕ ರಾಜಕೀಯ ಸ್ವ–ನಿರ್ಣಯ ಹಕ್ಕುಗಳನ್ನು ಒಳಗೊಂಡಂತೆ ಎಲ್ಲಾ ವಿಧಿವಿಧಾನಗಳು ಕೊಡವ ಬುಡಕಟ್ಟು ಸಮುದಾಯಕ್ಕೆ ಸಂಪೂರ್ಣ ಮತ್ತು ಪರಿಪೂರ್ಣವಾಗಿ ಅನ್ವಯವಾಗಲಿದ್ದು, ಈ ಕುರಿತು ಸಂವಿಧಾನಾತ್ಮಕ ಕಸರತ್ತಿಗೆ ಒತ್ತು ನೀಡಬೇಕೆಂದು ಒತ್ತಾಯಿಸಿದರು.

ಇದೇ ವೇಳೆ ಆದಿಮಸಂಜಾತ ಕೊಡವ ಬುಡಕಟ್ಟು ಸಮುದಾಯದ ಪ್ರಾಚೀನ ಪರಿಕರಗಳ ಪ್ರದರ್ಶಿಸು ಮೂಲಕ ಧರಣಿ ನಡೆಸಿದರು. ಧರಣಿಯಲ್ಲಿ ಕಲಿಯಂಡ ಮೀನಾ ಪ್ರಕಾಶ್, ಚೋಳಪಂಡ ಜ್ಯೋತಿ ನಾಣಯ್ಯ, ಮುದ್ದಿಯಡ ಲೀಲಾವತಿ, ಕಲಿಯಂಡ ಪ್ರಕಾಶ್, ಅಳ್ಮಂಡ ಜೈ, ಪಟ್ಟಮಾಡ ಕುಶಾ, ಬೇಪಡಿಯಂಡ ದಿನು, ಅಜ್ಜಿಕುಟ್ಟೀರ ಲೋಕೇಶ್, ಕಿರಿಯಮಾಡ ಶೆರಿನ್, ಅರೆಯಡ ಗಿರೀಶ್, ಮಂದಪಂಡ ಮನೋಜ್, ನಂದೇಟಿರ ರವಿ, ಕೂಪದಿರ ಸಾಬು, ಮಣವಟ್ಟಿರ ಚಿಣ್ಣಪ್ಪ, ನಂದಿನೆರವಂಡ ಅಪ್ಪಯ್ಯ, ಪುಟ್ಟಿಚಂಡ ದೇವಯ್ಯ, ನಂದಿನೆರವಂಡ ವಿಜು, ಚೋಳಪಂಡ ನಾಣಯ್ಯ ನಂದಿನೆರವಂಡ ಅಯ್ಯಣ್ಣ, ಸಾದೇರ ರಮೇಶ್, ಅವರೇಮಾದಂಡ ರಮೇಶ್ ಸತ್ಯಗ್ರಹದಲ್ಲಿ ಪಾಲ್ಗೊಂಡಿದ್ದರು.

ದೇಶ – ವಿದೇಶ

ವಯನಾಡು ಭೂಕುಸಿತವಾದಲ್ಲೇ ನಿಗೂಢ ಶಬ್ಧ; ಮತ್ತೆ ಭೂಕಂಪ ಭೀತಿ

ವಯನಾಡು (ಕೇರಳ): ಕೇರಳದ ವಯನಾಡ್‌ನಲ್ಲಿ ಸಂಭವಿಸಿದ ಭೀಕರ ಭೂಕುಸಿತದಲ್ಲಿ 400ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದು ಇನ್ನೂ ನೂರಾರು ಮಂದಿಯ ಕುರುಹು ಪತ್ತೆಯಾಗಿಲ್ಲ. ಇದರ ಬೆನ್ನಲ್ಲೇ ಇದೀಗ ವಯನಾಡ್‌ನಲ್ಲೇ ನಿಗೂಢ ಶಬ್ಧವೊಂದು ಕೇಳಿಸಿದೆ. ಇದರಿಂದ ಮತ್ತೆ ಭೂಕಂಪ ಸಂಭವಿಸಬಹುದೆಂದು ಸ್ಥಳೀಯರು ಭಯಬೀತರಾಗಿದ್ದಾರೆ.



ಇತ್ತೀಚೆಗೆ ಭೂಕುಸಿತ ಸಂಭವಿಸಿದ ಚೂರಲ್ಮಲಾ–ಮುಂಡಕ್ಕೈ ಪ್ರದೇಶಗಳಿಂದ ಸುಮಾರು 15 ರಿಂದ 20 ಕಿಲೋಮೀಟರ್ ದೂರದಲ್ಲಿರುವ ಅಂಬಲವಾಯಲ್–ಎಡಕಲ್ ಪ್ರದೇಶಗಳಿಂದ ಇಂದು ಬೆಳಿಗ್ಗೆ 10.15ರ ಸುಮಾರಿಗೆ ನಿಗೂಢವಾಗಿ ಶಬ್ಧವೊಂದು ಕೇಳಿಸಿದೆ. ಅಷ್ಟೇ ಅಲ್ಲದೆ ಪಕ್ಕದ ಕೋಝಿಕ್ಕೋಡ್ ಮತ್ತು ಪಾಲಕ್ಕಾಡ್ ಜಿಲ್ಲೆಗಳ ಕೆಲ ಭಾಗಗಳಲ್ಲೂ ಇದೇ ರೀತಿಯ ಶಬ್ದಗಳು ಕೇಳಿಬಂದಿವೆ ಎಂದು ವರದಿಯಾಗಿದೆ ಇನ್ನು ವಯನಾಡ್‌ನಲ್ಲಿ ಸಂಭವಿಸಿದ ಈ ನಿಗೂಢ ಶಬ್ಧ, ಬರೀ ಶಬ್ಧವಷ್ಟೇ ಭೂಕಂಪವಲ್ಲ ಎಂದು ರಾಷ್ಟ್ರೀಯ ಭೂಕಂಪನ ಕೇಂದ್ರ ತಿಳಿಸಿದೆ.

ವಧುವಿನ ಕನಿಷ್ಟ ವಯಸ್ಸು 9 ವರ್ಷ; ಇರಾಕ್ ಸರ್ಕಾರದ ವಿವಾಹ ಕಾನೂನು ಪ್ರಸ್ತಾಪಕ್ಕೆ ಆಕ್ರೋಶ

ಬಾಗ್ದಾದ್ (ಇರಾಕ್): ದೇಶದ ವೈಯಕ್ತಿಕ ಕಾನೂನು ಬದಲಾವಣೆ ಮಾಡಲು ಮುಂದಾಗಿರುವ ಇರಾಕ್‌ನ ನ್ಯಾಯ ಸಚಿವಾಲಯ, ವಿವಾಹ ಆಗುವ ವಧುವಿನ ಕನಿಷ್ಟ ವಯೋಮಿತಿಯನ್ನು ಕೇವಲ 9 ವರ್ಷಕ್ಕೆ ನಿಗದಿಪಡಿಸಲು ಮುಂದಾಗಿದೆ.



ಸದ್ಯ ಇರಾಕ್ ದೇಶದಲ್ಲಿ ವಧುವಿನ ಕನಿಷ್ಟ ವಯೋಮಿತಿ 18 ವರ್ಷಕ್ಕೆ ನಿಗದಿಯಾಗಿದೆ ಆದರೆ, ಮುಸ್ಲಿಂ ಬಾಹುಳ್ಯದ ದೇಶವಾದ ಇರಾಕ್ ತನ್ನ ಕಾನೂನು ಬದಲಿಸಲು ಮುಂದಾಗಿರುವುದು ಅಲ್ಲಿನ ಪ್ರಜ್ಞಾವಂತರನ್ನು ಕೆರಳಿಸಿದೆ. ಜೊತೆಯಲ್ಲೇ ಇರಾಕ್ ದೇಶದಲ್ಲಿ ವೈವಾಹಿಕ ಹಾಗೂ ಕೌಟುಂಬಿಕ ವಿಚಾರ ಸೇರಿದಂತೆ ವೈಯಕ್ತಿಕ ವ್ಯಾಜ್ಯಗಳನ್ನು ಪರಿಹರಿಸುವ ಅಧಿಕಾರವನ್ನು ಇಸ್ಲಾಮಿಕ್ ಧಾರ್ಮಿಕ ಪ್ರಾಧಿಕಾರಗಳು ಅಥವಾ ಸಾಮಾನ್ಯ ನ್ಯಾಯಾಲಯ ಎರಡಕ್ಕೂ ನೀಡಲು ಅಲ್ಲಿನ ಸರ್ಕಾರ ಮುಂದಾಗಿದೆ ಒಂದು ವೇಳೆ ಈ ಕಾನೂನು ಜಾರಿಯಾದರೆ ಆಸ್ತಿ, ವಿಚ್ಛೇದನ, ಮಕ್ಕಳ ಹೊಣೆಗಾರಿಕೆ ವಿಚಾರಗಳಲ್ಲಿ ಮಹಿಳೆಯರಿಗೆ ಅನ್ಯಾಯವಾಗುವ ಕೂಗು ಎದ್ದಿದೆ. ಇರಾಕ್ ಸರ್ಕಾರದ ಹೊಸ ಕಾನೂನಿನ ಪ್ರಕಾರ ವಧುವಿಗೆ 9 ವರ್ಷ ಹಾಗೂ ವರನಿಗೆ 15 ವರ್ಷ ಆಗಿದ್ದರೆ ಮದುವೆ ಮಾಡಬಹುದು.

ಬಾಂಗ್ಲಾದಲ್ಲಿ ಮೊಹಮ್ಮದ್ ಯೂನಸ್ ನೇತೃತ್ವದ ಮಧ್ಯಂತರ ಸರ್ಕಾರ ಅಸ್ತಿತ್ವಕ್ಕೆ; ಶುಭಕೋರಿದ ಪ್ರಧಾನಿ ಮೋದಿ

ಢಾಕಾ: ಶೇಖ್ ಹಸೀನಾ ಪದಚ್ಯುತಿಯ ನಂತರ ಬಾಂಗ್ಲಾದಲ್ಲಿ ಆರ್ಥಿಕ ತಜ್ಞ ಮೊಹಮ್ಮದ್ ಯೂನಸ್ ನೇತೃತ್ವದಲ್ಲಿ ಮಧ್ಯಂತರ ಸರ್ಕಾರ ಇಂದು ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿದ್ದು, ಸರ್ಕಾರದ ಮುಖ್ಯಸ್ಥರಾಗಿ ಯೂನಸ್ ಪದಗ್ರಹಣ ಮಾಡಿದ್ದಾರೆ. ಶೇಖ್ ಹಸೀನಾ ಕಳೆದ ಸೋಮವಾರದಂದು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿರುವ ಯೂನಸ್‌ಗೆ ಪ್ರಧಾನಿ ನರೇಂದ್ರ ಮೋದಿ ಶುಭ ಕೋರಿದ್ದಾರೆ. ಬಾಂಗ್ಲಾದೇಶದಲ್ಲಿ ಸಹಜತೆ ಶೀಘ್ರವಾಗಿ ಮರುಸ್ಥಾಪನೆಯಾಗಲಿದೆ ಎಂಬ ವಿಶ್ವಾಸ ಭಾರತಕ್ಕೆ ಇದೆ. ಅಲ್ಲಿ ಸಹಜ ಸ್ಥಿತಿಗೆ ಎಲ್ಲವೂ ಮರಳಿದರೆ ಹಿಂದೂಗಳೂ ಸೇರಿದಂತೆ ಇತರ ಅಲ್ಪಸಂಖ್ಯಾತರ ರಕ್ಷಣೆಯು ಖಾತ್ರಿಯಾಗಲಿದೆ ಎಂದು ಹೇಳಿದ್ದಾರೆ.



ದೆಹಲಿ ಸ್ವಾತಂತ್ರ್ಯ ದಿನಾಚರಣೆಗೆ ಪಾನಿಪುರಿ ವ್ಯಾಪಾರಿಗೂ ಬಂತು ರಾಷ್ಟ್ರಪತಿ ಆಹ್ವಾನ

ಆಂಧ್ರ ಪ್ರದೇಶ: ನವದೆಹಲಿಯಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆಗೆ ಹಾಜರಾಗುವಂತೆ ಪಾನಿಪುರಿ ಮಾರಾಟಗಾರರೊಬ್ಬರಿಗೆ ರಾಷ್ಟ್ರಪತಿ ಭವನದಿಂದ ಆಹ್ವಾನ ಕಳುಹಿಸಲಾಗಿದೆ ಅವರ ಹೆಸರು ಮೆಗಾವರ್ತ್ ಚಿರಂಜೀವಿ. ಆಂಧ್ರ ಪ್ರದೇಶದ ತೆನಾಲಿಯ ರೈಲ್ವೇ ಸ್ಟೇಷನ್ ರಸ್ತೆಯಲ್ಲಿ ಪಾನಿಪುರಿ ಮಾರುವ ಸಣ್ಣ ವ್ಯವಹಾರವನ್ನು ನಡೆಸುತ್ತಿದ್ದಾರೆ.



ಇವರು ಖಾಸಗಿ ಲೇವಾದೇವಿಗಾರರ ಬಳಿ ಸಾಲ ಮಾಡದೇ, ಮೆಪ್ಮಾ (ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ ಅಡಿಯಲ್ಲಿ) ಅಡಿ 2021ರಲ್ಲಿ 10 ಸಾವಿರ, 2022ರಲ್ಲಿ 20 ಸಾವಿರ, 2023ರಲ್ಲಿ 50 ಸಾವಿರ ಸಾಲ ತೆಗೆದುಕೊಂಡಿದ್ದರು.ಕಷ್ಟಪಟ್ಟು ಕೆಲಸ ಮಾಡಿ ಸಕಾಲದಲ್ಲಿ ಹಣ ಪಾವತಿಯನ್ನು ಮಾಡಿದ್ದಾರೆ. ಇದಲ್ಲದೆ, ಚಿರುಜೀವಿ ತಮ್ಮ ಪಾನಿಪುರಿ ಅಂಗಡಿಯಲ್ಲಿ ಡಿಜಿಟಲ್ ಪಾವತಿ ಗಳನ್ನು ತೆಗೆದುಕೊಳ್ಳುತ್ತಿದ್ದರು. ಬ್ಯಾಂಕ್ ಅಧಿಕಾರಿಗಳು ಇವರ ಸಣ್ಣ ಬಂಡಿಯಲ್ಲಿ ಡಿಜಿಟಲ್ ಪಾವತಿ ಮಾಡಲು ಪ್ರೋತ್ಸಾಹಿಸಿದರು. ಇವರ ಈ ನಡೆ ಡಿಜಿಟಲ್ ಇಂಡಿಯಾ ಕಾರ್ಯಕ್ರಮಕ್ಕೆ ಪ್ರಸ್ತುತವಾಗಿದೆ.

ಪ್ರತಿಭಟನೆ ವೇಳೆ ಮಾರಾಟವಾಗಿ ಮತ್ತೆ ಮನೆ ತಲುಪಿದ ಶೇಖ್ ಹಸೀನಾ ಬೆಕ್ಕು

ಢಾಕಾ: ಬಾಂಗ್ಲಾದೇಶದಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಭುಗಿಲೆದ್ದ ಹಿಂಸಾಚಾರದಿಂದ ಶೇಖ್ ಹಸೀನಾ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿ ಬಾಂಗ್ಲಾದೇಶ ತೊರೆಯುತ್ತಿದ್ದಂತೆಯೇ ಅವರ ಅಧಿಕೃತ ನಿವಾಸವನ್ನು ಪ್ರತಿಭಟನಾಕಾರರು ವಶಪಡಿಸಿಕೊಂಡು ಶೇಖ್ ಹಸೀನಾ ಅವರ ಮನೆಯ ಕುರ್ಚಿಗಳು, ಬಟ್ಟೆಗಳು, ಸಾಕು ಪ್ರಾಣಿಗಳು, ಕೋಳಿಗಳು, ಮೀನು, ಬೆಕ್ಕು ಮತ್ತು ಜರ್ಮನ್ ಶೆಫರ್ಡ್ ಸೇರಿದಂತೆ ಅನೇಕ ವಸ್ತುಗಳನ್ನು ಲೂಟಿ ಮಾಡಿದರು.



ಇದೀಗ ಬಾಂಗ್ಲಾದೇಶದ ಸ್ವಯಂಸೇವಾ ಸಂಸ್ಥೆಯೊಂದು ಶೇಖ್ ಹಸೀನಾ ಅವರ ಅಧಿಕೃತ ನಿವಾಸದಿಂದ ಲೂಟಿ ಮಾಡಿದ್ದ ಜರ್ಮನ್ ಶೆಫರ್ಡ್ ಮತ್ತು ಬೆಕ್ಕನ್ನು ಹಿಂದಿರುಗಿಸುವ ಕೆಲಸ ಮಾಡಿದೆ. ಶೇಖ್ ಹಸೀನಾ ಅವರ ನಿವಾಸದಿಂದ ಲೂಟಿ ಮಾಡಿದ ಬೆಕ್ಕನ್ನು 40 ಸಾವಿರ ರೂ. ಬಾಂಗ್ಲಾದೇಶಿ ಟಾಕಾಗೆ ಮಾರಾಟ ಮಾಡಲಾಗಿತ್ತು. ಬಾಂಗ್ಲಾದೇಶದ ವಿಶೇಷ ಭದ್ರತಾ ಪಡೆ ಹಸೀನಾ ಅವರ ನೆಚ್ಚಿನ ಜರ್ಮನ್ ಶೆಫರ್ಡ್ ಅನ್ನು ಕೂಡ ಕರೆತಂದಿದೆ. ಅಭೊಯಾರೊನ್ನೊ ಹೆಸರಿನ ಸಂಸ್ಥೆಯು ಫೇಸ್‌ಬುಕ್ ಪೋಸ್ಟ್‌ನಲ್ಲಿ ಹಸೀನಾರ ಬೆಕ್ಕನ್ನು ಮನೆಗೆ ಹಿಂದಿರುಗಿಸಲಾಗಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದೆ.

ಮಠ, ಮಠಾಧಿಪತಿಗಳಿಂದ ಸಮಾಜದ ಏಳಿಗೆ


ತಿ.ನರಸೀಪುರ, ಆ.9– ಮಠ, ಮಠಾಧಿಪತಿಗಳ ಮೂಲಕ ಸಮಾಜದ ಶ್ರೇಯಸ್ಸಿಗೆ ಶ್ರಮಿಸುತ್ತಿದ್ದು, ಜನರಲ್ಲಿನ ಆಧ್ಯಾತ್ಮಿಕ ದಾಹ ನೀಗಿಸಲು ಧಾರ್ಮಿಕ ಆಚರಣೆ ಗಳಲ್ಲಿ ತೊಡಗಿಸಿಕೊಳ್ಳಲು ಮಾರ್ಗದರ್ಶನ ನೀಡುವ ಮಠಗಳಿಂದ ನಾಡಿನಲ್ಲಿ ಸರ್ವಾಂಗೀಣ ಪ್ರಗತಿ ಹಾಗೂ ಅಕ್ಷರ ಸಂಸ್ಕೃತಿ ಬೆಳವಣಿಗೆಯಾಗಿದೆ ಎಂದು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಮುದುಕುತೊರೆಯ ಕಲ್ಲುಮಠದ ಆವರಣದಲ್ಲಿ ಶುಕ್ರವಾರ ನಡೆದ ಶ್ರೀವಿರಕ್ತಾಶ್ರಮಾಧಿಕಾರ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಮಠಗಳ ಸಾಂತ್ವನದ ಮಾತು ಗಳು ಆತ್ಮಸ್ಥೈರ್ಯ ತುಂಬುವ ಜೊತೆಗೆ ಬದುಕಿನ ವಿಕಾಸಕ್ಕೂ ಅವಕಾಶ ಕಲ್ಪಿಸುವುದ ರಿಂದ ಮಠಗಳು ಮತ್ತು ಭಕ್ತರ ನಡುವೆ ಉತ್ತಮ ಬಾಂಧವ್ಯ ಬೆಸೆದಿದೆ ಎಂದರು.

ನಾಡಿನಲ್ಲಿದ್ದ 1500 ಮಠಗಳ ಸಂಖ್ಯೆ ಕಡಿಮೆಯಾಗಿದ್ದರೂ, ಮಠಗಳು ಇಂದಿಗೂ ಜಾತಿ ಮತ ಭೇದವಿಲ್ಲದೆ ಎಲ್ಲರಿಗೂ ಆಶ್ರಯ ಕೊಟ್ಟಿವೆ. ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸು ತ್ತಿವೆ. ಮಠಗಳಲ್ಲಿ ಆರ್ಥಿಕ ಕೊರತೆಯಿದ್ದರೂ ಬರುವ ಭಕ್ತರು ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ಆಶ್ರಯ ನೀಡುತ್ತಾ ಜನರಿಗೆ ನೆಮ್ಮದಿ ನೀಡಿವೆ. ಸಮಾಜಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸಿದ್ದಕ್ಕೆ ರಾಜೇಂದ್ರ ಶ್ರೀಗಳು ಮತ್ತು ಸಿದ್ಧಗಂಗಾ ಶಿವಕುಮಾರ ಶ್ರೀಗಳು ಧಾರ್ಮಿಕರಾಗಿದ್ದಾರೆ. ಮಠಗಳ ಸೇವೆ ಇಷ್ಟೊಂದು ಪ್ರಮಾಣದಲ್ಲಿದ್ದರೂ ಸಮಾಜ ಸಂಘಟಿತವಾಗಿ ಸಮೃದ್ಧಿಯವಾಗಿ ಬೆಳೆಯ ಬೇಕಿತ್ತು ಎಂದು ವಿಷಾದ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿ ವಾಟಾಳು ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತ ನಾಡಿದರು. ಮೈಸೂರು ಹೊಸ ಮಠದ ಚಿದಾನಂದ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಧಾರ್ಮಿಕ ಸಭೆಯನ್ನು ಕನಕಪುರ ದೇಗುಲ ಮಠದ ಡಾ.ಮುಮ್ಮಡಿ ನಿರ್ವಾಣ ಸ್ವಾಮೀಜಿ ಉದ್ಘಾಟಿಸಿದರು. ನಂತರ ಗದ್ದುಗೆಗೆ ರುದ್ರಾಭಿಷೇಕ, ಅಷ್ಟೋತ್ತರ ಹಾಗೂ ಮಹಾ

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿದರು.

ಮಂಗಳಾರತಿ ನೆರವೇರಿಸಲಾಯಿತು. ಪ್ರಾತಃ ಕಾಲ 5 ಗಂಟೆಗೆ ವಿರಕ್ತಾಶ್ರಮ ಪಟ್ಟದ ಬ್ರಹ್ಮೋಪದೇಶ ನಡೆಯಿತು. ಕ್ರೋಧಿನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ಶ್ರಾವಣ ಮಾಸ ಶುಕ್ಲ ಪಕ್ಷ ಶುಕ್ರವಾರ ಪಂಚಮಿಯ ತಿಥಿ ಅಶ್ವಿನಿ ನಕ್ಷತ್ರ ಸಿದ್ಧಿ ಯೋಗ ಭವ ಕರಣ ಸಮಯಕ್ಕೆ ಸರಿಯಾಗಿ ಬ್ರಾಹ್ಮೀ ಮುಹೂರ್ತದಲ್ಲಿ ಕನಕಪುರ ದೇಗುಲ ಮಠದ ಡಾ.ಮುಮ್ಮಡಿ ನಿರ್ವಾಣ ಸ್ವಾಮೀಜಿ ಯವರು ಎಂ.ಎಸ್.ಮಹದೇವ ಪ್ರಸಾದ್ ಎಂಬ ವಟುವಿಗೆ ಶ್ರೀನಂದೀಶ್ವರ ಸ್ವಾಮೀಜಿ ಎಂಬ ಅಭಿದಾನವಿತ್ತು ವಿಧ್ಯುಕ್ತವಾಗಿ ವಿರಕ್ತಾಶ್ರಮಾಧಿಕಾರದ ಪಟ್ಟಲ ಬ್ರಹ್ಮಪದೇಶ ಅನುಗ್ರಹಿಸಿ, ಆಶೀರ್ವದಿಸಿದರು.

ಕಾರ್ಯಕ್ರಮದಲ್ಲಿ ಚನ್ನಬಸವ ಸ್ವಾಮೀಜಿ, ಸಿದ್ಧಮಲ್ಲ ಸ್ವಾಮೀಜಿ, ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಗುರುಶಾಂತ ಸ್ವಾಮೀಜಿ, ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ, ಗುರುಪಾದ ಶಿವಾಚಾರ್ಯ ಸ್ವಾಮೀಜಿ, ಚಂದ್ರಶೇಖರ ಸ್ವಾಮೀಜಿ, ಶಿವಲಿಂಗೇಂದ್ರ ಸ್ವಾಮೀಜಿ, ಸರ್ಪಭೂಷಣ ಸ್ವಾಮೀಜಿ, ಬಸವರಾಜ ಸ್ವಾಮೀಜಿ, ಶ್ರೀಕಾಂತ ಸ್ವಾಮೀಜಿ, ಬಸವ ರಾಜೇಂದ್ರ ಸ್ವಾಮೀಜಿ, ಶಿವಕುಮಾರ ಸ್ವಾಮೀಜಿ, ಇಮ್ಮಡಿ ಉದ್ದಾನ ಸ್ವಾಮೀಜಿ, ಗೌಡ್ರು ಮಹದೇವಸ್ವಾಮಿ, ನಿವೃತ್ತ ಶಿಕ್ಷಕ ಪುಟ್ಟಬುದ್ಧಿ, ಎಸ್.ಕುಮಾರಸ್ವಾಮಿ, ಎನ್.ಮರಿಸ್ವಾಮಿ, ದೊಡ್ಡನಹುಂಡಿ ಗೌಡ್ರು ಸ್ವಾಮಿ, ಮಿಲ್ ನಂಜುಂಡಸ್ವಾಮಿ, ಶಿವಪ್ಪ, ಬಸವರಾಜ ಸ್ವಾಮಿ, ರಾಜೇಶ, ಬಸವಣ್ಣ, ಬಸವಲಿಂಗಪ್ಪ, ಕಟ್ಟೆಪುರ ಓಂಕಾರ ಮೂರ್ತಿ, ಕುಮಾರ, ಗೌಡ್ರು ಪಾಪಣ್ಣ ನಾಗಣ್ಣ ಮಹಾಂತಪ್ಪ, ಪ್ರಸಾದ್, ಮಾವಿನಹಳ್ಳಿ ಜಯಪ್ಪ ಸೇರಿದಂತೆ ಮಠದ ಭಕ್ತರಿದ್ದರು.

ಶ್ರೀಕಂಠೇಶ್ವರನ ದರ್ಶನ ಪಡೆದ ಬಿಎಸ್‌ವೈ



ಶ್ರೀಕಂಠೇಶ್ವರಸ್ವಾಮಿ ದರ್ಶನ ಪಡೆದ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ.

ನಂಜನಗೂಡು, ಆ.9– ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭೇಟಿ ನೀಡಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಮೊದಲಿಗೆ ಶ್ರೀಕಂಠೇಶ್ವರನ ಗರ್ಭಗುಡಿಯಲ್ಲಿ ದೇವರಿಗೆ ಅರ್ಚನೆ, ವಿಶೇಷ ಪೂಜೆ ಸಲ್ಲಿಸಿದರು. ನಂತರ ಪಾರ್ವತಿದೇವಿ, ನಾರಾಯಣಸ್ವಾಮಿ, ಚಂಡಿಕೇಶ್ವರ, ಸುಬ್ರಹ್ಮಣ್ಯೇಶ್ವರನ ದರ್ಶನ ಪಡೆದರು. ದೇವಾಲಯದ ವತಿಯಿಂದ ಅವರಿಗೆ ಶೇಷ ವಸ್ತ್ರ ನೀಡಿ ಗೌರವಿಸಿದರು. ಇದೇ ವೇಳೆ ನಗರಸಭಾ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಬಿಜೆಪಿ ಮುಖಂಡರಾದ ವಿಜಯ್‌ಕುಮಾರ್, ನಗರಸಭಾ ಸದಸ್ಯರಾದ ಕಪಿಲೇಶ್, ಮಹದೇವಪ್ರಸಾದ್, ಶ್ರೀನಿವಾಸರೆಡ್ಡಿ, ಎಸ್.ಸಿ.ಬಸವಣ್ಣ, ಎನ್.ಮಹೇಶ್, ಉಮೇಶ್‌ಮೋದಿ, ಸಿದ್ದರಾಜು ಸೇರಿದಂತೆ ಹಲವರಿದ್ದರು.

ಲಾರಿಗೆ ಈಚರ್ ಡಿಕ್ಕಿ: ಚಾಲಕ ಸ್ಥಳದಲ್ಲೇ ಸಾವು

ನಂಜನಗೂಡು, ಆ.9– ಲಾರಿಗೆ ಹಿಂಬದಿಯಿಂದ ಈಚರ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಚಾಲಕ ಸ್ಥಳದಲ್ಲೇ ಸಾವನ್ನ




ಪ್ಪಿರುವ ಘಟನೆ ನಂಜನಗೂಡು– ಮೈಸೂರು ರಾಷ್ಟ್ರೀಯ ಹೆದ್ದಾರಿಯ ತಾಲೂಕಿನ ಚಿಕ್ಕಯ್ಯನಛತ್ರದ ಪ್ರಸನ್ನ ನಂಜುಂಡೇಶ್ವರ ದೇವಾಲಯದ ಬಳಿ ಜರುಗಿದೆ.

ಚಾಮರಾಜನಗರ ಜಿಲ್ಲೆಯ ಕರಿನಂಜನಪುರ ಗ್ರಾಮದ ಶಿವಮೂರ್ತಿ(35) ಸಾವನ್ನಪ್ಪಿದವರು. ಈತ ಗುರುವಾರ ರಾತ್ರಿ ಮೈಸೂರಿನ ಬಂಡಿಪಾಳ್ಯ ಮಾರುಕಟ್ಟೆಯಲ್ಲಿ ದಿನಸಿ ಪದಾರ್ಥ ಗಳನ್ನು ಲೋಡ್ ಮಾಡಿಕೊಂಡು ನಂಜನಗೂಡು–ಮೈಸೂರು ಹೆದ್ದಾರಿಯಲ್ಲಿ ಬರುತ್ತಿದ್ದ ವೇಳೆ ಏಷಿಯನ್ ಪೈಂಟ್ಸ್ ಕಾರ್ಖಾನೆಯಿಂದ ಬಣ್ಣದ ಡಬ್ಬಿಗಳನ್ನು ತುಂಬಿಕೊಂಡು ಬರುತ್ತಿದ್ದ ಲಾರಿ ಚಿಕ್ಕಯ್ಯನಛತ್ರ ಪ್ರಸನ್ನ ನಂಜುಂಡೇಶ್ವರ ದೇವಾಲಯದ ಬಳಿ ಯೂಟರ್ನ್ ತೆಗೆದು ಕೊಳ್ಳುತ್ತಿದ್ದ ವೇಳೆ ಈಚರ್ ಲಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ಈಚರ್ ವಾಹನ ಸಂಪೂರ್ಣ ಜಖಂಗೊಂಡು ತೀವ್ರ ಗಾಯಗೊಂಡ ಚಾಲಕ ಶಿವಮೂರ್ತಿ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಘಟನೆ ಬಳಿಕ ಲಾರಿ ಚಾಲಕ ಪರಾರಿಯಾಗಿದ್ದಾನೆ ಎಂದು ನಂಜನಗೂಡು ಸಂಚಾರಿ ಪೊಲೀಸರು ತಿಳಿಸಿದ್ದಾರೆ. ಘಟನೆಯಲ್ಲಿ ಲಾರಿ ಪಲ್ಟಿಯಾಗಿ ಬಣ್ಣ ರಸ್ತೆಯಲೆಲ್ಲಾ ಚೆಲ್ಲಿತ್ತು. ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಆಗಮಿಸಿ ರಸ್ತೆಯಲ್ಲಿದ್ದ ಬಣ್ಣ ಸ್ವಚ್ಛಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಸ್ಥಳಕ್ಕೆ ನಂಜನಗೂಡು ಸಂಚಾರಿ ಪೊಲೀಸ್ ಠಾಣೆ ಎಸ್‌ಐ ಸಿದ್ದರಾಜು ಭೇಟಿ ನೀಡಿ ಪರಿಶೀಲಿಸಿ. ಶವವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ವಾರಸುದಾರರಿಗೆ ಹಸ್ತಾಂತರಿಸಿದರು. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಇಂದು ರಾಚಯ್ಯನವರ ಸ್ಮಾರಕ ಭವನ ಉದ್ಘಾಟನೆ

ಆಲೂರಿನಲ್ಲಿ 4.75 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ



ಆಲೂರಿನಲ್ಲಿ ನಿರ್ಮಾಣಗೊಂಡಿರುವ ಬಿ.ರಾಚಯ್ಯನವರ ಸ್ಮಾರಕ ಭವನ.

ಚಾಮರಾಜನಗರ, ಆ.9– ತಾಲೂಕಿನ ಆಲೂರು ಗ್ರಾಮದಲ್ಲಿ ಮಾಜಿ ರಾಜ್ಯಪಾಲ ದಿವಂಗತ ಬಿ.ರಾಚಯ್ಯನವರ ಸ್ಮರಣಾರ್ಥ ಭವ್ಯ ಸ್ಮಾರಕ ಭವನ ನಿರ್ಮಾಣ ಗೊಂಡಿದ್ದು, ಶನಿವಾರ (ಆ.10) ಉದ್ಘಾಟನೆಗೊಳ್ಳಲಿದೆ.



ಬಿ.ರಾಚಯ್ಯ

ಬಿ.ರಾಚಯ್ಯ ನವರ ಸಮಾಧಿ ತೋಟದಲ್ಲಿ ಸ್ಮಾರಕ ನಿರ್ಮಾಣ ಮಾಡಲಾಗಿದ್ದು, ಆಕರ್ಷಕ ವಿನ್ಯಾಸದ ಕಟ್ಟಡ ತಲೆ ಎತ್ತಿದೆ. ಆಲೂರಿನಲ್ಲಿ ಒಟ್ಟು 3.11 ಎಕರೆ ಜಮೀನಿನಲ್ಲಿ 1.15 ಎಕರೆ ಪ್ರದೇಶದಲ್ಲಿ ಅಂದಾಜು 4.75 ಕೋಟಿ ರೂ. ವೆಚ್ಚದಡಿ ಸ್ಮಾರಕ ಭವನ ನಿರ್ಮಿಸಲಾಗಿದ್ದು, ಸ್ಮಾರಕದ ಮೇಲಂತಸ್ತಿನಲ್ಲಿ ರಾಚಯ್ಯನವರ ಬದುಕಿನ ಕುರಿತ ಮಾಹಿತಿ. ಅವರ ಅಪರೂಪದ ಚಿತ್ರಗಳನ್ನು ಒಳಗೊಂಡ ಮ್ಯೂಸಿಯಂ ನಿರ್ಮಿಸಲಾಗಿದೆ.

ಅವರ ಬೆಳವಣಿಗೆಯ ಹಾದಿಯ ವಿವರ ಮತ್ತು ಚಿತ್ರಗಳ ಪ್ರದರ್ಶಿಸಲಾಗಿದ್ದು, ಅತ್ಯಾಧುನಿಕ ತಂತ್ರಜ್ಞಾನ ವ್ಯವಸ್ಥೆಯುಳ್ಳ ಸೌಲಭ್ಯ ಒಳಗೊಂಡಿದೆ. ಸ್ಮಾರಕ ಭವನಕ್ಕೆ ಮದ್ದೂರು ತಾಲೂಕಿನ ಸತ್ಯಾಗ್ರಹ ಸೌಧದ ವಿನ್ಯಾಸ ಪ್ರೇರೇಪಣೆಯಾಗಿದ್ದು, ಉತ್ತಮ ಮಾದರಿಯಲ್ಲಿ ಸ್ಮಾರಕ ಭವನ ನಿರ್ಮಾಣವಾಗಿದೆ.

ಮುಖ್ಯಮಂತ್ರಿ ಉದ್ಘಾಟನೆ: 7 ವರ್ಷಗಳ ಹಿಂದೆ ತಾವೇ ಶಿಲಾನ್ಯಾಸ ಮಾಡಿದ್ದ ಸ್ಮಾರಕ ಭವನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಉದ್ಘಾಟನೆ ಮಾಡುತ್ತಿರುವುದು ವಿಶೇಷವಾಗಿದೆ. ಶನಿವಾರ ಬೆಳಗ್ಗೆ 11 ಗಂಟೆಗೆ ಆಲೂರಿನಲ್ಲಿ ಮುಖ್ಯಮಂತ್ರಿ ಭವನ ಉದ್ಘಾಟನೆ ಮಾಡಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಹೆಚ್.ಕೆ.ಪಾಟೀಲ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಗಣೇಶಪ್ರಸಾದ್, ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ.ಗಣೇಶಪ್ರಸಾದ್, ದರ್ಶನ್ ಧ್ರುವನಾರಾಯಣ್, ಅನಿಲ್ ಚಿಕ್ಕಮಾದು, ಯತ್ರೀಂದ್ರ, ಸಂಸದ ಸುನೀಲ್ ಬೋಸ್ ಸೇರಿದಂತೆ ಬಿ.ರಾಚಯ್ಯನವರ ಕುಟುಂಬಸ್ಥರು, ಸ್ಥಳೀಯ ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ.

> ರಾಚಯ್ಯನವರ ಹೆಸರಿನಲ್ಲಿ ಸ್ಮಾರಕ ನಿರ್ಮಾಣಕ್ಕೆ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವಯಂ ಪ್ರೇರಿತರಾಗಿ ಬಜೆಟ್‌ನಲ್ಲಿ ತಲಾ 1 ಕೋಟಿ ರೂ. ಅನುದಾನ ಮೀಸಲಿಟ್ಟಿದ್ದರು. ಬಳಿಕ ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿದ್ದ ಶ್ರೀರಾಮುಲು 50 ಲಕ್ಷಕ್ಕೂ ಹೆಚ್ಚು ಅನುದಾನ, ಬಸವರಾಜ ಬೊಮ್ಮಾಯಿ 1.25 ಕೋಟಿ ರೂ. ಅನುದಾನ, ನಂತರ ಮತ್ತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭವನ ಪೂರ್ಣಗೊಳಿಸಲು 2.12 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದಾರೆ.
>
> –ಎ.ಆರ್.ಕೃಷ್ಣಮೂರ್ತಿ, ಬಿ.ರಾಚಯ್ಯನವರ ಪುತ್ರ ಹಾಗೂ ಶಾಸಕ



ಹೇರೂರಿನಲ್ಲಿ ಅಡಕೆ ಗಿಡ ನಾಶಪಡಿಸಿದ ಕಾಡಾನೆಗಳು



ಹೇರೂರಿನ ಚಂದ್ರಶೇಖರ್ ಅವರ ತೋಟದಲ್ಲಿ ಕಾಡಾನೆಗಳು ಅಡಕೆ ಗಿಡಗಳನ್ನು ಬೇರು ಸಹಿತ ಕಿತ್ತು ಹಾಕಿರುವುದು.

ಮಡಿಕೇರಿ, ಆ.9– ಕುಶಾಲನಗರ ವಲಯದ ಅತ್ತೂರು ಮೀಸಲು ಅರಣ್ಯ ವ್ಯಾಪ್ತಿಯ ಹೇರೂರಿನಲ್ಲಿ ಕಾಡಾನೆಗಳ ಉಪಟಳ ಮಿತಿಮೀರಿದ್ದು, ಜಮೀನಿಗೆ ಲಗ್ಗೆಯಿಟ್ಟ ಕಾಡಾನೆಗಳು ಒಂದೇ ದಿನದಲ್ಲಿ ನೂರಾರು ಅಡಕೆ ಗಿಡಗಳನ್ನು ನಾಶ ಪಡಿಸಿವೆ.

ಹೇರೂರಿನ ಕೃಷಿಕ ಚಂದ್ರಶೇಖರ್ ಅವರ ತೋಟದಲ್ಲಿ 120ಕ್ಕೂ ಹೆಚ್ಚು ಅಡಕೆ ಗಿಡಗಳನ್ನು ಬೇರು ಸಹಿತ ಕಿತ್ತು ಹಾಕಿವೆ.

ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಬೆಳೆಗಾರರು, ಅರಣ್ಯ ಇಲಾಖೆ ನಮ್ಮ ಮನವಿಗೆ ಸೂಕ್ತವಾಗಿ ಸ್ಪಂದಿಸುತ್ತಿಲ್ಲ. 3 ತಿಂಗಳಿಂದ ನಿರಂತರವಾಗಿ ಕಾಡಾನೆ ಗಳು ಈ ಭಾಗದ ರೈತರ ಜಮೀನುಗಳಿಗೆ ನುಗ್ಗಿ ಬೆಳೆ ಹಾನಿ ಮಾಡುತ್ತಿವೆ. ಸಮೀಪದ ಅರಣ್ಯ ಪ್ರದೇಶದಿಂದ ತೋಟದ ಬೇಲಿ ಮುರಿದು ಮರಿಯಾನೆ ಸಹಿತ ನುಗ್ಗಿರುವ ಕಾಡಾನೆಗಳು ಅಡಕೆ ಗಿಡಗಳನ್ನು ಧ್ವಂಸಗೊಳಿಸಿವೆ ಎಂದು ದೂರಿದರು.

ಅಡಕೆ ಜೊತೆಗೆ ಕರಿಮೆಣಸು ಬಳ್ಳಿ, ಕಾಫಿ ಗಿಡಗಳನ್ನು ನೆಲಸಮಗೊಳಿಸಿ, ನೀರಾವರಿ ಪೈಪ್‌ಗಳನ್ನು ಆನೆಗಳು ಒಡೆದು ಹಾಕಿವೆ. ಇದರಿಂದ 4 ಲಕ್ಷಕ್ಕೂ ಅಧಿಕ ನಷ್ಟ ಉಂಟಾಗಿದೆ ಎಂದು ಚಂದ್ರಶೇಖರ್ ಅಳಲು ತೋಡಿಕೊಂಡರು. ಸ್ಥಳಕ್ಕೆ ಭೇಟಿ ನೀಡಿದ ವಲಯ ಅರಣ್ಯಾಧಿಕಾರಿ ರತನ್ ಕುಮಾರ್ ಮತ್ತು ಸಿಬ್ಬಂದಿ ಪರಿಶೀಲನೆ ನಡೆಸಿದರು. ಇದೇ ವೇಳೆ ಕಾಡಾನೆ ಹಾವಳಿ ತಡೆಗಟ್ಟಲು ಸೋಲಾರ್ ಬೇಲಿ, ರೈಲ್ವೆ ಬ್ಯಾರಿಕೇಡ್ ಅಳವಡಿಸಲು ಕ್ರಮ ಕೈಗೊಳ್ಳುವಂತೆ ರೈತರು ಒತ್ತಾಯಿಸಿದರು. ಇದಕ್ಕೆ ಸ್ಪಂದಿಸಿದ ಅರಣ್ಯಾಧಿಕಾರಿ ಈ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸಿದರು.

ಈ ಸಂದರ್ಭ ಕೃಷಿಕರಾದ ಅರುಣ್, ನಂಜೇಗೌಡ, ಗಣೇಶ್, ಮೋಕಿತ್, ಬಸಪ್ಪ, ಮನಿಲ್, ಪ್ರತೀಕ್ ಮತ್ತಿತರರು ಹಾಜರಿದ್ದರು.

ಸಾ.ರಾ.ಮಹೇಶ್ ಬಂಧನ ಖಂಡಿಸಿ ವ್ಯಕ್ತಿ ಆತ್ಮಹತ್ಯೆಗೆ ಯತ್ನ



ಮಾಜಿ ಸಚಿವ ಸಾ.ರಾ.ಮಹೇಶ್ ಬಂಧನ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಕೆ.ಆರ್.ನಗರ, ಆ.9– ಮೈಸೂರಿನಲ್ಲಿ ಮಾಜಿ ಶಾಸಕ ಸಾ.ರಾ.ಮಹೇಶ್ ಬಂಧನ ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದ ವೇಳೆ ವ್ಯಕ್ತಿಯೋರ್ವ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಪಟ್ಟಣದಲ್ಲಿ ಶುಕ್ರವಾರ ನಡೆದಿದೆ.

ಪಟ್ಟಣದ ಕೃಷ್ಣರಾಜೇಂದ್ರ ವೃತ್ತದಲ್ಲಿ ಜಮಾಯಿಸಿದ ಜೆಡಿಎಸ್ ಕಾರ್ಯಕರ್ತರು, ಮಾಜಿ ಶಾಸಕ ಸಾ.ರಾ.ಮಹೇಶ್ ಬಂಧನ ಖಂಡಿಸಿ ಪ್ರತಿಭಟಿಸುತ್ತಿದ್ದ ವೇಳೆ ಸಾರಾ ಗೋಸ್ಕರ ಪ್ರಾಣ ಬಿಡಲು ಸಿದ್ಧ ಎಂದು ನಗರ ಪ್ರಧಾನ ಕಾರ್ಯದರ್ಶಿ ರುದ್ರೇಶ್ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದರು. ಈ ವೇಳೆ ಕಾರ್ಯ ಪ್ರವೃತ್ತರಾದ ಇನ್ಸ್‌ಪೆಕ್ಟರ್ ಕೃಷ್ಣರಾಜ ಮತ್ತು ಮುಖಂಡರು ಮುಂದಾಗುವ ಅನಾಹುತ ತಪ್ಪಿಸಿದರು. ಈ ವೇಳೆ ಪುರಸಭಾ ಸದಸ್ಯರಾದ ಉಮೇಶ್, ಶೃತಿ, ಜೀವನ್ ಅವರ ಮೇಲೆ ಪೆಟ್ರೋಲ್ ಬಿದ್ದು ಉರಿ ಕಾಣಿಸಿಕೊಂಡಿದ್ದರಿಂದ ಅವರನ್ನು ಆಸ್ಪತ್ರೆಗೆ ರವಾನಿಸಲಾಯಿತು. ಈ ವೇಳೆ ಪ್ರತಿಭಟನೆ ಮುಂದುವರೆಸಿದ ನೂರಾರು ಜೆಡಿಎಸ್ ಕಾರ್ಯಕರ್ತರು ಕಾಂಗ್ರೆಸ್ ಪಕ್ಷ, ಸಿಎಂ ಸಿದ್ದರಾಮಯ್ಯ, ಮಾಜಿ ಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ವಸ್ತು ಪ್ರದರ್ಶನದ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ರಾಜ್ಯದಲ್ಲಿ ಅಧಿಕಾರದಲ್ಲಿರುವ ಭ್ರಷ್ಟ ಸರ್ಕಾರ ವಿಪಕ್ಷಗಳನ್ನು ಹತ್ತಿಕ್ಕುವ, ಪ್ರತಿಭಟನೆ ತಡೆಗಟ್ಟುವ, ಪರಿಶಿಷ್ಟ ಪಂಗಡದ ಹಣ ನುಂಗಿವ, ಪೊಲೀಸ್ ಸಿಬ್ಬಂದಿ ಬಲಿ ಪಡೆಯುವ ಮೂಲಕ ರಾಜ್ಯವನ್ನು ದಿವಾಳಿಯತ್ತ ಕೊಂಡೊಯ್ಯುತ್ತಿದೆ. ಇಂತಹ ಸರ್ಕಾರವನ್ನು ತೆಗೆಯುವ ತನಕ ಜೆಡಿಎಸ್, ಬಿಜೆಪಿ ಹೋರಾಟ ನಿಲ್ಲಿಸುವುದಿಲ್ಲ ಎಂದರು.

ಸಂವಿಧಾನವನ್ನು ಬಿಡಮೇಲು ಮಾಡಲು ಹೊರಟಿರುವ ಭ್ರಷ್ಟ ಮುಖ್ಯಮಂತ್ರಿ ವಿರುದ್ಧದ ಹೋರಾಟ ಪ್ರತಿಯೊಬ್ಬನ ಹಕ್ಕು ಆ ಹೋರಾಟವನ್ನು ಹತ್ತಿಕ್ಕಲು ಪೊಲೀಸ್ ಇಲಾಖೆ ಬಳಕೆ ಮಾಡಿಕೊಂಡಿರುವ ಈ ನೀಚ ಸರ್ಕಾರವನ್ನು ಮತ್ತು ಮೈಸೂರು ಮುಡಾದಲ್ಲಿ ನಡೆದಿರುವ ಹಗರಣವನ್ನು ಸಿಬಿಐಗೆ ವಹಿಸುವ ತನಕ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂದರು.

ಜೆಡಿಎಸ್‌ನ ಪುರಸಭಾ ಸದಸ್ಯ ಉಮೇಶ್ ಮಾತನಾಡಿದರು. ಪ್ರತಿಭಟನೆಯಲ್ಲಿ ಪುರಸಭಾ ಸದಸ್ಯರಾದ ಜಗದೀಶ್, ತೋಂಟದಾರ್ಯ, ಮಂಜುಳಾ, ಚಿಕ್ಕವೀರ್, ಸಂತೋಷ್‌ಗೌಡ, ಜೆಡಿಎಸ್ ವಕ್ತಾರ ರಮೇಶ್, ನಗರ ಪ್ರಧಾನ ಕಾರ್ಯದರ್ಶಿ ರುದ್ರೇಶ್, ತಾಲೂಕು ಎಸ್ಸಿ ಎಸ್ಟಿ ಜೆಡಿಎಸ್ ಅಧ್ಯಕ್ಷ ಸುರೇಶ್, ಜೆಡಿಎಸ್ ಮಹಿಳಾ ಅಧ್ಯಕ್ಷೆ ದಾಕ್ಷಾಯಿಣಿ, ಜಿಲ್ಲಾ ಉಪಾಧ್ಯಕ್ಷೆ ಭಾಗ್ಯಮ್ಮ, ಮೋಹನ್ ಕುಮಾರಿ, ಶೃತಿ, ಮುಖಂಡರಾದ ಶಿವಣ್ಣ, ರಮೇಶ್, ಕುಚೇಲ ಇನ್ನಿತರರಿದ್ದರು.

ಬಿಜೆಪಿ–ಜೆಡಿಎಸ್ ಮೈಸೂರು ಚಲೋ ಪಾದಯಾತ್ರೆ ಸಮಾರೋಪ ಹಿನ್ನೆಲೆ

ಮೈಸೂರಲ್ಲಿ ಕೆಲವಡೆ ವಾಹನಗಳ ಸಂಚಾರಕ್ಕೆ ಬದಲಿ ರಸ್ತೆ ಮಾರ್ಗಸೂಚಿ

ಮೈಸೂರು, ಆ.9– ಆಗಸ್ಟ್ 10 ರಂದು ಬಿಜೆಪಿ– ಜೆಡಿಎಸ್ ಪಾದಯಾತ್ರೆ ಸಮಾರೋಪ ಸಮಾರಂಭ ಮಹಾರಾಜ ಕಾಲೇಜು ಮೈದಾನ ದಲ್ಲಿ ನಡೆಯಲಿರುವ ಸಂಬಂಧ ಈ ಕಾರ್ಯಕ್ರಮಕ್ಕೆ ವಿವಿಧ ಭಾಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಲಿದ್ದು, ಪಾದಯಾತ್ರೆ ಸಾಗುವ ಮಾರ್ಗಗಳು ಮತ್ತು ಕಾರ್ಯಕ್ರಮ ನಡೆಯುವ ಮಹಾರಾಜ ಕಾಲೇಜು ಮೈದಾನದ ಸುತ್ತಲಿನ ರಸ್ತೆಗಳಲ್ಲಿ ವಾಹನಗಳ ಸುಗಮ ಸಂಚಾರದ ಹಿತದೃಷ್ಟಿಯಿಂದ ಪಾದಯಾತ್ರೆ ಸಾಗುವ ಮಾರ್ಗ ಗಳು ಮತ್ತು ಮಹಾರಾಜ ಕಾಲೇಜು ಮೈದಾನದ ಸುತ್ತಲಿನ ಕೆಲವು ರಸ್ತೆಗಳಲ್ಲಿ ಆಗಸ್ಟ್ 10 ರಂದು ವಾಹನಗಳ ಸಂಚಾರವನ್ನು ಮತ್ತು ವಾಹನಗಳ ನಿಲುಗಡೆಗೆ ನಿರ್ಬಂಧವನ್ನು ವಿಧಿಸಿ ಬದಲಿ ಮಾರ್ಗ ಗಳನ್ನು ಕಲ್ಪಿಸಿ ಅಧಿಸೂಚನೆ ಹೊರಡಿಸಲಾಗಿದೆ.

ಆಗಸ್ಟ್ 10 ರಂದು ಬೆಳಿಗ್ಗೆ 8 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಾಹನಗಳ ಸಂಚಾರ ವನ್ನು ನಿರ್ಬಂಧಿಸಲಾಗಿರುವ ರಸ್ತೆಗಳ ವಿವರ: ರಾಮಸ್ವಾಮಿ ವೃತ್ತದಿಂದ ಅಗ್ನಿಶಾಮಕ ಠಾಣೆ ಜಂಕ್ಷನ್ ವರೆಗಿನ ರಸ್ತೆಯ ಎರಡು ಕಡೆಗಳಲ್ಲಿ ಸಂಚರಿಸುವ ಎಲ್ಲಾ ಮಾದರಿಯ ವಾಹನಗಳ ಸಂಚಾರ ಮತ್ತು ವಾಹನ ನಿಲುಗಡೆಯನ್ನು ನಿರ್ಬಂಧಿಸಲಾಗಿದೆ. ಮುಡಾ ಜಂಕ್ಷನ್‌ನಿಂದ ವಿ.ಎಂ.ಡಿ ಜಂಕ್ಷನ್‌ವರೆಗೆ ಸಂಚರಿಸುವ ಎಲ್ಲಾ ಮಾದರಿಯ ವಾಹನಗಳ ಸಂಚಾರವಿಲ್ಲ. ಡಿಸಿ ಕಛೇರಿ ಆರ್ಚ್‌ಗೇಟ್ ಜಂಕ್ಷನ್ ನಿಂದ ಕೋರ್ಟ್ ಜಂಕ್ಷನ್‌ವರೆಗಿನ ಕೆ.ಆರ್.ಬಿ ರಸ್ತೆಯ ಎರಡು ಕಡೆಗಳಲ್ಲಿ ಸಂಚರಿಸುವ ಎಲ್ಲಾ ಮಾದರಿಯ ವಾಹನಗಳ ಮತ್ತು ವಾಹನ ನಿಲುಗಡೆಯನ್ನು ನಿರ್ಬಂಧಿಸಲಾಗಿದೆ.

ಜೆ.ಎಲ್.ಬಿ ರಸ್ತೆಯಲ್ಲಿ ಮೆಟ್ರೋಪೋಲ್ ವೃತ್ತದಿಂದ ರಾಮಸ್ವಾಮಿ ವೃತ್ತದವರೆಗೆ ಕಾರ್ಯ ಕ್ರಮಕ್ಕೆ ಆಗಮಿಸುವ ವಾಹನಗಳನ್ನು ಹೊರತು ಪಡಿಸಿ ಸಂಚರಿಸುವ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ.

ಬದಲಿ ಪರ್ಯಾಯ ಮಾರ್ಗ: ಜೆ.ಕೆ. ಮೈದಾನ ಜಂಕ್ಷನ್– ಗಾಯತ್ರಿಭವನ್ ಜಂಕ್ಷನ್– ದಿವಾನ್ಸ್ ರಸ್ತೆ–ಶಿವರಾಂಪೇಟೆ ರಸ್ತೆ– ಎನ್.ಎಸ್.ರಸ್ತೆ– ಚಾಮರಾಜ ಡಬಲ್ ರಸ್ತೆ– ಜೆ.ಎಲ್.ಬಿ ರಸ್ತೆ– ಕೆ.ಆರ್.ಬಿ ರಸ್ತೆ– ಸ್ವಿಮಿಂಗ್ ಪೂಲ್ ರಸ್ತೆಗಳಲ್ಲಿ ವಾಹನ ಸಂಚಾರ ಮತ್ತು ನಿಲುಗಡೆಯನ್ನು ನಿಷೇಧಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭ್ರಷ್ಟಾಚಾರಿಗಳ ಪಾದಯಾತ್ರೆ ಹಾಸ್ಯಾಸ್ಪದ

ಅರಣ್ಯ ಸಚಿವ ಈಶ್ವರ ಖಂಡ್ರೆ ವಾಗ್ದಾಳಿ

ಮೈಸೂರು, ಆ.9(ಜಿಎ)–ಜೆಡಿಎಸ್ ಮತ್ತು ಬಿಜೆಪಿ ಭ್ರಷ್ಟಾಚಾರಿಗಳು ಪಾದಯಾತ್ರೆ ಮಾಡುತ್ತಿರುವುದು ಹಾಸ್ಯಾಸ್ಪದ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ವಾಗ್ದಾಳಿ ನಡೆಸಿದರು.



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಜನಾಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಡಾ ವಿಷಯವನ್ನು ಇಟ್ಟುಕೊಂಡ ಬಿಜೆಪಿ, ಜೆಡಿಎಸ್ ಪಾದಯಾತ್ರೆ ಮಾಡುತ್ತಾರೆ. ಆದರೆ ಅವರ ಬಳಿ ಯಾವುದೇ ದಾಖಲೆಗಳಿಲ್ಲ. ಅವರ ಕಾಲದಲ್ಲಿ ಆದ ಹಗರಣಗಳಿಗೆ ಉತ್ತರ ನೀಡಬೇಕು ಎಂದರು.

2008ರಲ್ಲಿ ಎಂಎಲ್‌ಎಗಳನ್ನು ಖರೀದಿ ಮಾಡುವ ಮೂಲಕ ರಾಜ್ಯದ ಮರ್ಯಾದೆ ಹರಾಜು ಮಾಡಿ ಆಪರೇಷನ್ ಕಮಲ ಮಾಡಿದ್ದಾರೆ. ಐದು ವರ್ಷದಲ್ಲಿ ಐದು ಮುಖ್ಯಮಂತ್ರಿಗಳನ್ನು ನೀಡಿದ್ದೆ ಅವರ ಸಾಧನೆಯಾಗಿದೆ. ಆದರೆ, ಸಿದ್ದರಾಮಯ್ಯ ಅವರು 2013ರಿಂದ 18 ರವರೆಗೆ ಸಾಕಷ್ಟು ಯೋಜನೆ ನೀಡುವ ಮೂಲಕ ಉತ್ತಮ ಅಧಿಕಾರ ನೀಡಿದ್ದಾರೆ ಎಂದರು. ತದನಂತರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿಯೂ ರಾಜ್ಯದಲ್ಲಿ ಧರ್ಮ ಧರ್ಮಗಳ ನಡುವೇ ತಂದಿಟ್ಟರು. ಮತ್ತೆ ಆಪರೇಷನ್ ಕಮಲ ಮಾಡಿ ಹಿಂಬಾಗಲಿನಿಂದ ಅಧಿಕಾರಕ್ಕೆ ಬಂದರು. ಹೆಚ್.ಡಿ. ಕುಮಾರಸ್ವಾಮಿ ಬಿಜೆಪಿ ವಿರುದ್ಧ ಮಾತನಾಡಿ ಈಗ ಅವರ ಜೊತೆ ಇದ್ದಾರೆ ಎಂದರು.

ಅವರ ಅವಧಿಯಲ್ಲಿಯೇ ಪ್ರಶ್ನೆಪತ್ರಿಕೆ ಸೋರಿಕೆ, ಪಿಎಸ್‌ಐ ಹಗರಣ, ಬಿಟ್ ಕಾಯಿನ್ ಸೇರಿದಂತೆ ದಿನಕ್ಕೊಂದು ಹಗರಣ ನಡೆದಿದ್ದು, ಕೊರೊನಾ ಸಂದರ್ಭದಲ್ಲಿ ಒಂದೆಡೆ ಜನರು ಸಾಯುತ್ತಿದ್ದರೆ ಹೆಣದ ರಾಶಿ ಮೇಲೆ ಲೂಟಿ ಮಾಡಿದವರು ಈಗ ನಮ್ಮ ವಿರುದ್ಧ ಮಾತನಾಡಲು ಅರ್ಹತೆ ಇದ್ದೀಯಾ. ಇವರ ಎಲ್ಲಾ ಹಗರಣಗಳನ್ನು ಸಿಎಂ ಮತ್ತು ಡಿಸಿಎಂ ಹೊರತರುತ್ತಾರೆ ಎಂದು ಈ ರೀತಿ ನಾಟಕ ಮಾಡುತ್ತಿದ್ದಾರೆ. ಜೆಡಿಎಸ್, ಬಿಜೆಪಿಗೆ ಉತ್ತಮ ಆಡಳಿತ ನೀಡುವ ಮೂಲಕ ಉತ್ತರ ನೀಡೋಣ. ಎಂದು ಕರೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಿನಾ ಕಾರಣ ನೋಟಿಸ್ ನೀಡುವ ಮೂಲಕ ಪಕ್ಷಪಾತ ದಿಂದ ವರ್ತಿಸುತ್ತಿರುವ ಕರ್ನಾಟಕದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಈ ಕೂಡಲೇ ರಾಷ್ಟ್ರಪತಿಗಳು ವಾಪಸ್ ಕರೆಸಿಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಎನ್‌ಡಿಎ ಮೈತ್ರಿಕೂಟಕ್ಕೆ ಧಕ್ಕೆಯಾದರೆ ನಿಮ್ಮನ್ನು ಪಕ್ಷದಿಂದ ಉಚ್ಚಾಟಿಸಬೇಕಾಗುತ್ತೆ...

ರಾಜ್ಯ ಬಿಜೆಪಿ ಉಪಾಧ್ಯಕ್ಷ, ಮಾಜಿ ಶಾಸಕ ಪ್ರೀತಂಗೌಡರಿಗೆ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಎಚ್ಚರಿಕೆ

ಬೆಂಗಳೂರು, ಆ.9(ಕೆಎಂಶಿ) – ಎನ್‌ಡಿಎ ಮೈತ್ರಿ ಕೂಟಕ್ಕೆ ಧಕ್ಕೆ ತರುವ ರೀತಿಯಲ್ಲಿ ನಡೆದು ಕೊಂಡರೆ ನಿಮ್ಮನ್ನು ಪಕ್ಷದಿಂದ ಉಚ್ಚಾಟಿಸಬೇ ಕಾಗುತ್ತದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ರಾಜ್ಯ ಬಿಜೆಪಿ ಉಪಾಧ್ಯಕ್ಷ ಹಾಗೂ ಮಾಜಿ ಶಾಸಕ ಪ್ರೀತಂಗೌಡ ಅವರಿಗೆ ಅಂತಿಮ ಎಚ್ಚರಿಕೆ ನೀಡಿದ್ದಾರೆ.



ಜೆ.ಪಿ. ನಡ್ಡಾ

ಭ್ರಷ್ಟಾಚಾರ ಆರೋಪಕ್ಕೆ ಒಳಗಾಗಿರುವ ಸಿಎಂ ಸಿದ್ದರಾಮಯ್ಯ ವಿರುದ್ಧ ಹಮ್ಮಿ ಕೊಂಡಿರುವ ಬೆಂಗಳೂರು–ಮೈಸೂರು ಪಾದಯಾತ್ರೆ ಸಂದರ್ಭ ದಲ್ಲಿ ಪ್ರೀತಂಗೌಡ ಅವರ ಬೆಂಬಲಿಗರು ಮಂಡ್ಯ ದಲ್ಲೇ ಗಲಾಟೆ ಎಬ್ಬಿಸಿದ್ದರು. ಸರಾಗವಾಗಿ ಸಾಗಿದ್ದ ಪಾದಯಾತ್ರೆಯಲ್ಲಿ ಎನ್‌ಡಿಎ ಮೈತ್ರಿಕೂಟದ ಕಾರ್ಯಕರ್ತರೇ ರಸ್ತೆಯಲ್ಲಿ ಗುದ್ದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಘಟನೆಯಿಂದ ಬೇಸರಗೊಂಡ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು, ನಡ್ಡಾ ಅವರನ್ನು ಮನೆಗೆ ಕರೆಸಿಕೊಂಡು, ಪಾದಯಾತ್ರೆ ಮತ್ತು ಅದರ ಹಿಂದಿರುವ ಶಕ್ತಿಗಳ ಬಗ್ಗೆ ಮಾಹಿತಿ ನೀಡಿದರು.


ಗೌಡರಿಂದ ಮಾಹಿತಿ ಪಡೆದ ನಡ್ಡಾ, ಪ್ರೀತಂ ಗೌಡ ಅವರನ್ನು ದೂರವಾಣಿ ಮೂಲಕ ನೇರವಾಗಿ ಸಂಪರ್ಕಿಸಿ, ಇಂತಹ ಚಟುವಟಿಕೆಗಳನ್ನು ಮುಂದುವರೆಸಿದರೆ, ನೇರ ಕ್ರಮ ಕೈಗೊಳ್ಳಬೇಕಾಗುತ್ತದೆ, ಮತ್ತೆ ಎಚ್ಚರಿಕೆ ಇರುವುದಿಲ್ಲ ಎಂದಿದ್ದಾರೆ.

ನಿಧನ



ಶಿವಲಿಂಗೇಗೌಡ


ಮೈಸೂರು, ಆ.9– ಶಿವ ಡ್ರಾಮಾ ಸೀನರಿ ಮಾಲೀಕರು, ಹೆಸರಾಂತ ರಂಗಭೂಮಿ ಕಲಾವಿದರೂ ಆದ ಶಿವಲಿಂಗೇಗೌಡರು ಶುಕ್ರವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಶನಿವಾರ) ಬೆಳಗ್ಗೆ 11 ಗಂಟೆಗೆ ಮಂಡ್ಯದ ಕಾರಸವಾಡಿ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಶಿವಲಿಂಗೇಗೌಡರ ನಿಧನಕ್ಕೆ ಎಸ್.ಎಂ.ಕೃಷ್ಣ ಅಭಿಮಾನಿ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ ಸಂತಾಪ ಸೂಚಿಸಿದ್ದಾರೆ.



ಜಯರಾಮೇಗೌಡ

ಚಿನಕುರಳಿ: ಚಿನಕುರಳಿ ಗ್ರಾಪಂ ಮಾಜಿ ಅಧ್ಯಕ್ಷ ಜಯರಾಮೇಗೌಡ(65) ಶುಕ್ರವಾರ ನಿಧನರಾದರು. ಜಯರಾಮೇಗೌಡರು ಚಿನಕುರಳಿ ಗ್ರಾಪಂ ಅಧ್ಯಕ್ಷರಾಗಿದ್ದರು, ಅನಾರೋಗ್ಯದಿಂದ ಶುಕ್ರವಾರ ಮೃತಪಟ್ಟರು. ಇವರ ಅಂತ್ಯಕ್ರಿಯೆ ಯನ್ನು ಶನಿವಾರ ಬೆಳಿಗ್ಗೆ 10.30ಕ್ಕೆ ಸ್ವಗ್ರಾಮ ಚಿನಕುರಳಿಯಲ್ಲಿ ನಡಯಲಿದ್ದು, ಮೃತರು ಪತ್ನಿ ರತ್ನಮ್ಮ, ಇಬ್ಬರು ಗಂಡು ಮಕ್ಕಳು ಸೇರಿದಂತೆ ಅಪಾರ ಬಂಧುಬಳಗವನ್ನು ಹಗಲಿದ್ದಾರೆ. ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ, ಹಾಲು ಉತ್ಪಾದಕರ ಸಹಕಾರದ ಸಂಘದ ಅಧ್ಯಕ್ಷ ಸಿ.ಶಿವಕುಮಾರ್ ಸೇರಿದಂತೆ ಹಲವರು ಗಣ್ಯರು ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದ್ದರು.

ಮಾಜಿ ಸೈನಿಕ ಎಂ.ಎ.ಭೀಮಯ್ಯ



ಮೈಸೂರು, ಆ.9– ಮಾಜಿ ಸೈನಿಕ ಮಚ್ಚರಂಡ ಅಪ್ಪಯ್ಯ ಭೀಮಯ್ಯ (80) ಶುಕ್ರವಾರ ವಿಜಯನಗರದ ತಮ್ಮ ನಿವಾಸದಲ್ಲಿ ನಿಧನರಾದರು. ದಿವಂಗತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ವಿರಾಜಪೇಟೆ ತಾಲೂಕಿನ ಕಣ್ಣಂಗಾಲ ಗ್ರಾಮದ ಅಮ್ಮತ್ತಿ ಒಂಟಿ ಅಂಗಡಿ ಪೋಸ್ಟ್‌ನಲ್ಲಿ ಶುಕ್ರವಾರ ಸಂಜೆ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮರಕ್ಕೆ ಬೈಕ್ ಡಿಕ್ಕಿ: ಇಬ್ಬರು ಸವಾರರು ಸಾವು


ಮಡಿಕೇರಿ, ಆ.9–ಬೈಕ್ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸವಾರರು ಮೃತಪಟ್ಟಿರುವ



ಘಟನೆ ಸುಂಟಿಕೊಪ್ಪ–ಮಡಿಕೇರಿ ಸಮೀಪ ರಾಷ್ಟ್ರೀಯ ಹೆದ್ದಾರಿಯ ಶಾಂತಿಗೇರಿಯಲ್ಲಿ ಗುರುವಾರ ರಾತ್ರಿ ನಡೆದಿದೆ.

ಪಿರಿಯಾಪಟ್ಟಣ ತಾಲೂಕಿನ ನವಿಲೂರು ಗ್ರಾಮದ ಆಕಾಶ್ ಹಾಗೂ ಪ್ರಸನ್ನ ಮೃತಪಟ್ಟಿದ್ದು, ಇಬ್ಬರು ಕಟ್ಟಡ ನಿರ್ಮಾಣದ ಸೆಂಟ್ರಿಂಗ್ ಕೆಲಸಕ್ಕಾಗಿ ಪಿರಿಯಾಪಟ್ಟಣದಿಂದ ಮಡಿಕೇರಿಗೆ ಬರುತ್ತಿದ್ದಾಗ ಶಾಂತಿಗೇರಿ ಹೆದ್ದಾರಿಯ ಮರಕ್ಕೆ ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ಆಕಾಶ್ ಸ್ಥಳದಲ್ಲೇ ಮೃತಪಟ್ಟರೆ, ಪ್ರಸನ್ನ ಚಿಕಿತ್ಸೆ ಫಲಕಾರಿಯಾಗದೆ ಮಡಿಕೇರಿಯ ಜಿಲ್ಲಾ ಆಸ್ಪತ್ರೆ ಯಲ್ಲಿ ಅಸುನೀಗಿದ್ದಾರೆ. ಸುಂಟಿಕೊಪ್ಪ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇಂದು ವಯನಾಡಿಗೆ ಮೋದಿ ಭೇಟಿ



ನವದೆಹಲಿ, ಆ.9– ಕೇರಳದ ಭೂಕುಸಿತ ಪೀಡಿತ ವಯನಾಡು ಜಿಲ್ಲೆಗೆ ನಾಳೆ (ಶನಿವಾರ) ಪ್ರಧಾನಿ ನರೇಂದ್ರ ಮೋದಿ ಅವರು ಭೇಟಿ ನೀಡಲಿದ್ದು, ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳನ್ನು ಪರಿಶೀಲನೆ ನಡೆಸಲಿದ್ದಾರೆ. ಮೋದಿ ಅವರು ನಾಳೆ ಬೆಳಿಗ್ಗೆ 11 ಗಂಟೆಗೆ ಕಣ್ಣೂರು ತಲುಪಲಿದ್ದಾರೆ. ಅಲ್ಲಿಂದ ಅವರು ವಯನಾಡಿನಲ್ಲಿ ಭೂಕುಸಿತ ಪೀಡಿತ ಪ್ರದೇಶದ ವೈಮಾನಿಕ ಸಮೀಕ್ಷೆ ನಡೆಸಲಿದ್ದಾರೆ. ಮಧ್ಯಾಹ್ನ 12:15ರ ಸುಮಾರಿಗೆ ಭೂಕುಸಿತ ಪೀಡಿತ ಪ್ರದೇಶಕ್ಕೆ ಭೇಟಿ ನೀಡಲಿದ್ದಾರೆ. ರಕ್ಷಣಾ ಕಾರ್ಯಾಚರಣೆ ಮತ್ತು ಪುನರ್ವಸತಿ ಕಾರ್ಯಗಳ ಬಗ್ಗೆ ರಕ್ಷಣಾ ಪಡೆಗಳಿಂದ ಮಾಹಿತಿ ಪಡೆಯಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಿರಾಶ್ರಿತರ ಶಿಬಿರ ಮತ್ತು ಆಸ್ಪತ್ರೆಗೆ ಭೇಟಿ ನೀಡಲಿದ್ದು, ಸಂತ್ರಸ್ತರೊಂದಿಗೆ ಸಂವಾದ ನಡೆಸಲಿದ್ದಾರೆ. ನಂತರ ಮೋದಿ ಅವರು ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿದುಬಂದಿದೆ.

Promotional Feature

ಹಗರಣಗಳ ಸರದಾರ ಕಾಂಗ್ರೆಸ್ ಸರ್ಕಾರ

ಸಿದ್ದರಾಮಯ್ಯ ರಾಜೀನಾಮೆಯೇ ಪರಿಹಾರ



ಬೆಂಗಳೂರು: ಕಾಂಗ್ರೆಸ್ ಸರ್ಕಾರವನ್ನು ಜನ-ಸಾಮಾನ್ಯರು ಪ್ರಶ್ನಿಸುವ ಮಟ್ಟಿಗೆ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಗರಣ, ಮುಡಾ ನಿವೇಶನಗಳ ಹಂಚಿಕೆ ಅಕ್ರಮವು ಚರ್ಚೆಯ ಕೇಂದ್ರ ಬಿಂದುವಾಗಿ ರಾಷ್ಟ್ರಮಟ್ಟದಲ್ಲೂ ಗಮನಸೆಳೆದಿವೆ.

'ಅಹಿಂದ' ಹೆಸರು ಹೇಳಿಕೊಂಡು ಅಧಿಕಾರ, ಸಾಮಾಜಿಕ ನ್ಯಾಯದ ಬಗ್ಗೆ ಪುಂಖಾನುಪುಂಖವಾಗಿ ಸಾರುತ್ತಾ ಬಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಈ ಹಗರಣಗಳು ಸುತ್ತುವರಿದಿವೆ.

ಭ್ರಷ್ಟಾಚಾರಮುಕ್ತ ಆಡಳಿತ ಕೊಡುತ್ತೇವೆ ಎಂದು ಭರವಸೆಯಿತ್ತವರು, ಅಧಿಕಾರದ ಗದ್ದುಗೆ ಏರಿದ 15 ತಿಂಗಳಲ್ಲಿ ಹೀಗಾ ಮಾಡೋದು? ಎಂದು ಜನರು ನೇರವಾಗಿ ಕೇಳುತ್ತಿದ್ದಾರೆ. ಭ್ರಷ್ಟ ಸರ್ಕಾರದ ವಿರುದ್ಧ ಜನರ ಪರವಾಗಿ ಧ್ವನಿ ಎತ್ತುವುದು ಪ್ರತಿಪಕ್ಷಗಳ ಜವಾಬ್ದಾರಿ. ಪ್ರತಿಪಕ್ಷಗಳ ಹೋರಾಟವು ತಮ್ಮನ್ನೇ ಗುರಿ ಮಾಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾವಿಸುವುದು ಏಕೆ? ಸಿದ್ದರಾಮಯ್ಯ ಹೆಸರು ತಳುಕು ಹಾಕಿಕೊಂಡ ಕಾರಣ ಅವ್ಯವಹಾರ, ಅಕ್ರಮಗಳನ್ನು ಮಟ್ಟಹಾಕಬೇಕಾದ ಸರ್ಕಾರ ಕೈಚೆಲ್ಲಿ ಕುಳಿತಿದೆ ಎಂಬ ಸಂದೇಹ ಬಲವಾಗಿದೆ.

ಎರಡೂ ಹಗರಣಗಳ ಬಗ್ಗೆ ವಿಧಾನ ಮಂಡಲದಲ್ಲಿ ಸರ್ಕಾರ ಸ್ಪಷ್ಟವಾಗಿ ಉತ್ತರಿಸಲಿಲ್ಲ. ಮುಡಾ ವಿಚಾರ ಪ್ರಸ್ತಾಪಿಸಿದಾಗ ಚರ್ಚೆಗೂ ಅವಕಾಶ ಕೊಡದೆ ಮುಖ್ಯಮಂತ್ರಿ ಓಡಿ ಹೋದರು. ಇದು, ಹಗರಣಗಳಲ್ಲಿ ಮುಖ್ಯಮಂತ್ರಿ ಭಾಗಿಯಾಗಿದ್ದಾರೆ ಎನ್ನುವುದು ಮೇಲ್ನೋಟಕ್ಕೆ ಸ್ಪಷ್ಟಪಡಿಸಿತು. ವಂಚಿತ ಜನರ ನ್ಯಾಯಕೊಡಿಸಲು ಬೀದಿಗೆ ಇಳಿದರೆ, ಸರ್ಕಾರ ಅಸ್ಥಿರಗೊಳಿಸುವ ಪ್ರಯತ್ನವೆಂದು ಕಾಂಗ್ರೆಸ್ ನಾಯಕರು ಹೇಳುತ್ತಿರುವುದು ಹಾಸ್ಯಾಸ್ಪದ.

ಅನುಮಾನಾಸ್ಪದ ನಡೆ

ವಾಲ್ಮೀಕಿ ಹಗರಣ, ಮುಡಾ ಅಕ್ರಮ ಬಯಲಿಗೆ ಬಂದ ಹೊಸತರಲ್ಲಿ ಸಿದ್ದರಾಮಯ್ಯ ನಡೆ-ನುಡಿ ಎರಡೂ ಅನುಮಾನಾಸ್ಪದವೇ ಸರಿ. ವಾಲ್ಮೀಕಿ ತನಿಖೆಗೂ ಮುನ್ನವೇ ಅಂದಿನ ಪರಿಶಿಷ್ಟ



ಪಂಗಡಗಳ ಕಲ್ಯಾಣ ಸಚಿವ ಬಿ.ನಾಗೇಂದ್ರಗೆ ಕ್ಲೀನ್‌ಚಿಟ್ ಕೊಟ್ಟು, ನಂತರ ಸಚಿವ ಸ್ಥಾನಕ್ಕೆ ರಾಜೀನಾಮೆ ಪಡೆದರು.

ಆಡಳಿತದ ಚುಕ್ಕಾಣಿ ಹಿಡಿಯುತ್ತಲೇ ಬಿಜೆಪಿ ಆಡಳಿತಾವಧಿಯ ಟೆಂಡರ್‌ಗಳು, ಆದೇಶಗಳ ರದ್ದು ಇಲ್ಲವೇ ತಡೆಹಿಡಿಯಲಾಯಿತು. ಅದೇ ರೀತಿ 50:50 ನಿವೇಶನ ಹಂಚಿಕೆ ನಿಯಮವನ್ನು ರದ್ದು ಮಾಡಲು ಅವಕಾಶವಿತ್ತಲ್ಲ, ಹಾಗೆ ಮಾಡುವ ಬದಲು ಸಿದ್ದರಾಮಯ್ಯ ತಮ್ಮನ್ನು ರಕ್ಷಿಸಿಕೊಳ್ಳುವ ಗುರಾಣಿಯಾಗಿ ಬಳಸಿಕೊಳ್ಳುತ್ತಿದ್ದಾರೆ.

ವರ್ಗಾವಣೆ ದಂಧೆಯಿಂದ ಹಿಡಿದು ಬಯಲಾದ ಅಕ್ರಮಗಳವರೆಗೆ ಕಾಂಗ್ರೆಸ್ ಸರ್ಕಾರ ಹಗರಣಗಳ ಸರದಾರ ಎನ್ನುವುದು ದೃಢಪಟ್ಟಿದೆ. ಸತ್ಯಾಂಶ ಹೊರಬರಲು ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆಯೊಂದೇ ಪರಿಹಾರವಾಗಿದೆ.

ರಕ್ಷಣೆಗೆ ಮುಂದಾಗಿದ್ದೇಕೆ?

ಸಿದ್ದರಾಮಯ್ಯ ತಮಗೆ ತಾವೇ ಕಟ್ಟಿಕೊಂಡ 'ಕ್ಲೀನ್ ಇಮೇಜ್' ಕಿರೀಟ ಕಳಚಿ ಬಿದ್ದಿದೆ. ನಿಜಬಣ್ಣ ಬಯಲಾಗಿದೆ ಎನ್ನುವುದು ರಾಜಕೀಯ ಕಾರಣದ ಆರೋಪ ಅಥವಾ ಟೀಕೆಯಲ್ಲ. ಸಿದ್ದರಾಮಯ್ಯ ಸ್ವತಃ ತಾವೇ ಹೇಳಿಕೊಂಡಿರುವಂತೆ ತಮ್ಮದೇನು ತಪ್ಪಿಲ್ಲದಿದ್ದರೆ, ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಲು, ವ್ಯವಸ್ಥೆ ಸ್ವಚ್ಛಗೊಳಿಸಲು ಅವಕಾಶ ಕಲ್ಪಿಸುವ ಬದಲಿಗೆ ರಕ್ಷಿಸಲು ಹಾತೊರೆದದ್ದು ನಿಚ್ಚಳ.

ನಿಗಮದ ಅಧಿಕಾರಿ ಚಂದ್ರಶೇಖರನ್ ಆತ್ಮಹತ್ಯೆ ಮಾಡಿಕೊಂಡಾಗ ಅವರ ಪತ್ನಿ ಮೇಲೆ ಸ್ಥಳೀಯ ಪೊಲೀಸರು ದಬ್ಬಾಳಿಕೆ, ಒತ್ತಡ ಪ್ರವೃತ್ತಿ ತೋರಿದ್ದರಲ್ಲಿ ಯಾರ ಪ್ರಭಾವ ಕೆಲಸ ಮಾಡಿತು. ಅಕ್ರಮ ಹಣ ವರ್ಗಾವಣೆ ನಿಯಂತ್ರಣ ಕಾಯ್ದೆ (ಪಿಎಂಎಲ್‌ಎ)ಯಡಿ ಜಾರಿ ನಿರ್ದೇಶನಾಲಯ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೆತ್ತಿಕೊಂಡಾಕ್ಷಣ ಅಳುಕು, ಸಂಶಯದ ಗುಲ್ಲು ಹಬ್ಬಿಸಲಾಯಿತು. ಕರ್ತವ್ಯದಲ್ಲಿ ಲೋಪ, ನಿರ್ಲಕ್ಷ್ಯ, ಅದಕ್ಷರೆಂದು ಸಿದ್ದರಾಮಯ್ಯ ತಾವೇ ಅಮಾನತು ಮಾಡಿದ್ದ ಅಧಿಕಾರಿ ಕಲ್ಲೇಶ್, ಇ.ಡಿ ವಿರುದ್ಧ ನೀಡಿದ ದೂರನ್ನೇ ಆಶ್ರಯಿಸಿ, ಮಂತ್ರಿ ಮಂಡಲದ ಸದಸ್ಯರ ಜತೆಗೂಡಿ ಪ್ರತಿಭಟನೆ ನಡೆಸಿದ್ದೂ ವಿಪರ್ಯಾಸದ ಸಂಗತಿ.

ಮುಡಾ ಅಕ್ರಮ ಹೊರಬಿದ್ದಾಗ ನಗರಾಭಿವೃದ್ಧಿ ಮಂತ್ರಿ ರಾತೋರಾತ್ರಿ ಮೈಸೂರಿಗೆ ಓಡಿದಷ್ಟೇ ಬೇಗ ಕಡತಗಳನ್ನು ಹೊತ್ತುಕೊಂಡು ಬೆಂಗಳೂರಿಗೆ ಮರಳಿದರು. ಮುಡಾದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮವಹಿಸುವ ಬದಲಿಗೆ ವರ್ಗಾವಣೆ ಶಿಕ್ಷೆಯನ್ನು ಸಿದ್ದರಾಮಯ್ಯ ನೀಡಿದರು.

ವಿಧಾನ ಮಂಡಲ ಅಧಿವೇಶನ ದಿನಾಂಕ ನಿಗದಿಯಾಯಿತು. ಅದರ ಬೆನ್ನಲ್ಲೇ ಮುಡಾ ಪ್ರಕರಣದ ತನಿಖೆಗೆ ಹೈಕೋರ್ಟ್ ನಿವೃತ್ತ ನ್ಯಾಯಾಧೀಶರ ನೇತೃತ್ವದ ಆಯೋಗ ರಚಿಸಲಾಯಿತು.

ಅಂದರೆ, ಅಧಿವೇಶನದಲ್ಲಿ ಪ್ರತಿಪಕ್ಷಗಳ ಬಾಯಿ ಮುಚ್ಚಿಸಲು ಈ ತಂತ್ರ ಹೂಡಲಾಯಿತು. ನ್ಯಾಯಾಂಗ ತನಿಖೆ ಹೇಗಿರುತ್ತದೆ, ವರದಿ ಏನಾಗುತ್ತದೆ ಎಂಬುದು ಸಿದ್ದರಾಮಯ್ಯಗೆ ಚೆನ್ನಾಗಿ ಗೊತ್ತು. ಅರ್ಕಾವತಿ ಬಡಾವಣೆ 'ರಿಡೂ' ಪ್ರಕರಣದ ನ್ಯಾಯಾಂಗ ತನಿಖಾ ವರದಿ ಗತಿಯೇ ಈ ಮಾತಿಗೆ ಸ್ಪಷ್ಟ ನಿದರ್ಶನ.

ಶೋಷಿತ ಸಮುದಾಯದ ಅಧಿಕಾರಿ/ಸಿಬ್ಬಂದಿ ಸಾವು

- ಅಕ್ರಮ ಹಣ ವರ್ಗಾವಣೆಗೆ 'ಬಲಿಪಶು'ವಾಗಲು ಸಿದ್ಧವಿಲ್ಲದೆ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧೀಕ್ಷಕ ಚಂದ್ರಶೇಖರನ್ ಆತ್ಮಹತ್ಯೆಗೆ ಶರಣು
- ವರ್ಗಾವಣೆ ದಂಧೆಯ ದಾಹ ತಣಿಸಲು ಪ್ರಯತ್ನಿಸಿ ಸೋತ ಯಾದಗಿರಿ ಪಿಎಸ್‌ಐ ಪರಶುರಾಮ್ ಅನುಮಾನಾಸ್ಪದ ಸಾವು
- ಅಕ್ರಮ ಮರಳು ಸಾಗಣೆ ತಡೆಗೆ ಮುಂದಾದ ಕಲಬುರಗಿ ಜಿಲ್ಲೆ ನೆಲೋಗಿ ಠಾಣೆಯ ಮುಖ್ಯಪೇದೆ ಮಯೂರ ಎನ್ನುವವರ ಮೇಲೆ ವಾಹನ ಚಲಾಯಿಸಿ ಹತ್ಯೆ
- ಕಲಬುರಗಿ ಜಿಲ್ಲೆಯ ಶಹಪುರ ಉಪವಲಯ ಅರಣ್ಯಾಧಿಕಾರಿ ಹಿಂದುಳಿದ ವರ್ಗಕ್ಕೆ ಸೇರಿದ ಮಹೇಶ್ ಕನಕಟ್ಟಿ ಬರ್ಬರ ಕೊಲೆ

ಇಂದು ಸಮಾರೋಪ

ಮೈಸೂರು ಚಲೋ ಪಾದಯಾತ್ರೆ ಇಂದು ಬೃಹತ್ ಸಮೇಳನದ ಮೂಲಕ ಸಮಾರೋಪಗೊಳ್ಳಲಿದ್ದು ರಾಜ್ಯ ಕೇಂದ್ರ ನಾಯಕರು ಭಾಗವಹಿಸಲಿದ್ದಾರೆ. ಸಾರ್ವಜನಿಕರು ಲಕ್ಷ ಲಕ್ಷ ಸಂಖ್ಯೆಯಲ್ಲಿ ಭಾಗವಹಿಸಿ ಹಗರಣಗಳ ಕಾಂಗ್ರೆಸ್ ಸರ್ಕಾರವನ್ನು ಕೊನೆಗೊಳಿಸಬೇಕಿದೆ



ವಾಲ್ಮೀಕಿ ಹಗರಣ ಏನು- ಎತ್ತ ?

ಸಿದ್ದರಾಮಯ್ಯ ಹೇಗೆ ಹೊಣೆಗಾರರು

ಬೆಂಗಳೂರು: ಕಾಂಗ್ರೆಸ್ ಸರ್ಕಾರ ರಚನೆಯಾಗಿ ಒಂದು ವರ್ಷ ಪೂರ್ಣ ಗೊಂಡ ಸಂದರ್ಭದಲ್ಲಿಯೇ ವಾಲ್ಮೀಕಿ ಹಗರಣ ಹೊರ ಬಿದ್ದಿತು. ಈ ಸರ್ಕಾರ ಬಂದಾಗಲೆಲ್ಲ ಹಗರಣ ಎಂದು ಪ್ರತಿಪಕ್ಷದ ಆರೋಪಕ್ಕೆ ತಕ್ಕಂತೆ ಈ ಪ್ರಕರಣದಲ್ಲಿ 'ರೆಡ್ ಹ್ಯಾಂಡ್' ಹಾಗಿ ಸಿಕ್ಕಿಬಿದ್ದಿತು.

ಹಗರಣ ನಡೆದೇ ಇಲ್ಲ ಎಂದು ಹೇಳುವ ಸ್ಥಿತಿಯಲ್ಲಿ ಸರ್ಕಾರವಿಲ್ಲ. ಪರಿಶಿಷ್ಟ ಪಂಗಡದ ಜನರಿಗೆ ವಿವಿಧ ಯೋಜನೆಗಳಡಿ ತಲುಪಬೇಕಿದ್ದ ಹಣದ ಮೇಲೆ ಕಣ್ಣಿಟ್ಟು, ಅದನ್ನು ಬೇನಾಮಿ ಖಾತೆಗೆ ವರ್ಗಾಯಿಸಲು ವ್ಯವಸ್ಥೆ ರೂಪಿಸಿರುವುದು ಇದರಿಂದ ಸ್ಪಷ್ಟವಾಗಿ ಗೋಚರಿಸಿದೆ. ಮುಖ್ಯವಾಗಿ ಪ್ರಭಾವಿಗಳ ಹಸ್ತಕ್ಷೇಪ ಇಲ್ಲದೆ ಇಷ್ಟೊಂದು ಧೈರ್ಯವಾಗಿ ಹಣ ವರ್ಗಾವಣೆ ಅಸಾಧ್ಯದ ಮಾತು.

ಒಟ್ಟಾರೆ 187.5 ಕೋಟಿ ರೂ. ಹಗರಣದಲ್ಲಿ, 94.5 ಕೋಟಿ ರೂ.ಗಳನ್ನು 16 ಉದ್ಯಮಗಳಿಗೆ 4-6 ಕೋಟಿ ರೂ. ವರ್ಗಾವಣೆಯಾಗಿರುವುದು ಕಂಡು ಬಂದಿದೆ, ರಾಜ್ಯದಲ್ಲಿ 3 ಕೋಟಿ ರೂ. ಗೂ ಹೆಚ್ಚಿನ ಹಣ ಬಿಡುಗಡೆಯಾಗಬೇಕಾದಂತಹ ಸಂದರ್ಭದಲ್ಲಿ ಕಡತಗಳನ್ನು ಸರ್ಕಾರದ ಹಣಕಾಸು ಇಲಾಖೆಗೆ ಕಳಿಸುವುದು ವಾಡಿಕೆ, ಈ 16 ಉದ್ಯಮಗಳಿಗೆ ಕೊಟ್ಟಿರುವ ಮೊತ್ತ ಕನಿಷ್ಠ 4.12 ಕೋಟಿ ರೂ., ಗರಿಷ್ಠ 5.98 ಕೋಟಿ ರೂ., ಅಂದರೆ ಇದರ ಕಡತಗಳು ಹಣಕಾಸು ಸಚಿವಾಲಯಕ್ಕೆ ಹೋಗಿರುವುದು ಕಂಡು ಬರುತ್ತದೆ. ಅಂದ ಮೇಲೆ ಸಿಎಂ ಮೂಗಿನ ನೇರಕ್ಕೇ ಹಣ ವರ್ಗಾವಣೆಯಾಗಿದೆ ಎಂದರ್ಥ. ಇದೇ ಕಾರಣಕ್ಕೆ ಹಣಕಾಸು ಸಚಿವರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇದಕ್ಕೆ ನೇರ-ಹೊಣೆ ಆಗುತ್ತಾರೆ ಎಂಬುದರಲ್ಲಿ ಅನುಮಾನವೇ ಇಲ್ಲ.

ಇನ್ನೊಂದು ಅಂಶವೆಂದರೆ ಹೊಸದಾಗಿ ಇಲಾಖೆಗಳು ಸರ್ಕಾರಿ ಖಾತೆಗಳನ್ನು ತೆರೆಯಬೇಕೆಂದಾಗ ಮತ್ತು 100 ಕೋಟಿ ರೂ. ಗೂ ಮೀರಿದ ಮೊತ್ತವನ್ನು ಇನ್ನೊಂದು ಖಾತೆಗೆ ವರ್ಗಾವಣೆ ಮಾಡಬೇಕಾದಾಗ, ಸರ್ಕಾರವೇ ರೂಪಿಸಿದ ನಿಯಮಗಳ ಪ್ರಕಾರ ಆರ್ಥಿಕ ಇಲಾಖೆಯಿಂದ ಅನು ಮೋದನೆ ಪಡೆಯಲೇಬೇಕು, ಹಣಕಾಸು ಸಚಿವರಾಗಿರುವ ತಾವು ಮತ್ತು ತಮ್ಮ ಅಧಿಕಾರಿಗಳ ಪೂರ್ವ ಒಪ್ಪಿಗೆ ಇಲ್ಲದೆ ಇನ್ನೊಂದು ಖಾತೆ ತೆರೆಯಲು ಬಿಟ್ಟಿದ್ದು ಹೇಗೆ ಎಂಬುದೇ ಪ್ರಶ್ನೆ. ಅಥವಾ ಅದು ಮೌಖಿಕ ಸೂಚನೆಯಾಗಿತ್ತೇ ಎಂದು ಈಗ ಪ್ರಶ್ನೆ ಎದ್ದಿದೆ.ಅದಲ್ಲದೆ ಉಳಿದಿರುವ ಮೊತ್ತದಲ್ಲಿ 89 ಕೋಟಿ ರೂ. ಮೊತ್ತವನ್ನು 700 ಮಂದಿಗೆ ವರ್ಗಾವಣೆ ಮಾಡಿರುವುದು ಕಂಡುಬರುತ್ತಿದೆ. ಇವರೆಲ್ಲ ನಿಗಮದ ಅಧಿಕಾರಿಗಳ ಸಂಪರ್ಕದಲ್ಲಿರುವ ಸ್ನೇಹಿತರು ಮತ್ತು ಹಗರಣದಲ್ಲಿ ಪಾಲುದಾರರಾದವರ ಖಾತೆ ಎಂದು ಕಂಡುಬರುತ್ತದೆ.

ಸತ್ಯ ರಾಜವರ್ಮ ಮತ್ತು ಸಾಯಿ ತೇಜಾ ಎನ್ನುವ ಸಂಪರ್ಕದಲ್ಲಿದ್ದಂತಹ ಈ 700 ಮಂದಿ ವಾಲ್ಮೀಕಿ ಜನಾಂಗಕ್ಕೆ ಸೇರಿದವರಲ್ಲ ಎನ್ನುವುದು ಸ್ಪಷ್ಟವಾಗಿದೆ.

ಅಂದರೆ ರಾಜ್ಯದ ಪರಿಶಿಷ್ಟರಿಗೆ ಸೇರಬೇಕಾಗಿದ್ದ ಹಣ ಬೇನಾಮಿ ಖಾತೆಗೆ ವರ್ಗಾವ ಣೆಯಾಗಿದೆ. ಅಲ್ಲದೆ ಈ ಖಾತೆಗಳಿಗೆ 5 ಲಕ್ಷದಿಂದ 2 ಕೋಟಿ ರೂ.ಗಳಷ್ಟು ಮೊತ್ತ ವರ್ಗಾವಣೆಗೊಂಡಿರುವುದು ಖಚಿ ತವಾಗಿದೆ. ಆದರೆ ಯಾವ ಕಾರಣಕ್ಕೆ ನೀಡಿ ದ್ದಾರೆ ಎನ್ನುವ ಬಳಕೆ ಪ್ರಮಾಣ ಪತ್ರಗಳು ಲಗತ್ತಿಸಿಲ್ಲ ಎನ್ನುವುದು ಎಸ್‌ಐಟಿ ತಂಡ ಈಗಾಗಲೇ ಕಂಡುಕೊಂಡಿರುವ ಮಾಹಿತಿ.

ಇಷ್ಟೇ ಅಲ್ಲದೆ ಕೇಂದ್ರ ಸರ್ಕಾರ ರಾಜ್ಯದ ಪರಿಶಿಷ್ಟ ಪಂಗಡಗಳಿಗೆ ಅಭಿವೃದ್ಧಿಗೊಳ್ಳಲು 2022-23 ನೇ ಸಾಲಿನಲ್ಲಿ 42.97 ಕೋಟ ರೂ. ಮತ್ತು 2023-24ನೇ ಸಾಲಿನಲ್ಲಿ 40.70 ಕೋಟಿ ಮೂಲಸೌಕರ್ಯ ಅಭಿವೃದ್ಧಿ ಮತ್ತು ವಸತಿ ಸ್ಥಳ ಅಭಿವೃದ್ಧಿಗೊಳ್ಳಲು ನೀಡಿರುವ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಕಳೆದ 13 ತಿಂಗಳಲ್ಲಿ ಕೊಟ್ಟಿಲ್ಲ ಎನ್ನುವುದು ಗಮನಾರ್ಹವಾದಂತಹ ವಿಚಾರ. ಅಂದರೆ ಈ 83 ಕೋಟಿ ರೂ.ಗಳನ್ನೂ ಇದೇ ರೀತಿ ನುಂಗಿದ್ದಾರೆ ಎಂಬ ಅನುಮಾನವಿದೆ.





ಮುಡಾ ಅಕ್ರಮದ ಆಳ-ಅಗಲವೆಷ್ಟು?

ಸಿಎಂ ಸಿದ್ದರಾಮಯ್ಯ ಪಾಲೆಷ್ಟು

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ)ನಡೆದಿರುವ ನಿವೇಶನ ಹಂಚಿಕೆ ಅಕ್ರಮದ ಆಳ-ಅಗಲ ಲೆಕ್ಕಕ್ಕೇ ಸಿಗುತ್ತಿಲ್ಲ. ಜಮೀನು ಸಂಬಂಧ ನಕಲಿ ದಾಖಲೆ ಸೃಷ್ಟಿ, ಸ್ವಜನ ಪಕ್ಷಪಾತ, ಇಲ್ಲದ ಭೂಮಿಗೆ ಪರಿಹಾರ ರೂಪದಲ್ಲಿ ನಿವೇಶನ ಪಡೆಯುವಿಕೆ, ಪರಿಹಾರ ಪಡೆಯುವಾಗಲೂ ನಿಯಮಗಳ ಸ್ಪಷ್ಟ ಉಲ್ಲಂಘನೆ ಸೇರಿ ಹಲವು ಅಕ್ರಮ ವಿಕ್ರಮ ಸಾಧಿಸಿರುವುದು ನಿಚ್ಚಳವಾಗಿದೆ.

ನಿವೇಶನ ಪಡೆದಾಗ ನಮ್ಮ ಸರ್ಕಾರ ಇರಲಿಲ್ಲ, ನಾವು ಕೈಯಾಡಿಸಿದ್ದರ ಬಗ್ಗೆ ದಾಖಲೆಯೂ ಇಲ್ಲ, ತುಂಡು ಕಾಗದವೂ ಇಲ್ಲ ಎಂದು ಪ್ರಕರಣದಿಂದ ನುಣುಚಿಕೊಳ್ಳಲು ಸಾಧ್ಯವಾಗುವುದಿಲ್ಲ, ಜನರಿಗೆ ಉತ್ತರ ಕೊಡಲೇ ಬೇಕಾಗುವ ಸಂದರ್ಭ ಬಂದಿದೆ. ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ 14 ನಿವೇಶನ ಪಡೆದುಕೊಂಡಿದ್ದು ಸಾಮಾನ್ಯ ವಿಷಯವೇನಲ್ಲ. ಈ ನಿವೇಶನ ಪಡೆದ ವಿಧಾನ, ಅದಕ್ಕೂ ಮುನ್ನ ಯಾವ ಉದ್ದೇಶಕ್ಕೆ ಪರಿಹಾರ ಪಡೆದರು, ಯಾವ ಸಂದರ್ಭದಲ್ಲಿ ಪಡೆದರು, ಯಾವ ಭೂಮಿಗೆ ಪರ್ಯಾಯ ಪಡೆದರು ಎಂಬುದನ್ನು ಕೆದಕುತ್ತಾ ಹೋದಾಗ ಅನೇಕ ಅನುಮಾನಾಸ್ಪದ ಸಂಗತಿ ಕಾಣಸಿಗುತ್ತವೆ.

ಭೂಸ್ವಾಧೀನ ಪಡಿಸಿಕೊಳ್ಳಬೇಕಾದಾಗ 2013ರಲ್ಲಿ ಆದ ಕಾನೂನು ಮುಡಾದಲ್ಲಿ ಲಾಗು ಆಗಿದ್ದು 2017ರಲ್ಲಿ, ಇದರಲ್ಲಿ ಇನ್ನು ಮುಂದೆ ಭೂಸ್ವಾಧೀನ ಪಡಿಸಿಕೊಳ್ಳುವ ಭೂಮಿಗಳಿಗೆ ಮಾತ್ರ 50:50 ಅನುಪಾತ ಎಂದಿದೆ?. ಆದರೆ ತಮ್ಮ ಪತ್ನಿ ಒಡೆತನದ ಭೂಮಿ ಸರ್ವೆ ನಂ. 464 ಭೂಸ್ವಾಧೀನ ಪಡಿಸಿಕೊಂಡಿದ್ದು 6/1 1998. ಅಂದರೆ ಹಿಂದೆ ವಶಪಡಿಸಿಕೊಂಡಿದ್ದ ಭೂಮಿಗೂ ಸಹ 50:50 ಅನುಪಾತದಲ್ಲಿ ನಿವೇಶನ ಪಡೆದುಕೊಂಡಿರುವುದು ಉಲ್ಲಂಘನೆಯ ಒಂದು ಉದಾಹರಣೆ.

ಕೆಟಿಸಿಪಿ ಕಾಯ್ದೆ 1962 ಪ್ರಕಾರ ಶೇ.25 ಅನುದಾನದಲ್ಲಿ ಬಿಡಿ ಸೈಟ್ ಪಡೆಯಲು ವಿಶೇಷ ಸಾಧಕರಾಗಿರಬೇಕು. ಇಲ್ಲವೇ ಹರಾಜಿನಿಂದ ಮೂಲಕ ಮಾತ್ರ ಮಾರಾಟ ಮಾಡಬೇಕು. ಸಿಎಂ ಪತ್ನಿ ಯಾವ ವಿಶೇಷ ಸಾಧನೆಯನ್ನು ಮಾಡಿದ್ದಾರೆ? ಎಂಬುದನ್ನು ಜನ ಕೇಳುತ್ತಿದ್ದಾರೆ.ದರ್ಖಾಸ್ತ್ ಮಂಜೂರು ಆಗಿರುವ ಭೂಮಿಯನ್ನು ಮಲ್ಲಿಕಾರ್ಜುನ ಸ್ವಾಮಿಗೆ ಜವರ ಅವರ ಮಗ ದೇವರಾಜ್ ಬರೆದುಕೊಟ್ಟಾಗ ಪಹಣಿ ಯಾರ ಹೆಸರಿನಲ್ಲಿ ಬರುತ್ತಿತ್ತು? ಹಾಗೆಯೇ ಮಲ್ಲಿಕಾರ್ಜುನ್ ಸ್ವಾಮಿಯವರು ಪಾರ್ವತಮ್ಮ ಸಿದ್ದರಾಮಯ್ಯನವರಿಗೆ ದಾನಪತ್ರ ಮಾಡಿಕೊಟ್ಟಾಗ ಪಹಣಿ ಯಾರ ಹೆಸರಿನಲ್ಲಿ ಬರುತ್ತಿತ್ತು? ಎಂದು ಕೆದಕಿದರೆ, ಎಲ್ಲ ದಾಖಲೆಗಳ ಪ್ರಕಾರ ಮುಡಾ ಹೆಸರಿನಲ್ಲಿ ಬರುತ್ತಿತ್ತು ಎಂದಿದೆ. ಹಾಗಿದ್ದರೆ ಭೂಮಿ ಅಸಲಿ ತನದ ಬಗ್ಗೆಯೇ ಅನುಮಾನ ಬರುತ್ತದೆ.

1998ರಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯಿಂದ ಸರ್ವೆ ನಂ.464 ಕೆಸರೆ ಗ್ರಾಮ ಈ ಭೂಮಿಯನ್ನು ಕೈ ಬಿಡಲಾಗಿತ್ತು ಎಂಬ ವಾದ ಮುಖ್ಯಮಂತ್ರಿಯವರು ಮುಂದಿಡುತ್ತಿದ್ದಾರೆ. ಈ ರೀತಿ ಕೈಬಿಟ್ಟ ಸಂದರ್ಭದಲ್ಲಿ ಅದು ವ್ಯವಸಾಯ ಜಮೀನಾಗಿತ್ತು, ಇದು 2004ರಲ್ಲಿ ವ್ಯವಸಾಯೇತರ ಜಮೀನು ಭೂಪರಿವರ್ತನೆಗೊಂಡಿದೆ, ಅದೂ ಈಗಾಗಲೇ ತೀರಿಕೊಂಡಿದ್ದ ಭೂ ಸ್ವತ್ತಿನ ನೈಜ ಮಾಲೀಕರಾದಂತಹ ನಿಂಗ ಎನ್ನುವವರ ಹೆಸರಿನಲ್ಲೇ ಆಗಿದೆ. ಹಾಗಿದ್ದ ಮೇಲೆ ತೀರಿಕೊಂಡವರ ಹೆಸರಿನಲ್ಲಿ ಭೂ ಪರಿವರ್ತನೆ ಸಾಧ್ಯವೇ ಎಂಬ ಪ್ರಶ್ನೆ ಏಳುತ್ತದೆ. ಬಿಜೆಪಿಯ ಅವಧಿಯಲ್ಲಿ ಅಕ್ರಮ ನಡೆದಿದ್ದು ಎಂದು ಆರೋಪಿಸುತ್ತಿದ್ದಾರೆ. ಬಿಜೆಪಿಯ ಅವಧಿಯಲ್ಲಿ ಬೆಳಕಿಗೆ ಬಂದಂತಹ ಪ್ರಕರಣಕ್ಕೆ 2022 ನವೆಂಬರ್‌ನಲ್ಲಿ ಒಂದು ತನಿಖಾ ಸಂಸ್ಥೆಯನ್ನು ನೇಮಿಸಿ, ಯಾವ ರೀತಿ ಅಕ್ರಮಗಳು ಆಗಿವೆ ಎಂದು ವರದಿ ನೀಡುವಂತೆ ಸರ್ಕಾರ ಆದೇಶ ಮಾಡಿತು, ಆ ವರದಿ 2023 ಅಕ್ಟೋಬರ್ ಅಂದರೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಒಪ್ಪಿಸಿದ ಮೇಲೆ ಯಾವ ರೀತಿ ಕ್ರಮಕೈಗೊಂಡರು ಎಂಬುದಕ್ಕೂ ಉತ್ತರವಿಲ್ಲ.

ಅಲ್ಲದೆ ಅಂದಿನ ಜಿಲ್ಲಾಧಿಕಾರಿಗಳು ತಮಗೆ 14 ಪತ್ರಗಳನ್ನು ಬರೆಯುವ ಮೂಲಕ ಸಿಎಂಗೆ ಎಚ್ಚರಿಸುವ ಕೆಲಸವನ್ನು ಮಾಡಿದ್ದರು, ಆದರೆ, ಸಿಎಂ ಹಾಗೂ ತಮ್ಮ ನಗರಾಭಿವೃದ್ಧಿ ಸಚಿವರು ಏನು ಕ್ರಮಗಳನ್ನು ಕೈಗೊಂಡಿದ್ದಾರೆಂಬುದಕ್ಕೆ ಯಾವುದೇ ದಾಖಲೆ ಇಲ್ಲ. ಅಂದರೆ ಪ್ರಕರಣವನ್ನು ಮುಚ್ಚಿಹಾಕುವ ವ್ಯವಸ್ಥೆಯ ಸಂಚಿನ ಭಾಗವಾಗಿಯೇ ಈ ಬೆಳವಣಿಗೆ ಕಾಣಿಸುತ್ತಿದೆ.

ಉತ್ತರ ಸಿಗದ ಪ್ರಶ್ನೆಗಳು?

- ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವಾಗ ಅಷ್ಟು ಮೊತ್ತ ನಿಗಮಕ್ಕೆ ವರ್ಗವಾಗಿದ್ದು ಏಕೆ?
- ನೀತಿ ಸಂಹಿತೆ ಜಾರಿಯಲ್ಲಿದ್ದಾಗಲೇ ನಿಗಮದಿಂದ ತರಾತುರಿಯಲ್ಲಿ ಹಣ ವರ್ಗಾವಣೆ ಅನುಮಾನವಲ್ಲವೇ?
- ರಾಜ್ಯದಲ್ಲೇ ಹಣ ವರ್ಗಾವಣೆಯಾದರೆ ಅನುಮಾನ ಬರುತ್ತದೆಂದು ತೆಲಂಗಾಣಕ್ಕೆ ವರ್ಗ ಮಾಡಿದ್ದು ಅನುಮಾನ ಹುಟ್ಟಿಸುವುದಿಲ್ಲವೇ?
- 3 ಕೋಟಿ ರೂ. ಹೆಚ್ಚಿನ ಮೊತ್ತ 16 ಖಾತೆಗಳಿಗೆ ಹೋಗುವಾಗ ಹಣಕಾಸು ಇಲಾಖೆ ಗಮನಕ್ಕೆ ಬಾರದೇ ಇದ್ದದ್ದು ಹೇಗೆ?
- ಸರ್ಕಾರದ ಹಣ 100 ಕೋಟಿ ರೂ. ಬೇನಾಮಿ ಖಾತೆಗೆ ಯಾರ ಅನುಮತಿ ಪಡೆಯದೆ ವರ್ಗವಾಗಲು ಸಾಧ್ಯವೇ?
- ಸರ್ಕಾರಕ್ಕೂ ಹಣ ವರ್ಗವಣೆಗೂ ಸಂಬಂಧವೇ ಇಲ್ಲ ಎಂಬ ಸಮಜಾಯಿಷಿ ಹಣಕಾಸು ಖಾತೆ ಹೊಂದಿದವರ ಲೋಪ ಎನಿಸಿಕೊಳ್ಳುತ್ತದೆ ಅಲ್ಲವೇ?
- ಸಂಚಿನ ಭಾಗದಲ್ಲಿ ದೊಡ್ಡ ಕೈಗಳಿಲ್ಲದೆಯೇ ಸಣ್ಣಪುಟ್ಟವರು ಕೈಯಾಡಿಸುತ್ತಾರೆಂದು ಹೇಗೆ ತಾನೆ ನಂಬಲು ಸಾಧ್ಯ?
- ಸರ್ಕಾರದ ಅಸಲಿ ಖಾತೆಯಿಂದ ಬೇನಾಮಿ ಖಾತೆಗೆ ವರ್ಗವಾದ ಹಣವೆಲ್ಲವೂ ಒಟ್ಟು ಭ್ರಷ್ಟಾಚಾರದ ಭಾಗವೇ ಅಲ್ಲವೇ?




ಮುಚ್ಚಿಹಾಕುವ ಹುನ್ನಾರ!

ನಿಗಮದ ಅಧಿಕಾರಿ ಚಂದ್ರಶೇಖರನ್ ಆತ್ಮಹತ್ಯೆ ಮಾಡಿಕೊಳ್ಳದೇ ಹೋಗಿದ್ದರೆ ಇಡೀ ಪ್ರಕರಣ ಮುಚ್ಚೇ ಹೋಗುತ್ತಿತ್ತು ಎಂಬುದರಲ್ಲಿ ಅನುಮಾನವೇ ಬೇಡ. ಆತ್ಮಹತ್ಯೆ ಕಾರಣದಿಂದ ಹಗರಣ ಹೊರಬಂತು, ಸರ್ಕಾರದ ಹಣ ಬೇನಾಮಿ ಖಾತೆಗೆ ವರ್ಗಾವಣೆಯಾಗಿದ್ದು ಸರ್ಕಾರವೇ ರಚಿಸಿದ ಎಸ್‌ಐಟಿಯಿಂದಲೇ ಪತ್ತೆಯಾಯಿತು. ಬೇನಾಮಿ ಖಾತೆಗೆ ವರ್ಗವಾದ ಹಣವನ್ನು ಭಾಗಶಃ ವಶಪಡಿಸಿಕೊಳ್ಳಲಾಗಿದೆ, ಸಹಕಾರಿ ಸಂಸ್ಥೆಯಲ್ಲಿ ಇರುವ ಹಣವೂ ನಮಗೇ ಸೇರಿದ್ದು ಎಂದು ಸರ್ಕಾರ ವಾದಿಸುತ್ತಿದೆ. ಈ ಮೂಲಕ ಇದೊಂದು ಗಂಭೀರ ಪ್ರಕರಣ ಅಲ್ಲವೇ ಅಲ್ಲ ಎಂದು ಹಾರಿಕೆ ಉತ್ತರ ನೀಡಿ ತಿಪ್ಪೇ ಸಾರಿಸಲು ಹೊರಟಂತಿದೆ.

5000 ಕೋಟಿ ರೂಪಾಯಿ ಹಗರಣ

ಇದು ಕೇವಲ 14 ನಿವೇಶನದ ವಿಚಾರವಲ್ಲ. ಸಿದ್ದರಾಮಯ್ಯ ಸರ್ಕಾರ ರಚನೆಯಾದ ಬಳಿಕ ಮುಡಾದಿಂದ ಹಂಚಿಕೆಯಾದ ಎಲ್ಲ ನಿವೇಶನಗಳ ಬಗೆಗೂ ತನಿಖೆ ಅತ್ಯವಶ್ಯಕವಾಗಿ ಕಾಣಿಸುತ್ತಿದೆ. ಸರಿಸುಮಾರು ಐದು ಸಾವಿರ ಕೋಟಿ ಮೊತ್ತದ ಹಗರಣವಾಗಿದೆ. ಇದರಲ್ಲಿ ಸಿಎಂ ಅಷ್ಟೇ ಅಲ್ಲ ಸಂಬಂಧಪಟ್ಟ ಸಚಿವರು ಪಾಲುದಾರರು ಎಂಬುದಲ್ಲಿ ಅನುಮಾನವಿಲ್ಲ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಪಾರದರ್ಶಕ ತನಿಖೆ ನಡೆದರೆ ಅವರೂ ಕೂಡ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವ ಪರಿಸ್ಥಿತಿ ಬರಲಿದೆ. ಒಂದು ಲಕ್ಷ ಜನರಿಗೆ ಸೈಟ್ ಸಿಗದೇ ಹೋದರು ಸಿಎಂ ಸಿದ್ದರಾಮಯ್ಯಗೆ 14 ಸೈಟ್ ಸಿಗುತ್ತದೆ ಎಂಬುದು ಸೋಜಿಗದ ಸಂಗತಿ.



ಯಾತ್ರೆ ಹೈಲೈಟ್ಸ್

07	ದಿನಗಳ ಪಾದಯಾತ್ರೆ
130	ಕಿಮೀಗಳ ದೂರ ಅಂತರ
07	ಕಡೆ ಬಹಿರಂಗ ಸಮಾವೇಶ
07	ನಗರಪಟ್ಟಣಗಳಲ್ಲಿ ಜನಜಾತ್ರೆ

- ರಾಜ್ಯದ ವಿವಿಧ ಕಡೆಗಳಿಂದ ಆಗಮಿಸಿದ್ದ ಕಾರ್ಯಕರ್ತರಿಗೆ ಅಚ್ಚುಕಟ್ಟಾದ ವಸತಿ ವ್ಯವಸ್ಥೆ
- ಪ್ರತಿ ದಿನ ಬೆಳಗ್ಗೆ ಉಪಾಹಾರ, ಮಧ್ಯಾಹ್ನ- ರಾತ್ರಿ ಭೋಜನದಲ್ಲಿ ವಿಶೇಷತೆ
- ಕಾರ್ಯಕರ್ತರ ಆರೋಗ್ಯ ಗಮನಿಸಲು ವಿಶೇಷ ತಂಡ, ತುರ್ತು ಸೇವೆಗೆ ಆಂಬ್ಯುಲೆನ್ಸ್ ಬಳಕೆ
- ಪಾತ್ರೆ ಸಾಗುವ ಮಾರ್ಗದುದ್ದಕ್ಕೂ ಅಡೆತಡೆ ಬರದಂತೆ ನೋಡಿಕೊಳ್ಳಲು ಯುವಮೋರ್ಚಾ ತಂಡ
- ಮುಡಾ ಹಾಗೂ ವಾಲ್ಮೀಕಿ ನಿಗಮದಲ್ಲಿ ನಡೆದ ಹಗರಣದ ಬಗ್ಗೆ ಜನರಿಗೆ ಮಾಹಿತಿ ನೀಡಲು ವ್ಯವಸ್ಥೆ

ಹಗರಣಗಳು ಹೂರಣ, ಸಿಎಂ ಶಾಮೀಲು ಕಾರಣ

ಬೆಂಗಳೂರು: ಸರ್ಕಾರದ ಹಗರಣಗಳ ವಿರುದ್ಧ ಜನಜಾಗೃತಿ ಮೂಡಿಸಲು ಹಾಗೂ ಪ್ರಧಾನ ಪ್ರತಿಪಕ್ಷವಾಗಿ ಜವಾಬ್ದಾರಿ ನಿರ್ವಹಿಸುವ ಪ್ರಯತ್ನದ ಭಾಗವಾಗಿ ನಡೆದಿರುವ ಮೈಸೂರು ಚಲೋ ಪಾದಯಾತ್ರೆ ನಿರೀಕ್ಷೆಗೂ ಮೀರಿ ಯಶಸ್ಸು ಕಂಡಿದೆ.

ಮುಡಾ ವಿಚಾರದಲ್ಲಿ ಮೈಸೂರಿನಲ್ಲಿ ಹೋರಾಟ ನಡೆಸಲು ಹೊರಟುನಿಂತ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಯಾವಾಗ ರಾಜ್ಯ ಸರ್ಕಾರ ಬೆಂಗಳೂರಿನಲ್ಲೇ ತಡೆದು ಹೋರಾಟ ಹತ್ತಿಕ್ಕಲು ಮುಂದಾಯಿತೋ ಆಗಲೇ ಹಗರಣದ ಬಗೆಗಿನ ಅನುಮಾನ ಇನ್ನಷ್ಟು ದೃಢಪಟ್ಟಿದ್ದಲ್ಲದೇ ಹೋರಾಟ ತೀವ್ರಗೊಳ್ಳುವುದಕ್ಕೂ ಕಾರಣವಾಯಿತು.

ನಮ್ಮ ಹೋರಾಟ ಇಲ್ಲಿಗೆ ನಿಲ್ಲಬಾರದು, ತಾರ್ಕಿಕ ಅಂತ್ಯ ಕಾಣಿಸಲೇಬೇಕೆಂದು ಸಂಕಲ್ಪತೊಟ್ಟ ಬಿ.ವೈ.ವಿಜಯೇಂದ್ರ, ಮಿತ್ರ ಪಕ್ಷ ಜೆಡಿಎಸ್ ಜತೆಗೂಡಿಯೇ ಹೋರಾಟದ ರೂಪುರೇಷೆ ಅಂತಿಮಗೊಳಿಸಿದರು. ಇದಕ್ಕೂ ಮುನ್ನ ವಿಧಾನ ಮಂಡಲ ಅಧಿವೇಶನದಲ್ಲೂ ಸರ್ಕಾರ ಮುಡಾ ಹಗರಣದ ಬಗ್ಗೆ ಚರ್ಚೆಗೆ ಅವಕಾಶ ನಿರಾಕರಿಸಿದ್ದು, ಚಳವಳಿ ಕಿಚ್ಚು ಹೊತ್ತಿಸಿತು.

ಅನಿರೀಕ್ಷಿತವಾಗಿ ಎದುರಾದ ಸಂದರ್ಭದಲ್ಲಿ ನಾಯಕತ್ವ ತೆಗೆದುಕೊಂಡ ಬಿ.ವೈ. ವಿಜಯೇಂದ್ರ, ವರಿಷ್ಠರಿಗೂ ಮನವರಿಕೆ ಮಾಡಿಕೊಟ್ಟು ಇತ್ತ ರಾಜ್ಯದ ಮುಖಂಡರು ಹಾಗೂ ಕಾರ್ಯಕರ್ತರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆ ಕಾರ್ಯಗತ ಗೊಳಿಸಿದರು.

ನಿರಂತರ ಹೋರಾಟ: ಬರಗಾಲ ನಿರ್ವಹಣೆ ವೈಲ್ಯ, ಅಭಿವೃದ್ಧಿ ಶೂನ್ಯ, ಬೆಲೆಗಳ ಏರಿಕೆ ವಿರುದ್ಧ ಕಾಂಗ್ರೆಸ್ ಸರ್ಕಾರಕ್ಕೆ ಎಚ್ಚರಿಕೆ ಗಂಟೆ ಬಾರಿಸಲು ಬಿಜೆಪಿ ಒಂದಿಲ್ಲೊಂದು ಚಳವಳಿ ನಡೆಸುತ್ತಲೇ ಬಂದಿದೆ. ಮೊದಲ ಆರು ತಿಂಗಳು ಅವಕಾಶ ಕೊಡಬೇಕು ಎಂದು ಪ್ರತಿಪಕ್ಷ ಬಯಸಿತ್ತು. ಆದರೆ ಕಾಂಗ್ರೆಸ್ ಪಕ್ಷ ಸ್ವಯಂ ಘೋಷಣೆಯಂತೆ ಅಧಿಕಾರಕ್ಕೆ ಬಂದ ತಕ್ಷಣ ಗ್ಯಾರಂಟಿಗಳನ್ನು ಜಾರಿಗೆ ತರಲಿಲ್ಲ. ಕೊಟ್ಟ ಮಾತಿನಂತೆ ನಡೆದುಕೊಳ್ಳುವಂತೆ ಹೇಳುವುದಕ್ಕೂ ಹೋರಾಟ ಮಾಡಬೇಕಾಯಿತು. ಒತ್ತಡಕ್ಕೆ ಮಣಿದ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳನ್ನು ಜಾರಿಗೊಳಿಸಿತು.

ಐದು ಗ್ಯಾರಂಟಿಗಳ ಹೆಸರಿನಲ್ಲಿ ಅಭಿವೃದ್ಧಿ ಕಡೆಗಣಿಸಿದ್ದರ ವಿರುದ್ಧ ಪ್ರತಿಪಕ್ಷ ಧ್ವನಿ ಎತ್ತಿದರೆ, ಆಡಳಿತ ಪಕ್ಷದ ಶಾಸಕರೇ ಸಿಡಿದೆದ್ದು ಸರ್ಕಾರಕ್ಕೆ ಮುಜುಗರ ತಂದೊಡ್ಡಿದರು. ಸರ್ಕಾರಿ ನೌಕರರ ವರ್ಗಾವಣೆಯು ದಂಧೆಗೆ ತಿರುಗಿದ್ದನ್ನೂ ಪ್ರಶ್ನಿಸಲಾಯಿತು. ಆಡಳಿತ ಹದಗೆಟ್ಟು, ಜನರು ರೋಸಿ ಹೋದದ್ದೂ ಲೋಕಸಭೆ ಚುನಾವಣೆ ಲಿತಾಂಶದಲ್ಲಿ ಬಿಂಬಿತವಾಯಿತು.

ಹಗರಣಗಳ ಹೆಬ್ಬಾಗಿಲು: ಅಲ್ಪಾವಧಿಯಲ್ಲಿ ಜನರ ವಿಶ್ವಾಸ ಕಳೆದುಕೊಂಡಿದ್ದಕ್ಕೆ ಕಲಿಯುವ ಬದಲು 'ಸಾಧ್ಯವಾದಷ್ಟು ಬಾಚಿಕೊ' ಎನ್ನುವ ಅಘೋಷಿತ ಸೂಚನೆ ಪರಿಣಾಮ ಹಗರಣಗಳ ಹೆಬ್ಬಾಗಿಲು ತೆರೆದು ಬಿಟ್ಟಿದೆ. ಪರಿಶಿಷ್ಟ ಜಾತಿ, ಪಂಗಡಗಳ ಉಪ ಯೋಜನೆ ಅನುದಾನ ಅನ್ಯ ಉದ್ದೇಶಕ್ಕೆ ಬಳಸಿಕೊಂಡು ಪರಿಶಿಷ್ಟ ಸಮುದಾಯಗಳಿಗೆ ವಂಚಿಸಿತು. ವಾಲ್ಮೀಕಿ ನಿಗಮ ಮತ್ತು ಮುಡಾ ಅಕ್ರಮದ ವಿರುದ್ಧ ಕೈಗೆತ್ತಿಕೊಂಡ ಪ್ರತಿಭಟನೆಯನ್ನು ಪೊಲೀಸ್ ಬಲ ಬಳಸಿ ಹತ್ತಿಕ್ಕಲು ಪ್ರಯತ್ನಿಸಿತು.

ಒಂದೆಡೆ ಚಳವಳಿಗೆ ತಡೆ, ಮತ್ತೊಂದೆಡೆ ಸರ್ಕಾರದ ನಡವಳಿಕೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಪಲಾಯನವು ಭ್ರಷ್ಟಾಚಾರದ ವಿರುದ್ಧ ಸೆಡ್ಡು ಹೊಡೆಯಲು ಹುರಿದುಂಬಿಸಿತು. ಮಳೆಗಾಲದಲ್ಲೂ 130 ಕಿ.ಮೀ. ದೂರ ಅಂತರದ 'ಮೈಸೂರು ಚಲೋ ಪಾದಯಾತ್ರೆ'ಗೆ ಸರ್ಕಾರದ ಹಗರಣಗಳು ಹೂರಣ, ಮುಖ್ಯಮಂತ್ರಿ ಸಿದ್ದರಾಮಯ್ಯ ಶಾಮೀಲು ಕಾರಣ.